Mr. SPEAKER.—He has only raised the point. I am not allowing a discussion. This is a point to be discussed with and settled by the Government itself. It is not my province. After all, in this House there is a practice that members can make representations after question hour.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನಾಳೆಯ ದಿವಸ ಈ ನಾಡಹಬ್ಬವನ್ನು ಆಚರಿಸುವದಕ್ಕಾಗಿ ರಾಜ್ಯಕ್ಕೆಲ್ಲಾ ನಾಳೆ ರಜಾ ಕೊಡಬೇಕೆಂದು ತಮ್ಮ ಮೂಲಕ ಸಭಾನಾಯಕರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಶಾಸನ ಸಭೆಗೆ ಅಷ್ಟೇ ರಜಾ ಕೊಡಬೇಕೋ ಅಥವಾ ಎಲ್ಲಾ ಇಲಾಖೆಗಳಿಗೂ ನಾಳೆ ರಜಾ ಕೊಡಬೇಕೆಂದು ಹೇಳುತ್ತೀರೊ ?

ಶ್ರೀ ಜಿ. ಎಸ್. ಬೊಮ್ಮೇಗೌಡ.—ಎಲ್ಲಾ ಇಲಾಖೆಗಳಿಗೂ ರಜಾ ಕೊಡಬೇಕು ; ಮತ್ತು ಶಾಸನ ಸಭೆಗೂ ಕೂಡ ರಜಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ಸಭೆಗೆ ರಜಾ ಕೊಡಬೇಕು ಎಂಬುದನ್ನು ನಾನು ಪರಿಶೀಲಿಸ ಬಹುದು. ಆದರೆ ರಾಜ್ಯಕ್ಕೆಲ್ಲಾ ರಜಾ ಕೊಡಬೇಕೆಂಬುದು ನನಗೆ ಸಂಬಂಧಪಟ್ಟದ್ದಾಗಿರುವದಿಲ್ಲ. ಅದನ್ನು ಸರ್ಕಾರದವರು ವಿಚಾರ ಮಾಡಬೇಕಾಗುವದು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಶ್ರೀಮಾನ್ ಮಹಾರಾಜರವರ ಬಗ್ಗೆ ನಮಗೆಲ್ಲಾ ತುಂಬ ಗೌರವ ಇದೆ. ಅವರು ಈಗ ನಮ್ಮ ರಾಜ್ಯದ ಗವರ್ನರರಾಗಿದ್ದಾರೆ. ಗವರ್ನರವರ ಹುಟ್ಟಿದ ಹಬ್ಬಕ್ಕೋಸ್ಕರ ರಜಾ ಕೊಡುವುದು ಸೂಕ್ತವಾಗುವುದಿಲ್ಲ. ಒಂದು ರಾಜ್ಯದಲ್ಲಿ ಗವರ್ನರರ ಹುಟ್ಟಿದ ಹಬ್ಬದ ಸಲುವಾಗಿ ರಜಾ ಕೊಟ್ಟರೆ ಅದರಂತೆಯೇ ಎಲ್ಲಾ ಕಡೆಗೂ ಕೊಡಬೇಕಾಗುತ್ತದೆ. ಬಹುಶಃ ನಾಳೆಯ ದಿವಸ ರಜಾ ತೆಗೆದುಕೊಂಡು ಇಷ್ಟೊಂದು ಜನ ಕೆಲಸ ಮಾಡದೇ ಇದ್ದರೆ ಗವರ್ನರರಿಗೇ ಅಸಮಾಧಾನವಾದೀತು ಎಂದು ಅನ್ನಿಸುತ್ತದೆ. ಯಾಕೆಂದರೆ ಅವರು ಕರ್ತವ್ಯನಿಷ್ಠರು. ನಾಳೆಯ ದಿವಸ ರಜಾ ಕೊಡುವುದು ಸೂಕ್ತವಾಗಲಾರದೆಂದು ಸರ್ಕಾರದ ಅಭಿಪ್ರಾಯವಾಗಿದೆ.

Sri J. H. SHAMSUDDIN.—I rise to support all the three Demands before the House. In doing so, I shall try to make certain suggestions for the consideration of Government.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಒಬ್ಬ ಸದಸ್ಯರು ಭಾಷಣವನ್ನು ಪ್ರಾರಂಭಿಸಿ ಇಷ್ಟು ದೂರ ಹೋಗಿರುವಾಗ ಮಧ್ಯದಲ್ಲಿ ಇನ್ನೊಬ್ಬ ಸದಸ್ಯರು ಮಾತನಾಡುವುದನ್ನು ಪ್ರಾರಂಭಿಸಬಹುದೇ ?

ಅಧ್ಯಕ್ಷರು.—ಶ್ರೀ ಕೆಂಚಪ್ಪನವರು ಕ್ಯಾಲೆಂಡರ ಬದಲುಮಾಡುವ ವಿಚಾರದಲ್ಲಿ ಮಾತನಾಡುತ್ತಿದ್ದರೆಂದು ನಾನು ತಿಳಿದುಕೊಂಡಿದ್ದೆನು. ಡಿಮಾಂಡ್ಸ್ ಮೇಲೆ ಭಾಷಣ ಮಾಡಲು ಅವರಿಗೆ ನಾನು ಹೇಳಲಿಲ್ಲ. ಇಂದು ಶ್ರೀ ಶಂಷುದ್ದೀನರು ಮೊದಲು ಮಾತನಾಡಬೇಕೆಂದು ನಿನ್ನೆಯ ದಿವಸವೇ ನಾನು ಹೇಳಿದ್ದೇನೆ.

BUDGET FOR 1957-58—DEMANDS FOR GRANTS

No. 15-Administration of Justices, No. 16-Jails and Convicts Settlements, No. 17-Police.

(Debate continued.)

Sri J. H. SHAMSUDDIN (Honawar).—Sri, I rise to support the Demands before the House and while doing so, I make certain suggestions for the consideration of the Government. Now, Sir, I feel that so far as all the three Demands are concerned, they are not opposed by the Opposition even though they tried to oppose it. The first Demand relates to "27 Administration of Justice". None of the Opposition Members are opposed to this Demand. Everybody directly or indirectly suggested that the Demands may be voted. Of course, there was vehement opposition from Sri Puttaramaiah that he cannot vote for the Police Demand. But I think he did not mean that because when we think that administration of Justice is essential, then an important element in the administration is dispensation of criminal justice and no criminal justice can be dispensed with without the aid of the Police. Therefore, he agrees to the necessity of administration of Justice through criminal courts, and he indirectly supports and feels the necessity of the police force to bring these culprits to book before the courts. Then the second Demand regarding "Jails and Convict Settlements" is also linked up with the administration of Justice. When a judge pronounces a judgment upon convicts, they ought to be properly accommodated in the respective jails and settlements. Therefore, the sum total of the speeches that we have heard yesterday from the Opposition made an impression on me that they all indirectly agree to these Demands and partly directly also. So, I felt, when I listened to the speeches with the rapt attention that they deserved, that they were complaining or rather they were giving an impression that it was a case of not something being rotten

(SRI J. H. SHAMSUDDIN)

in the State of Denmark but everything being rotten in the State of Denmark. But I felt that they were even referring to the past and blaming the Government for the bad state of affairs that obtained for the last several years. I have gathered that impression because they were entering into the past and if that is so, I think it is unjust on the part of this House to blame the present Government for the unsatisfactory state of affairs that prevailed before the recent regime came into office. This is about the criticisms so far these Demands are concerned.

Now, Sir, I wish to examine the Demands from two important points of view. One is from the financial consideration and second is from the administrative point of view. Now from the financial consideration. I feel there is a little steep rise over our estimates so far as the expenditure is concerned in all the three Departments. Therefore, Sir, I will draw the attention of the Hon'ble Minister through you to the Budget Estimates on page 62. That refers to 27 Administration of Justice. We have got here, Sir, a Demand for Rs. 78 lakhs. If we go to the next figure, Sir, there is an indication of what was required for the first five months, that is before the new House was constituted, and it is Rs. 26 lakhs. It is a question of simple mathematics and we can find out what is 2½ times Rs. 26 lakhs required for 5 months; but here I find that Rs. 78 lakhs will be more than three times the amount provided for 5 months and there is no sufficient explanation for this steep rise in the Demand. So far as this particular Demand is concerned, there are two parts. One is charged, which is non-votable and the other is votable. I can understand that the charged demand may go on increasing or still it may increase because it refers to the pay of High Court Judges. We know, Sir, that there has been a complaint throughout the country as well as in this House that the accumulation of work in High Court is such that more additional Judges should be appointed. Therefore, the Demand may go on increasing. Of course, I was rather feeling that the outsider might say that we were suffering from a mania of High Court in this House since that question was being raised every day. Therefore, I am not going into the detail so that I may not be included in the list of those who are afflicted by that malady. I know at present 10,000 cases are pending but the present strength of our High Court Judges is five. The Hon'ble Chief Minister told us that he was trying to get ten Judges or a little less than that number. Even that number may not be sufficient to cope with the work because I know in Bombay Court there are about 10,000 cases and there are 18 to 10 Judges. Therefore, the Demand, so far as the non-voted portion is concerned may go on increasing. I would like to know what is the reason for the excessive increase in the Demand so far as District and other courts are concerned. This is so far as Administration of Justice is concerned.

The other Demand refers to Jails and Convict Settlements. For five months, the figure comes to about Rs. 14 lakhs. Now, it is Rs. 37 lakhs. That is about three times, more than two and a half times.

Then I come to Police. There also, the same increase can be seen. Formerly Rs. 1 crore and odd had been provided; now it is Rs. 3 crores; that is about three times the amount which was asked 5 months back. This is so far as direct Demands are concerned. There are indirect demands for these three Departments. There is also increase in the indirect demands. We have to take all the demands relating to particular departments together, whatever might be the particular heads to which they may relate. I wish to draw the attention of the House to the Head under "50 Civil Works". There are a number of Demands under 50 Civil Works which relate to Police and Administration of Justice and other Heads. Of course, they belong to construction of Houses for Police Officers. They should all be included under the Police Demand. There is also an increase shown there. So, in fact, while the ostensible Demand under Police is for Rs. 3 crores, the real demand will be more than that. So far

as Police is concerned, there is a demand for about Rs. 8 lakhs under 50. Civil Works. Under "81. Capital Account of Civil Works outside the Revenue Account", there is demand under "Police" for about a few lakhs. Therefore, Sir, there is increase in the Demand under this Head. This is the one point on which I want an explanation from the Government.

3-30 P.M.

I would like Government should give an explanation for this increase. I am looking at this Demand from the financial point of view in another aspect. We know people think that we have been caught in a wave of taxation and therefore we are bringing taxation measures, but we can tell them that we are also in the midst of economy drive. When the Demands are made, Government should see that possible economies are effected. In this particular case I want to make a suggestion. So far as "27. Administration of Justice" is concerned, yesterdy I heard from my friend Sri Kothawala that Government had appointed three Assistant Advocates-General and they feel that three more may be appointed. But what I feel is that the previous appointments are also unnecessary. Because I am told that the present Advocate-General rarely comes to the court. He has got a junior in his office and he sends him to the court. That is a very unhealthy practice. He is handling cases without authority and in some cases there is miscarriage of justice on account of this malpractice. I think Government should take note of it and if the Advocate-General does not find time or if he thinks that it is not convenient or he is too busy, it is better for Government to ask him to resign. I can give an instance.

Sri V. P. DEENADAYALU NAIDU (Cubbonpet).—On a point of order. Is my friend talking on personal knowledge or on mere information ? Is he going to take the responsibility for the statement that he makes ?

Mr. SPEAKER—Normally when an Hon'ble Member makes certain remarks, it must be taken that he does it on his personal knowledge or according to the best of his beliefs, but in the particular case, since Hon'ble Member Sri Deenadayalu raises a point of order, which is not really a point of order, I would like to know from Hon'ble Member Sri Shamsuddin whether he makes the remarks on personal knowledge or according to the best of his beliefs.

Sri J. H. SHAMSUDDIN.—I made the remarks according to the best of my belief and after due enquiries and I know the responsibility for this statement. I can prove it if it comes to that ; there are records to show that. I can give an instance of this nature. A similar case happened in U.P. A government law officer rarely appeared in court. He was paid by Government. Naturally, the present Home Minister of the Government of India who was the then Chief Minister of U.P., Hon'ble Sir Pant, boldly wrote to the officer concerned: 'If you have no time, please send in resignation.' I have no animus against the man concerned. He may be competent ; he may be all right, but Government money is paid to him. I am making a suggestion in that direction. If a junior can handle a case in the High Court; let the junior do it and let the junior be appointed. Naturally then Government will be saving money, spending less money than for a senior Advocate-General. We must see that a drive for economy is also made. In that particular case—I am referring to the Administration of Justice,—I can suggest one important thing that justice should he made cheaper and one of the ways to make justice cheaper is, we can improve the Village Panchayet Act and give them civil and criminal jurisdiction to try petty cases. Such an experiment has been tried in Bombay. What are called 'Nyaya Panchayats' were constituted and petty cases were tried by them and thereby we can minimise the congestion in criminal courts and reduce the number of criminal courts, if necessary. That is one way of effecting economy and justice will be cheaper because it will be at the door of the villager. After all, petty quarrels take place in a fit of emotion, and the man runs to the court. He can as well come to the committee

(SRI J. H. SHAMSUDDIN.)

of village elders and have the matter settled amicably.

Sri Narasimhan was talking about Kerala experiment in giving free legal aid. There are two ways of doing that: one is the voluntary way and the other the Governmental way. The voluntary way is to organise free legal aid society. There is such a society existing in the Bombay State. A number of advocates got themselves enrolled to it in the Bombay State. The Bombay Government had appointed a committee to consider ways and means of organising free legal aid and there is a good report by that committee. We can adopt the ways and means suggested in that Report and voluntarily organise free legal aid to the people. Another way of doing this is, under the Civil Procedure Code, pauper suits can be filed and justice can be given in the matter of civil disputes without court fees. In regard to criminal cases, there is also some provision. Government employ lawyers to defend the accused. Government can think of giving free aid to agriculturists if they are concerned with litigation over a question affecting their property, just like what they are doing in Bombay under the Agriculturists' Relief Act.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೆ, ನಿನ್ನೆಯಿಂದ ನ್ಯಾಯಾಡಳಿತದ ವಿಚಾರದಲ್ಲಿ ನನ್ನ ಸ್ನೇಹಿತರು ಬಹುಮಟ್ಟಿಗೆ ಅದರಲ್ಲಿರತಕ್ಕ ನ್ಯೂನತೆಗಳನ್ನು ಈ ಸಭೆಯಮುಂದಿಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಮಹಾತ್ಮಾ ಗಾಂಧಿಯವರ ಒಂದು ಆದರ್ಶ ಹೆಗ್ಗುರಿ ಏನಿತ್ತೆಂಬುದನ್ನು ಉದಹರಿಸುವುದಕ್ಕೆ ಇಷ್ಟಪಡುತ್ತೇನೆ. ಭಾರತದ ಗ್ರಾಮರಾಜ್ಯದಲ್ಲಿ ಒಂದು ರಾಮರಾಜ್ಯವನ್ನು ಸ್ಥಾಪನೆಮಾಡಿ, ಕೊನೆಗೆ ಧರ್ಮರಾಜ್ಯವನ್ನು ಸ್ಥಾಪನೆಮಾಡಬೇಕೆಂದು ಗಾಂಧಿಜಿಯವರು ಕನಸನ್ನು ಕಾಣುತ್ತಿದ್ದರು. ಇದು ಸುಮ್ಮನೆ ಕೇವಲ ಭಾಷಣಕ್ಕಾಗಿ ಆಡುವಮಾತಲ್ಲ. ನನ್ನ ಸ್ನೇಹಿತರಿಗೆ ಚೆನ್ನಾಗಿ ಮನದಟ್ಟಾಗಲಿ, ಅದರಲ್ಲಿಯೂ ಆಡಳಿತ ನಡೆಸುತ್ತಿರುವ ಸ್ನೇಹಿತರಿಗೆ ಮನದಟ್ಟಾಗಲಿ ಎಂದು ಹೇಳುತ್ತಿದ್ದೇನೆ. ಸಾಧಾರಣವಾಗಿ ನ್ಯಾಯವನ್ನು ಹಂಚಬೇಕಾದರೆ, ನಾನು ತಿಳಿದುಕೊಂಡಿರುವ ಹಾಗೆ, ಹೊರದೇಶಗಳಲ್ಲಿ, ಅದರಲ್ಲಿಯೂ ಇಂಗ್ಲೆಂಡಿನಲ್ಲಿ, ನ್ಯಾಯ ಬಡವರಿಗೆ ಹೆಚ್ಚು ಖರ್ಚಿಲ್ಲದೆ ದೊರೆಯುತ್ತದೆ. ಜೂರಿಸ್ ಪ್ರೂಡೆನ್ಸ್ ಆಧಾರದಮೇಲೆ ಹೇಳುವುದಾದರೆ, it is the accepted principle of jurisprudence that justice ought to be free and it is the responsibility of a welfare state to cater justice free of cost. ಪ್ರಸಕ್ತಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ನ್ಯಾಯವನ್ನು ನಿಜವಾಗಿ ಸುಲಭರೀತಿಯಲ್ಲಿ ಜನತೆಗೆ ಹಂಚುತ್ತಿದ್ದಾರೆಯೆ ಎನ್ನುವುದನ್ನು ನೋಡಿದರೆ, ಖಂಡಿತವಾಗಿಯೂ ಇಲ್ಲವೆಂದು ಹೇಳಬೇಕಾಗಿದೆ. ಹೀಗಿರುವಾಗ ಏಕೆ ನಾವು 78 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇವರಿಗೆ ಕೊಡಬೇಕು, ಏಕೆ ಈ ಡಿಮ್ಯಾಂಡಿಗೆ ಓಟು ಮಾಡಬೇಕೆಂಬ ಶಂಕೆ ನಮ್ಮ ಮನಸ್ಸಿಗೆ ಬರುತ್ತದೆ. ನಾನು ನಿಜವಾಗಿಯೂ ಇದಕ್ಕೆ ಓಟು ಮಾಡುವುದಕ್ಕಾಗುವುದಿಲ್ಲ, ಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಬೇಕಾಗುತ್ತದೆ. ಅಲ್ಲದೆ ಇದೇ ಸಭೆಯಲ್ಲಿ ನಾನು ಒಂದು ಪ್ರಶ್ನೆಯ ಮೂಲಕ ನಮ್ಮ ಹೈಕೋರ್ಟಿನ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ ಕೆಲವು ಸಮಾಚಾರಗಳನ್ನು ಕೇಳಿದೆ. ಹಳೆಯ ಮೈಸೂರಿನಲ್ಲಿ ನಾಲ್ಕು ಸಾವಿರ ಅಪೀಲ್ ಕೇಸುಗಳಿದ್ದವು. ಇವು ಸಾಮಾನ್ಯವಾದ ಕಾಲಪರಿಮಿತಿಯಲ್ಲಿ ತೀರ್ಮಾನವಾಗದೆ, ಜನರು ಎಷ್ಟು ಮಟ್ಟಿನ ತೊಂದರೆಗೊಳಗಾಗಿದ್ದಾರೆಂಬುದನ್ನು ಸರ್ಕಾರದವರು ಗಮನಕ್ಕೆತೆಗೆದುಕೊಳ್ಳದೆ ಲಘುವಾಗಿ, ಹಾಸ್ಯವಾಗಿ ಉತ್ತರ ಕೊಟ್ಟುದನ್ನು ನೋಡಿದರೆ, ಇದಕ್ಕೆ ನಾವು ಹಣವನ್ನು ಕೊಡಬಾರದೆಂದು ತೋರುತ್ತದೆ. ವಿಶಾಲ ಮೈಸೂರಾಯಿತು, ನಾಲ್ಕುಸಾವಿರದಿಂದ ಎಂಟು ಸಾವಿರ ಕೇಸುಗಳವರೆಗೆ ಬಂದು ಗುಡ್ಡೆಬಿದ್ದಿದೆ. ಸರಿಯಾದ ನ್ಯಾಯ ಮೂರ್ತಿಗಳನ್ನು ನೇಮಕಮಾಡಿ ಜನರಿಗೆ ನ್ಯಾಯವನ್ನು ಶೀಘ್ರದಲ್ಲಿ ದೊರಕಿಸುವುದಕ್ಕಾಗಿ ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಸಮಂಜಸವಾದ, ತೃಪ್ತಿಕರವಾದ ಉತ್ತರ ದೊರಕುತ್ತಿಲ್ಲ. ಏಕೆ ಹತ್ತಾರು ಲಕ್ಷರೂಪಾಯಿಗಳನ್ನು ಬಡ ಬೋರೇಗೌಡನ ತಲೆಯಮೇಲೆ ಹೊಡೆದು ಕೊಡಬೇಕು? ತೆರಿಗೆ ಹಾಕಿ ಬಡ ಬೋರೇಗೌಡನ ದುಡ್ಡನ್ನು ಸೆಳೆದುಕೊಂಡು ಬೇಕಾದ ಕೆಲಸಗಳಿಗೆ ಉಪಯೋಗಮಾಡುತ್ತಿರುವಾಗ ವೆಲ್‌ಫೇರ್ ಸ್ಟೇಟ್ ಸ್ಥಾಪಿಸಬೇಕೆಂದು ಹೇಳುತ್ತಿರುವಾಗ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗೆ ನ್ಯಾಯವನ್ನು ದೊರಕಿಸಿಕೊಡಿ ಎಂದು ಹೇಳಿದರೆ ಬೇಜವಾಬ್ದಾರಿಯಿಂದ ವರ್ತಿಸುತ್ತಿರುವುದು ನಿಜವಾಗಿಯೂ ಶೋಚನೀಯವಾದ ವಿಚಾರ. ಕಳೆದ ಜೂನ್ ತಿಂಗಳಿನಲ್ಲಿ 22ನೆಯ ತಾರೀಖು ಒಂದು ಮೋಷನ್ ಕಳುಹಿಸಿ ಸರ್ಕಾರಕ್ಕೆ ಏನೋ ಒಂದು ಕಷ್ಟವಿರಬಹುದು, ಅಥವಾ ಕಾರ್ಯಾಂಗದವರಿಗೆ ಅಥವಾ ನ್ಯಾಯಾಂಗದವರಿಗೆ ಒಂದು ತೊಡಕಿರಬಹುದು, ಅಥವಾ ಬೇರೆ ಏನಾದರೂ ನ್ಯಾಯಮೂರ್ತಿಗಳನ್ನು ನೇಮಕ ಮಾಡುವುದಕ್ಕೆ ತೊಂದರೆಯಿರಬಹುದು, ಆದ್ದರಿಂದ ಹಂಗಾಮಿಯಾಗಿ ಆದರೂ ಇಬ್ಬರು ಅಥವಾ ಮೂರು ಮಂದಿ ನ್ಯಾಯಮೂರ್ತಿಗಳನ್ನು ನೇಮಕಮಾಡಲು ಶಿಪಾರ್ಸು ಮಾಡೋಣ, ರಾಜ್ಯಾಂಗದಲ್ಲೂ ಅದಕ್ಕೆ ಅವಕಾಶವಿದೆ ಎಂದು ಸೂಚಿಸಿದೆ. ಆದರೆ ಆಗ ಅಧ್ಯಕ್ಷರು ಡಿಮ್ಯಾಂಡ್‌ಗಳ ಚರ್ಚೆಕಾಲದಲ್ಲಿ ಇದನ್ನು ತಿಳಿಸಲು ಅವಕಾಶವಿದೆ, ಆಗ ಮಾತನಾಡಿ ಎಂದು ಹೇಳಿದರು; ಅದರ ಬಗ್ಗೆ ಎಂಡಾರ್ಸ್‌ಮೆಂಟ್ ಸಹ ಬಂದಿದೆ. ಹೀಗಿರುವಾಗ—ನಮ್ಮ ಮಿತ್ರರು delay is denial of justice ಎಂದು ಹೇಳಿದ್ದಾರೆ—ವರ್ಷೇ ವರ್ಷೇ ಅಧಿವೇಶನ ಸೇರಿದಾಗಲೆಲ್ಲಾ ಈ ಸಭೆಯಲ್ಲಿ ಇಂಥ ವಿಚಾರಗಳು ಚರ್ಚೆಯಾದಾಗ ಯಾವುದೋ ಒಂದು ಜವಾಬು ಹೇಳಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಕೊಳ್ಳದೆ, 12 ದಿವಸ ಅಥವಾ 15 ದಿವಸ ಅಥವಾ 22 ದಿವಸ ಸಭೆ ಸೇರಿ ಚರ್ಚೆಮಾಡಿ ಕೊನೆಗೆ ಬಹುಮತವಿರುವ ಪಕ್ಷದಿಂದ ಓಟು ಪಡೆದು ಸರ್ಕಾರ ಮಾಡುವುದಕ್ಕೆ ಜನರ ಬೆಂಬಲವಿದೆಯೆಂದು ಹೇಳುವುದು ನಿಜವಾಗಿಯೂ ಕೂಡ ಹೇಯವಾದ ವಿಚಾರ ಎಂದು ಹೇಳಬೇಕಾಗಿದೆ. ಇದು ಬಹಳ ಮುಖ್ಯವಾದ ವಿಚಾರ. ಅದರಲ್ಲೂ ನ್ಯಾಯದೊತೆಯಲು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿಲ್ಲವೆಂದು

ಘಂಟಾ ಘೋಷವಾಗಿ ಈ ಸಭೆಯಲ್ಲಿ ಹೇಳಬೇಕಾಗಿದೆ. ಮಲ್ಲಪ್ಪ ಸಮಿತಿಗಾಗಿ ಎಷ್ಟು ರೂಪಾಯಿಗಳು ಖರ್ಚಾಯಿತೆಂಬುದಕ್ಕೆ ಲೆಕ್ಕವಿದೆ; ಅದೆಲ್ಲಾ ಬಡ ಬೋರೇಗೌಡನ ದುಡ್ಡು. ವಾರಾಟ ತೆರಿಗೆ, ವ್ಯವಸಾಯದ ಉತ್ಪನ್ನಗಳ ಮೇಲೆ ತೆರಿಗೆ, ಹೀಗೆ ನಾನಾ ತೆರಿಗೆಗಳನ್ನು ಬಡ ರೈತನಮೇಲೆ ಹಾಕಿ, ಒಂದು ಕಡೆ ಕೇಂದ್ರೀಕೃತವಮಾಡಿ ಸರ್ಕಾರಕ್ಕೆ ಬಹುಮತದ ಬೆಂಬಲವಿದೆಯೆಂಬ ಒಂದು ನೆಪದಿಂದ ಬೋರೇಗೌಡನ ಹಣವನ್ನು ಸೆಳೆಯುತ್ತಿದ್ದೀರಿ ಎಂದು ಹೇಳಬೇಕಾಗಿದೆ. 1952-53ನೆಯ ಸಾಲಿನಲ್ಲಿ ಆಯವ್ಯಯದಮೇಲೆ ನಮ್ಮ ಮಾನ್ಯ ಮಿತ್ರರು ಚರ್ಚೆಮಾಡಿದಾಗ, ನ್ಯಾಯಾಂಗದಲ್ಲಿರುವ ಅನೇಕ ಕಷ್ಟ ಸುಖಗಳನ್ನು ಹೇಳಿದಾಗ, ಆಗಿದ್ದ ಮಂತ್ರಿಗಳು ಪರಿಶೀಲಿಸುತ್ತೇವೆ ಎಂದು ಹೇಳಿರುವುದು. ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿರುವುದು, ಅಧಿಕೃತವರದಿಯಲ್ಲಿ ವ್ಯಕ್ತವಾಗುತ್ತದೆ. ಆದರೆ ಅದನ್ನು ಎಷ್ಟರಮಟ್ಟಿಗೆ ಕಾರ್ಯಗತಮಾಡಿದ್ದಾರೆಂಬುದನ್ನು ನೋಡಬೇಕು. ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಎಂದಿರುತ್ತದೆ. ಅದು ವಾರಕ್ಕೆ ಆರು ದಿವಸಗಳು ಕೆಲಸ ಮಾಡುತ್ತದೆ; ಎರಡು ದಿವಸ ಕ್ರಿಮಿನಲ್ ಕೆಲಸಗಳು, ಒಂದು ದಿವಸ ಜಾರಿ ಕೆಲಸ, ಉಳಿದ ಮೂರು ದಿವಸ ಸಿವಿಲ್ ವ್ಯವಹಾರ ನೋಡಬೇಕು, ಅಲ್ಲದೆ ಸಂಸ್ಥಾನಕ್ಕೆ ಸಂಬಂಧಪಟ್ಟ ವಿಚಾರ ವ್ಯವಹಾರಕ್ಕೆ ಸಂಬಂಧಪಟ್ಟ ವಿಚಾರ ಕೂಡ ನೋಡಬೇಕು. ಹಾಗಿರುವಾಗ ಒಬ್ಬ ಮನುಷ್ಯನ ಮೇಲೆ ಇಷ್ಟೊಂದು ಹೊರೆ ಹೊರಿಸಿದರೆ ನ್ಯಾಯ ಶೀಘ್ರವಾಗಿ ದೊರೆಯುವುದಿಲ್ಲ. ಆದ್ದರಿಂದ ಈಗಲಾದರೂ ಮನಸ್ಸುಮಾಡಿ ಮುನ್ಸೀಫ ಮ್ಯಾಜಿಸ್ಟ್ರೇಟ್ ಕೋರ್ಟಿರುವ ಕಡೆ ಸಿವಿಲ್ ವ್ಯವಹಾರ ತೀರ್ಮಾನವಮಾಡುವುದಕ್ಕೆ ಒಬ್ಬ ಮುನ್ಸೀಫರನ್ನೂ ಕ್ರಿಮಿನಲ್ ವ್ಯವಹಾರ ತೀರ್ಮಾನಿಸಲು ಬೇರೊಬ್ಬ ಸ್ಪೆಷಲ್ ಮ್ಯಾಜಿಸ್ಟ್ರೇಟರನ್ನೂ ನೇಮಕಮಾಡಿದರೆ ಆದಷ್ಟು ಮಟ್ಟಿಗೆ ಶೀಘ್ರದಲ್ಲಿ ನ್ಯಾಯ ಸಿಕ್ಕುತ್ತದೆಂದು ಹೇಳಬಹುದು. ನನ್ನ ಕ್ಷೇತ್ರವಾದ ಹೊಳೇನರಸೀಪುರದಲ್ಲಿ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿದೆ. ಕೋರ್ಟುಗಳ ರೀ-ಡಿಸ್ಟ್ರಿಬ್ಯೂಷನ್ ಸಮಿತಿ ನಮ್ಮ ಕಡೆ ಬಂದಾಗ "ನಮ್ಮ ಕಡೆ ವ್ಯವಹಾರ ಜಾಸ್ತಿ, ನ್ಯಾಯ ಜಾಗ್ರತೆ ಸರಿಯಾಗಿ ಸಿಕ್ಕುತ್ತಿಲ್ಲ. ಜನರಿಗೆ ಬಹಳ ತೊಂದರೆಯಿದೆ, ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಹೊಳೇನರಸೀಪುರಕ್ಕೆ ಕೊಡಿ" ಎಂದು ಸಮಿತಿಯವರಲ್ಲಿ ಮನವಿಮಾಡಿದೆವು. ಆ ಸಮಿತಿಯವರು ಆ ವಿಚಾರದಲ್ಲಿ ನಿಜವಾಗಿಯೂ ಸರ್ಕಾರಕ್ಕೆ ಶಿಫಾರ್ಸು ಮಾಡುವುದಾಗಿ ಹೇಳಿದರು. ಆದಾದ ಮೇಲೆ ಮೊನ್ನೆ ನಿವೃತ್ತರಾದ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀ ವೆಂಕಟರಾಮಯ್ಯನವರು ಆ ಕಡೆ ಬಂದಾಗ ಅವರಲ್ಲಿ ಸಹ ಅರಿಕೆಮಾಡಿದಾಗ ಅವರೂ ಕೂಡ ಭರವಸೆ ಕೊಟ್ಟಿದ್ದರು. ಇಷ್ಟಾದರೂ ಇದುವರೆಗೂ ಏನೂ ಆಗಿರುವುದಿಲ್ಲ. ಹೊಳೇನರಸೀಪುರದ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ದಿನೇ ದಿನೇ ಕೇಸುಗಳು ಹೆಚ್ಚುತ್ತಿವೆ. ಆದ್ದರಿಂದ ಅಲ್ಲಿರುವ ಒಬ್ಬ ಮ್ಯಾಜಿಸ್ಟ್ರೇಟರು ಕೇಸುಗಳನ್ನು ಸಕಾಲದಲ್ಲಿ ತೀರ್ಮಾನ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈಗ ಕೃಷ್ಣರಾಜನಗರದ ಕೋರ್ಟನ್ನು ಹುಣಸೂರಿಗೆ ವರ್ಗಾಯಿಸಿದ್ದಾರೆ. ಅದರಿಂದ ತೊಂದರೆಯಾಗಿದೆ. ಹೊಳೇನರಸೀಪುರಕ್ಕೆ ಒಂದು ಮ್ಯಾಜಿಸ್ಟ್ರೇಟ್ ಕೋರ್ಟನ್ನು ಮಂಜೂರುಮಾಡಿ ಉಂಟಾಗಿರುವ ತೊಂದರೆಯನ್ನು ನಿವಾರಣೆ ಮಾಡಬೇಕು ಎಂದು ಹೊಳೇನರಸೀಪುರ, ಸಾಲಿಗ್ರಾಮ ಮತ್ತು ಇತರ ಸುತ್ತುಮುತ್ತಿನ ಗ್ರಾಮಗಳವರು ಅರಿಕೆಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಆ ರೀತಿ ಮಾಡಿ ಜನರಿಗೆ ನ್ಯಾಯ ಸರಿಯಾಗಿ ಶೀಘ್ರವಾಗಿ ಸಿಕ್ಕುವಂತೆ ಅವಕಾಶ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಅದೂ ಅಲ್ಲದೆ ಕೋರ್ಟಿಗೆ ಕಟ್ಟಡದ ಅಭಾವವಿದ್ದರೆ ಅಲ್ಲಿರುವ ಟೌನ್‌ಹಾಲನ್ನು ಹಂಗಾಮಿಯಾಗಿ ಉಪಯೋಗಿಸಿಕೊಳ್ಳಬಹುದೆಂದು ಸೂಚಿಸಿದ್ದರೂ ಕೂಡ ಆ ಕಡೆ ಇನ್ನೂ ಗಮನಕೊಟ್ಟಿಲ್ಲ. ಮಾನ್ಯ ಮಿತ್ರರಾದ ಶ್ರೀ ಶಂಸುದ್ದೀನ್ ಅವರು ನ್ಯಾಯ ಬೇಗ ಸಿಕ್ಕಬೇಕಾದರೆ, ವೆಲ್‌ಫೇರ್ ಸ್ಟೇಟಿನ ಧ್ಯೇಯ ಧೋರಣೆ ಬಡವರಿಗೆ ತಿಳಿದು ಸಹಾಯವಾಗಬೇಕಾದರೆ, ಕೆಲವು ರೀತಿಯಲ್ಲಿ ಪೀಪಲ್ಸ್ ಕೋರ್ಟ್ ಅಥವಾ ಗ್ರಾಮಪಂಚಾಯಿತಿ ಕೋರ್ಟ್ ಎಂದು ವ್ಯವಸ್ಥೆಮಾಡಿ ಆ ಕೋರ್ಟುಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಎಂದು ಹೇಳಿದರು. ಹಾಗೆ ಮಾಡಿದರೆ ಸಣ್ಣ ಪುಟ್ಟ ಕೇಸುಗಳೆಲ್ಲಾ ಅಲ್ಲೇ ಹೋಗಿ ತೀರ್ಮಾನವಾಗುತ್ತವೆ, ಸರ್ಕಾರಕ್ಕೂ ಅನುಕೂಲವಾಗುತ್ತದೆ, ಖರ್ಚು ಕಡಮೆಯಾಗುತ್ತದೆ, ಒಂದೇ ಕಡೆ ಒಬ್ಬರ ಮೇಲೆ ಹೆಚ್ಚು ಹೊರೆ ಬೀಳದೆ ಜಾಗ್ರತೆ ನ್ಯಾಯವೂ ಸಿಕ್ಕುತ್ತದೆ. ಈ ವಿಷಯವನ್ನು ಪರಿಶೀಲನೆ ಮಾಡಬೇಕು.

ಕರ್ನಾಟಕದಲ್ಲಿ ಕನ್ನಡಕ್ಕೆ ಹೆಚ್ಚು ಉತ್ತೇಜನ ದೊರೆಯಬೇಕು, ಕೋರ್ಟುಗಳ ವ್ಯವಹಾರ ಆದಷ್ಟು ಬೇಗ ಕನ್ನಡದಲ್ಲೇ ಆಗಬೇಕು, ಕಾಗದಪತ್ರಗಳು ಕನ್ನಡದಲ್ಲೇ ಬರೆಯಲ್ಪಡಬೇಕು, ಬಡ ಬೋರೇಗೌಡನೂ ಕೂಡ ಅದನ್ನು ಓದಿ ತಿಳಿದುಕೊಳ್ಳುವಂತಿರಬೇಕು. ಹೀಗಾದರೆ ನೇರವಾಗಿ ತಾವೇ ಓದಿ ಅನುಭವ ಪಡೆಯುವುದಕ್ಕೆ ಸಾಮಾನ್ಯ ಜನರಿಗೂ ಅವಕಾಶವಾಗುತ್ತದೆ. ಆದ್ದರಿಂದ ಕೋರ್ಟುಗಳಲ್ಲಿ ಅತಿ ಜಾಗ್ರತೆಯಾಗಿ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಉಪಯೋಗಿಸುವಂತೆ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಕೋರ್ಟಿಗೆ ನ್ಯಾಯಾಧೀಶರನ್ನು ತೆಗೆದುಕೊಳ್ಳುವಾಗ ದಕ್ಷರನ್ನು, ಬುದ್ಧಿವಂತರನ್ನು, ಪ್ರವೀಣರನ್ನು ಅನುಭವಿಗಳನ್ನು ತೆಗೆದುಕೊಳ್ಳುತ್ತಿಲ್ಲ. ಯಾವುದೋ ಕಂದಾಚಾರದ ಆಧಾರದ ಮೇಲೆ ಬೇಕಾದವರನ್ನು ಆರಿಸಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ. ಇದಕ್ಕಾಗಿ ಒಂದು ಅಪಾಯಿಂಟ್‌ಮೆಂಟ್ ಬೋರ್ಡನ್ನು ಮಾಡಿ ಆ ಬೋರ್ಡಿನವರು ದಕ್ಷರಾದವರನ್ನು ಆರಿಸಿ ನೇಮಕ ಮಾಡುವಂತೆ ಅವಕಾಶಮಾಡಿ ಕೋರ್ಟುಗಳಿಂದ ಸರಿಯಾದ ನ್ಯಾಯ ಜನರಿಗೆ ಸಿಕ್ಕುವಂತೆ ಮಾಡಲು ಪ್ರಯತ್ನ ಮಾಡಬೇಕು.

ಜೈಲಿನ ವಿಚಾರ ಹೇಳುವುದಾದರೆ, 1947ನೆಯ ಇಸವಿಗೆ ಮುಂಚೆ ಯಾವ ಸ್ಥಿತಿಗತಿಯಲ್ಲಿ ಜೈಲಿತ್ತೋ ಯಾವ ಓಬೀರಾಯನ ಕಾಲದ ಕಟ್ಟಡವಿತ್ತೋ, ಯಾವ ಕತ್ತಲೆ ಮನೆ, ಕೊಳಕು ಜಾಗ ಇತ್ತೋ, ಅದೇ ಸ್ಥಿತಿ, ಅದೇ ಜಾಗ ಅದೇ ರೀತಿಯಲ್ಲಿ ಈಗಿನ ನಾಗರಿಕ ಪ್ರದೇಶದಲ್ಲಿ ಈ ದಿವಸವೂ ಸಹ ಇದೆ 8×10 ಕಟ್ಟಡದಲ್ಲಿ 10—12 ಜನರನ್ನಿಡುತ್ತಿದ್ದಾರೆ.

Sri H. K. VEERANNA GOWDH.—Have you any experience of Jail life?

ಶ್ರೀ ವೈ. ವೀರಪ್ಪ.—ಖೈದಿಗಳು ಮತ್ತು ಅಂಡರ್ ಟ್ರಯಲ್ ಖೈದಿಗಳ ವಿಚಾರದಲ್ಲಿ . . . .

Sri H. K. VEERANNA GOWDH.—It is not a Jail. It is only a lock-up.

ಶ್ರೀ ವೈ. ವೀರಪ್ಪ.—ಪದಗಳಲ್ಲಿ ವ್ಯತ್ಯಾಸ ವಿರಬಹುದು, ಅರ್ಥ ತೆಗೆದುಕೊಂಡರೆ ಒಂದೇ ಆಗುತ್ತದೆ. ಹೊಳೆನರಸೀಪುರದ ಜೈಲೂ ಸಹ ಚೆನ್ನಾಗಿಲ್ಲ, ಊಟಕ್ಕೆ ಒಂದಾ ಮಾಡುವುದಕ್ಕೆ ಎಲ್ಲಕ್ಕೂ ಒಂದೇ ಮಡಕೆ. ಅದರ ಪಕ್ಕದಲ್ಲೇ ಮಲಗಬೇಕು. ಇದು ನಾಗರಿಕತೆಯ

(ಶ್ರೀ ವೈ. ವೀರಪ್ಪ.)

ಲಕ್ಷಣವೇ ಈಗಲಾದರೂ ಈ ಕಡೆ ಹೆಚ್ಚು ನಿಗಾಕೊಟ್ಟು ಜೈಲುಗಳ ಸುಧಾರಣೆ ಮಾಡಬೇಕು. ಜೈಲುಗಳ ವಿಚಾರದಲ್ಲಿ ಬೇಕಾದಷ್ಟು ಅವ್ಯವಸ್ಥೆಯಿದೆಯೆಂಬುದು ಗಮನಕ್ಕೆ ಬಂದಿದೆ. ನಿಜವಾಗಿಯೂ ಕೂಡ ನನ್ನ ಗಮನಕ್ಕೆ ಬಂದಿರುವ ವಿಷಯವನ್ನು ಪುಷ್ಟೀಕರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಶ್ರೀ ಎ. ಎ. ಖಾನರವರು ಪ್ರಿಸನ್ಸ್ ಇನ್ಸ್‌ಪೆಕ್ಟರ್ ಜನರಲ್ ಆಗಿದ್ದಾಗ ಸರ್ಕಾರಿ ಹಣದಲ್ಲಿ ಸುಮಾರು 50 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಅನೇಕ ಸಾಮಾನುಗಳನ್ನು ಮಾಡಿಸಿದರು, ಬೇಕಾದಷ್ಟು ಕುರ್ಚಿ ಮಾಡಿಸಿದರು.

ಅಲ್ಲಿ ಅನೇಕ ಸಾಮಾನುಗಳನ್ನು ಹರಾಜು ಮಾಡಿದರು. ಹರಾಜು ಮಾಡಿದ ವಿಚಾರದಲ್ಲಿ ಹರಾಜಿನಿಂದ ಬಂದ ದುಡ್ಡು ಸರಿಯಾದ ರೀತಿಯಲ್ಲಿ ಖಜಾನೆಗೆ ರೆಮಿಟ್ ಆಗಲಿಲ್ಲ. ಲೆಕ್ಕಪತ್ರಗಳನ್ನು ಕೊಟ್ಟಿಲ್ಲ. ಇದರಿಂದ ಅಲ್ಲಿನ ಪೋಲೀಸ್ ಆಡಳಿತದ ದಕ್ಷತೆ ಎಷ್ಟರಮಟ್ಟಿಗಿದೆ ಎಂಬುದನ್ನು ದೇಶದ ಪ್ರಜೆಗಳೇ ಗಮನಿಸಬೇಕಾದ ವಿಚಾರವಾಗಿದೆ. ಯಾವ ಆಧಾರದ ಮೇಲೆ ಆರೀತಿ ಮಾಡಿದರು, ಎಂತಹ ಕರ್ತವ್ಯಗಳನ್ನು ಮಾಡಿದ್ದಾರೆ ಎಂಬುದಕ್ಕೆ ವಿವರಗಳನ್ನು ಕೊಡಲು ನಾನು ಸಿದ್ಧನಾಗಿದ್ದೇನೆ.

Regarding the suspension of the Inspector General of Prisons Sri Thimmaraje Urs, ಯಾವ ಸಮಂಜಸವಾದ ಕಾರಣಗಳನ್ನೂ ಕೊಡದೆ suspend ಮಾಡಿದ್ದೀರಿ. ಆದರೆ ತಪ್ಪುಮಾಡಿದಂತಹವರಿಗೆ ಶಿಕ್ಷೆಗಳನ್ನು ವಿಧಿಸುವಾಗ ದಾಕ್ಷಿಣ್ಯವೇನೂ ಇಲ್ಲ. ಮೇಲ್ಮಟ್ಟದ ಅಧಿಕಾರಿ ಯಾದರೂ ತಾನೇ ಏನು? ನಿಜವಾಗಿ ಏನಾದರೂ ಇಂತಹ ವಿಷಯಗಳು ಸರ್ಕಾರದ ಗಮನಕ್ಕೆ ಬಂದರೆ, ತಪ್ಪಿತಸ್ಥರ ಮೇಲೆ ಚಾರ್ಜ್‌ಷೀಟನ್ನು ಹಾಕಬೇಕು. ನ್ಯಾಯ ದೊರಕಿಸಿ ಕೊಡಬೇಕು. ಇಲ್ಲಿಯವರೆಗೂ ಸಾರ್ವಜನಿಕರ ಗಮನಕ್ಕೆ ಎಷ್ಟೋ ಅಂಕಿಅಂಶಗಳ ವಿಚಾರ ಬಾರದೆ ಮೊಗಂ ಆಗಿರುವುದರಿಂದ, ಸರ್ಕಾರದವರು ಸರಿಯಾದ ಉತ್ತರವನ್ನು ಕೊಡಬೇಕು. ಇದರಿಂದ ಯಾವ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ಪ್ರಶ್ನೆ ಮಾಡಬೇಕಾಗಿದೆ. ಒಟ್ಟಿನಲ್ಲಿ ನನ್ನ ಸಲಹೆ ಇಷ್ಟೆ. ಪೋಲೀಸ್ ಆಡಳಿತದಲ್ಲಿ ದಾಕ್ಷಿಣ್ಯ ಬೇಡ. ನಿಜವಾಗಿ ತಪ್ಪು ಮಾಡಿದರೆ, ಅವರ ಮೇಲೆ ಚಾರ್ಜ್‌ಷೀಟ್ ಹಾಕಬೇಕೆಂದು ತೀರ್ಮಾನ ಮಾಡಬೇಕು. ಇನ್ನು ಪೋಲೀಸ್ ಶಾಖೆಯ ವಿಚಾರವಾಗಿ ಹೆಚ್ಚಿಗೆ ಹೇಳಬೇಕಾಗಿಲ್ಲ. ಗೃಹ ಮಂತ್ರಿಗಳು ಬಹಳ ದೊಡ್ಡ ಮನಸ್ಸುಮಾಡಿ ಪೋಲೀಸ್ ಆಡಳಿತವನ್ನು ದಕ್ಷತೆಯಿಂದ ನಡೆಸಬೇಕು. ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಗಳನ್ನು ಶಿರಸಾವಹಿಸಬೇಕು ಮತ್ತು ಆ ಸಲಹೆಗಳನ್ನು ಕಾರ್ಯಗತವಾಗುವಂತೆ ಜಾರಿಗೆ ತರಬೇಕು. ಒಟ್ಟಿನಲ್ಲಿ ಹೇಳುವುದಾದರೆ ಪೋಲೀಸ್ ಇಲಾಖೆಯ ಆಡಳಿತ ತೃಪ್ತಿಕರವಾಗಿಲ್ಲ. ನನ್ನ ಮಾನ್ಯ ಸ್ನೇಹಿತರು ಅಪ್ಪಣೆ ಕೊಡಿಸಿದ ಹಾಗೆ, ಪೋಲೀಸ್ ಆಡಳಿತದ ದಕ್ಷತೆ ಕಡಮೆಯಾಗಿದೆ; ದಾಕ್ಷಿಣ್ಯ ಜಾಸ್ತಿಯಾಗಿದೆ. ಯಾವುದಾದರೂ ಒಂದು ಕಂಪ್ಲೈಂಟ್ ಬಂದರೆ ಅಥವಾ ಎಲ್ಲಾದರೂ ಒಂದು ಕೇಸಾದರೆ, ಅಪಾದಿತ ಪೋಲೀಸ್ ಸ್ಟೇಷನ್ನಿಗೆ ಹೋಗಬೇಕು. ಎಷ್ಟೋ ಹೊತ್ತು ಊಟ, ತಿಂಡಿಯನ್ನು ಬಿಟ್ಟು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮನೆ ಬಾಗಿಲನ್ನು ಕಾಯಬೇಕು. ಅವರು ಆಮೇಲೆ ಏನು ಕಂಪ್ಲೇಂಟ್ ಎಂದು ವಿಚಾರಿಸುತ್ತಾರೆ. ಸರಿಯಾದ ರೀತಿಯಲ್ಲಿ ನ್ಯಾಯ ದೊರಕುತ್ತಾ ಇಲ್ಲ. ಆದ್ದರಿಂದ ಪ್ರತಿಯೊಬ್ಬ ಕಾನ್‌ಸ್ಟೇಬಲ್ ಪೋಲೀಸಿನವರು ಎಷ್ಟೆಷ್ಟು ಕೇಸುಗಳನ್ನು ಪತ್ತೆ ಹಚ್ಚಿದ್ದಾರೆ, ಎಷ್ಟೆಷ್ಟು ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ವಾರಕ್ಕೊಮ್ಮೆ ರಿವ್ಯೂ ಮಾಡಬೇಕು. ಪೆಟ್ಟಿ ಕೇಸಸ್ (Petty cases) ಇಷ್ಟು ಬರಬೇಕು ಎಂದು ಇದೆ. ಆರೀತಿ ಮಾಡದಿದ್ದರೆ, ಅದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಸಂತೆಗೆ ಹೋದ ಒಬ್ಬ ರೈತನ ಮೇಲೆ ಪೆಟ್ಟಿ ಚಾರ್ಜ್‌ಷೀಟನ್ನು ಹಾಕುವುದು, ಇನ್ನೊಬ್ಬ ಹಳ್ಳಿಗಾಡಿನ ರೈತನನ್ನು ಪ್ರಾಸಿಕ್ಯೂಷನ್ ವಿಟ್‌ನೆಸ್ ಮಾಡುವುದು—ಹೀಗೆಲ್ಲಾ ಅವರನ್ನು ಪೋಲೀಸ್ ಸ್ಟೇಷನ್‌ಗಳಿಗೆ ಕರೆದುಕೊಂಡು ಹೋಗಿ ಎಷ್ಟೋ ದಿನಗಳವರೆಗೆ ಅನ್ನವಿಲ್ಲದೆ, ಊಟವಿಲ್ಲದೆ, ಅನೇಕ ತೊಂದರೆಗಳನ್ನು ಕೊಡುವುದು—ಈಗಿನ ಪೋಲೀಸ್ ಆಡಳಿತ, ಈ ರೀತಿಯಾಗಿದೆ. ಅದಕ್ಕೋಸ್ಕರ ಸರ್ಕಾರದ ಅಧಿಕಾರಿಗಳಿಗೆ ಯಾವರೀತಿ ಭತ್ಯವನ್ನು ಕೊಡುತ್ತಿದ್ದೀರೋ ಅದೇ ರೀತಿ ಖಾಸಗೀ ಮನುಷ್ಯರಿಗೂ ಕೊಡಬೇಕು. ಆಸ್ಟ್ರೇಲಿಯಾ ಮತ್ತು ಡೆನ್‌ಮಾರ್ಕ್ ಮುಂತಾದ ಕಡೆಗಳಲ್ಲಿ ಗ್ರಾಮ ಪೋಲೀಸ್‌ನವರನ್ನು ನೇಮಕಮಾಡಿದ್ದಾರೆ. ಇದರಿಂದ ಪೋಲೀಸ್ ಆಡಳಿತ ಗ್ರಾಮಗಳಲ್ಲಿ ಬಹಳ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಆದ್ದರಿಂದ ನಮ್ಮ ದೇಶದಲ್ಲಿಯೂ ಸಹ ಎಲ್ಲಾ ಗ್ರಾಮಗಳಲ್ಲಿಯೂ ಗ್ರಾಮ ಪೋಲೀಸ್‌ನವರನ್ನು ನೇಮಿಸಬೇಕು. ಆ ದೇಶಗಳಲ್ಲಿ ಇಂತಹವರನ್ನು ನೇಮಿಸುವುದಕ್ಕೆ ಯಾವ ಯಾವ ಏರ್ಪಾಡುಗಳನ್ನು ಮಾಡಿದ್ದಾರೆಂಬುದಕ್ಕೆ ವಿವರಗಳನ್ನು ನಾನು ಕೊಡಲು ಸಿದ್ಧನಾಗಿದ್ದೇನೆ. ಆ ವಿವರಗಳ ಮೇಲೆ ನಮ್ಮ ಸರ್ಕಾರದವರು ನಮ್ಮ ದೇಶದಲ್ಲಿಯೂ ಗ್ರಾಮ ಪೋಲೀಸ್‌ನವರನ್ನು ನೇಮಕ ಮಾಡುವುದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಒಟ್ಟಿನಲ್ಲಿ ಪೋಲೀಸ್ ಇಲಾಖೆಗೆ ಒದಗಿಸಿರುವ ಮೊಬಲಗನ್ನು ನಾನು ಒಪ್ಪಲಿಕ್ಕೆ ಸಿದ್ಧನಾಗಿಲ್ಲ. ಅದು ನಿಜವಾಗಿ ಅನ್ಯಾಯ. ನ್ಯಾಯ ಶೀಘ್ರದಲ್ಲಿ ದೊರಕುತ್ತಾ ಇಲ್ಲ. ಪೋಲೀಸ್ ಶಾಖೆಯ ಆಡಳಿತ ಅಷ್ಟು ಸಮರ್ಪಕವಾಗಿಲ್ಲ ಮತ್ತು ದಕ್ಷತೆಯಿಂದ ಕೂಡಿಲ್ಲ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಮಾನ್ಯ ಅಧ್ಯಕ್ಷರೇ, ಮೈಸೂರು ರಾಜ್ಯದ ಪೋಲೀಸ್ ಬೇಡಿಕೆಗೆ ನಾನು ಬೆಂಬಲವನ್ನು ಕೊಡುತ್ತಾ ಪೋಲೀಸ್ ಆಡಳಿತದಲ್ಲಿರುವ ಕೆಲವು ಲೋಪದೋಷಗಳನ್ನು ಗೃಹಮಂತ್ರಿಗಳಿಗೆ ತಿಳಿಸಲು ಬಯಸುತ್ತೇನೆ. ಆ ಲೋಪ ದೋಷಗಳನ್ನು ಜಾಗ್ರತೆಯಾಗಿ ನಿವಾರಣೆ ಮಾಡಲು ಉಚಿತ ಸಲಹೆ ಸೂಚನೆಗಳನ್ನು ಸರ್ಕಾರದವರೇ ಕೊಟ್ಟು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಪೋಲೀಸ್ ಶಾಖೆಯಲ್ಲಿ ಸುಧಾರಣೆ ಮಾಡಲೇಬೇಕು. ಗೃಹಶಾಖೆಗಳಲ್ಲಿ ಪೋಲೀಸ್ ಶಾಖೆ ಬಹು ಮುಖ್ಯವಾದುದು. ಮುಖ್ಯತಃ ಆ ಶಾಖೆಯಲ್ಲಿರುವ ಲಂಚಕೋರತನ, ಆಡಳಿತದ ಸಡಿಲತೆಗಳನ್ನು ಪತ್ತೆ ಹಚ್ಚುವುದರಲ್ಲಿ ನಿಜವಾಗಿ ನಮ್ಮ ಗೃಹಮಂತ್ರಿಗಳು ಉತ್ತಮರು ಎಂಬುದು ಸಹಜ. ಇದು ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ತಿಳಿದಿರುವ ಅಂಶ. ಮುಂಬೈ ರಾಜ್ಯದಿಂದ ನವಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದ ಜಿಲ್ಲೆಗಳಲ್ಲಿ ಪೋಲೀಸ್ ಖಾತೆಯಲ್ಲಿ ಅನೇಕ ಲೋಪದೋಷಗಳು ನಮ್ಮ ಎದುರಿಗೆ ಕಾಣುತ್ತಿವೆ. ಅಲ್ಲಿ ಸುಧಾರಣೆ ಜಾಗ್ರತೆಯಾಗಿ ಆಗದೆ ಹೋದರೆ, ಜನಜೀವನದಲ್ಲಿ ಅನೇಕ ತೊಂದರೆಗಳುಂಟಾಗಿ ಜನರ ರಕ್ಷಣೆಗೆ ಎಷ್ಟೋ ಅಡ್ಡಿಗಳು ಬರುತ್ತವೆಂದು ಹೇಳಬಹುದು. ದೇಶದಲ್ಲಿ ಶಾಂತಿಯನ್ನುಂಟುಮಾಡುವುದು,

ಅಪರಾಧಿಗಳನ್ನು ಪತ್ತೆ ಹಚ್ಚುವುದು, ಅಪರಾಧಗಳೇ ಆಗದಂತೆ ನೋಡಿಕೊಳ್ಳುವುದು, ಲಂಚಕೋರತನವನ್ನು ಹೋಗಲಾಡಿಸುವುದು–ಇವೆಲ್ಲವೂ ಪೋಲೀಸ್ ಶಾಖೆಯ ಮುಖ್ಯ ಕೆಲಸಗಳು. ಲಂಚಕೋರತನವಂತೂ ಅತಿಶಯವಾಗಿದೆ. ನಮ್ಮ ಭಾಗದಲ್ಲಿ ಸುಮಾರು 10-12 ಲಂಚಕೋರತನದ ಕೇಸುಗಳು ಆಗಿವೆ ಎಂದು ಗೊತ್ತಾಗಿದ್ದರೂ ಸಹ ಅವಕ್ಕೆ ಪೋಲೀಸಿನವರು ಯೋಗ್ಯವಾದ ಕ್ರಮವನ್ನು ತೆಗೆದುಕೊಳ್ಳದೇ ಇರುವುದು ಬಹಳ ಶೋಚನೀಯವಾಗಿದೆ. ಲಂಚಕೋರತನದ ಕೇಸುಗಳನ್ನಾಗಲೀ ಖೂನಿ ಕೇಸುಗಳನ್ನಾಗಲಿ ಪತ್ತೆ ಹಚ್ಚುವುದರಲ್ಲಿ ಮುಂಜಾಗರೂಕತೆ ಕ್ರಮಗಳನ್ನು ತೆಗೆದುಕೊಳ್ಳದೆ ಇರುವುದರಿಂದ, ಪೋಲೀಸ್ ಅಧಿಕಾರಿಗಳ ಅಲಕ್ಷ್ಯದಿಂದ ಅನೇಕ ವೇಳೆ ಸಾಕ್ಷಿಗಳು ಕಾಲಕ್ಕೆ ಸರಿಯಾಗಿ ಸಾಕ್ಷ್ಯ ಹೇಳಲು ಹೋಗದೆ, ತಪಾಸಣೆ ಸರಿಯಾಗಿ ಆಗುವುದಿಲ್ಲ. ನ್ಯಾಯಾಲಯಗಳಲ್ಲಿ ತೀರ್ಪು ಮಾಡುವುದಕ್ಕೆ ಆಗದೆ ಹಾಗೆಯೇ ಮುಂದುವರಿದು ಎಷ್ಟೋ ಅಪರಾಧಿಗಳಿಗೆ ಶಿಕ್ಷೆಯೂ ಕೂಡ ಆಗದೆ ಹೋಗಿರುವ ಪ್ರಸಂಗಗಳು ನನ್ನ ಎದುರಿಗೆ ಬಂದಿವೆ. ದರೋಡೆ, ಖೂನಿ ಮುಂತಾದುವು ಧಾರವಾಡ ಜಿಲ್ಲೆಯೊಳಗೆ ಬೇಕಾದಷ್ಟು ಹಿಂದೆ ನಡೆದಿದ್ದರೂ ಅವಕ್ಕೆ ಸರಿಯಾದ ಅಂಕಿಅಂಶಗಳಿಲ್ಲ. ಇವೆಲ್ಲವೂ ನಡೆಯುವುದಕ್ಕೆ ಲಂಚಕೋರತನವೇ ಮುಖ್ಯ ಕಾರಣ. ಇದನ್ನು ತಡೆಗಟ್ಟದ ಹೊರತು ದೇಶದಲ್ಲಿ ಶಾಂತಿ ಇಲ್ಲ. ಇಂಥಾದ್ದನ್ನೆಲ್ಲಾ ನಮ್ಮ ಪೋಲೀಸ್ ದಳದವರು ಇದುವರೆಗೂ ತನಿಖೆ ಮಾಡಿಲ್ಲ.

ಇನ್ನು ಇನ್‌ವೆಸ್ಟಿಗೇಷನ್ ಪ್ರಶ್ನೆ ವಿಷಯದಲ್ಲಿ ಹೇಳುವುದಾದರೆ, ನಮ್ಮ ನರಗುಂದ ಮತದಾರ ಕ್ಷೇತ್ರದಲ್ಲಿ ಸುಮಾರು ಐದು ತಿಂಗಳ ಹಿಂದೆ ನಡೆದ ಒಂದು ಖೂನಿ ಕೇಸಿನಲ್ಲಿ ಮೊನ್ನೆ ಮೊನ್ನೆ ಇನ್‌ವೆಸ್ಟಿಗೇಷನ್ ಮುಗಿಸಿದ್ದಾರೆ. ಇಂತಹ ವಿಲಂಬಮಾಡಿದ ಪ್ರಸಂಗಗಳು ಪದೇ ಪದೇ ಕಾಣಬರುತ್ತಿವೆ. ಇದರಿಂದ ಪೋಲೀಸ್ ಶಾಖೆಯ ಆಡಳಿತದಲ್ಲಿ ಎಷ್ಟರಮಟ್ಟಿಗೆ ದಕ್ಷತೆ ಇದೆ ಯೆಂಬುದು ಗೊತ್ತಾಗುತ್ತದೆ. ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಈಚೀಚೆಗೆ ಬಹಳ ಸಡಿಲವಾಗಿ ಇರುವುದರಿಂದ, ನಮ್ಮ ಗೃಹಮಂತ್ರಿಗಳು ಅತ್ತಕಡೆಗೆ ಹೆಚ್ಚು ಗಮನ ಕೊಡಬೇಕೆಂದೂ ಮತ್ತು ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ತಮ್ಮ ಮೂಲಕ ಸರ್ಕಾರದವರಲ್ಲಿ ವಿನಂತಿ ಮಾಡುತ್ತೇನೆ. ಅನೇಕ ಕಡೆಗಳಲ್ಲಿ ಪೋಲೀಸಿನವರೇ ಲಂಚಕೋರತನಕ್ಕೆ ಮುಖ್ಯ ಕಾರಣರಾಗಿರುವುದರಿಂದ, ಅದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೆ ಹೋದರೆ ಗ್ರಾಮಗಳಲ್ಲಿ ಅಶಾಂತಿ ತಲೆದೋರುವುದು ಖಂಡಿತ. ಹಳ್ಳಿಗಳಲ್ಲಿ ಶಾಂತಿಯನ್ನು ಉಂಟುಮಾಡಬೇಕಾದರೆ, ಪೋಲೀಸಿನವರ ಆಡಳಿತ ಸುಗಮವಾಗಿರಬೇಕು. ಅವರು ಕೇವಲ ದುಷ್ಟರು ಶಿಷ್ಟರು ಎಂಬ ಭೇದಭಾವನೆಯನ್ನು ಇಟ್ಟುಕೊಳ್ಳದೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 107ನೇ ಸೆಕ್ಷನ್ ಪ್ರಕಾರ ಚಾಪ್ಟರ್ ಖಟ್ಲೆಗಳನ್ನು ಹಾಕುತ್ತಲಿದ್ದಾರೆ. ಇದರಿಂದ ಪೋಲೀಸ್ ಆಡಳಿತದಲ್ಲಿ ಜನರ ನಂಬಿಕೆ ಇಲ್ಲವಾಗಿದೆ.

ಇನ್ನು ಪಾನನಿರೋಧದ ಬಗ್ಗೆ ಕೆಲವು ಅಂಶಗಳನ್ನು ಹೇಳಲಿಚ್ಛಿಸುತ್ತೇನೆ. ಕೆಲವು ಕಡೆಗಳಲ್ಲಿ ಪಾನನಿರೋಧವು ಯಶಸ್ವಿಯಾಗಿದ್ದರೂ, ಅಂತಹ ಕಡೆಗಳಲ್ಲಿ ಭಟ್ಟಿ ಮದ್ಯದ ತಯಾರಿಕೆ ಮತ್ತು ಮದ್ಯದ ಕಳ್ಳಸಾಗಾಣಿಕೆಯಾಗುತ್ತಿರುವುದಕ್ಕೆ ಪೋಲೀಸ್ ಶಾಖೆಯವರು ಲಕ್ಷ್ಯ ಕೊಡುತ್ತಿಲ್ಲ. ಅಂತಹ ಪ್ರದೇಶಗಳಲ್ಲಿ ಅವರು ನಮ್ಮವರು, ಇವರು ನಮ್ಮವರು ಎಂಬ ಮಮತೆಯನ್ನು ಇಟ್ಟುಕೊಂಡು ಎಷ್ಟೋ ಸಡಿಲತನವನ್ನು ತೋರಿಸುತ್ತಿರುವುದರಿಂದ ಎಷ್ಟೋ ಭಾಗಗಳಲ್ಲಿ ಇನ್ನೂ ಈ ಪಾನನಿರೋಧ ಯಶಸ್ವಿಯಾಗಿಲ್ಲ. ಪೋಲೀಸ್ ಶಾಖೆಯವರು ಹೆಚ್ಚು ದಕ್ಷತೆಯಿಂದ ಕೆಲಸ ಮಾಡಿಲ್ಲ. ಕುಡುಕರು ತಪ್ಪಿತಸ್ಥರೆಂದು ಗೊತ್ತಿದ್ದರೂ ಅತ್ತಕಡೆ ಪೋಲೀಸಿನವರ ಲಕ್ಷ್ಯ ಹೋಗುವುದೇ ಇಲ್ಲ. ಇದರಿಂದ ಕುಡಿತಕ್ಕೆ ಪೋಲೀಸಿನವರೇ ಬೆಂಬಲ ಕೊಟ್ಟಂತೆ ಕಾಣುತ್ತದೆ.

ಇನ್ನು ಅಮೇರಿಕನ್ ಓಪನಿಂಗ್ ಮತ್ತು ಕ್ಲೋಸಿಂಗ್ ಜೂಜಾಟದ ವಿಷಯ. ಈ ಜೂಜಾಟ ಈಚೆಗೆ ಹುಬ್ಬಳ್ಳಿ ಮತ್ತು ಅದರ ಸುತ್ತಮುತ್ತಲಿನ ಪ್ರದೇಶದ ಬಹಳ ಗ್ರಾಮಗಳಲ್ಲಿ ವಿಪರೀತವಾಗಿದೆ. ಇದಕ್ಕೆ ಗ್ರಾಮಾಂತರಗಳಲ್ಲಿ ಓ.ಸಿ. ಜೂಜಾಟ ಎಂದು ಹೇಳುವುದುಂಟು. ಇದು ಅನೇಕ ಗ್ರಾಮಗಳಲ್ಲಿ ವ್ಯಾಪಿಸಿರುವುದರಿಂದ, ಅನೇಕ ಜನರು ಈ ಅಕ್ರಮವಾದ ಮತ್ತು ಕಾಯಿದೆಗಳಿಂದ ನಿಷೇಧಿಸಲ್ಪಟ್ಟಂಥ ಜೂಜಾಟವಾಡಿ ತಮ್ಮ ಆಸ್ತಿಗಳನ್ನು ಕಳೆದುಕೊಂಡ ಅನೇಕ ಉದಾಹರಣೆಗಳುಂಟು. ಪೋಲೀಸರು ಈ ಅಕ್ರಮ ಜೂಜಾಟವನ್ನು ತಡೆಗಟ್ಟಲು ದಕ್ಷರಾಗಿ ದುಡಿಯದೆ, ಜೂಜಾಟಗಾರರಿಂದ ಲಂಚರುಷುವತ್ತುಗಳನ್ನು ತೆಗೆದುಕೊಂಡು ಇಂತಹ ಜೂಜಾಟಗಳಿಗೆ ಅವರೇ ಉತ್ತೇಜನ ಕೊಡುವುದರಿಂದ ಪೋಲೀಸ್ ಆಡಳಿತದಲ್ಲಿ ಬಹಳ ಶಿಥಿಲತೆಯುಂಟಾಗಿದೆ. ಆದ್ದರಿಂದ ಗೃಹಖಾತೆಯವರು ಈ ಓ.ಸಿ. ಜೂಜಾಟವನ್ನು ಆದಷ್ಟು ತೀವ್ರವಾಗಿ ಬಂದ್ ಮಾಡಲಿಕ್ಕೆ ಕ್ರಮ ಕೈಗೊಳ್ಳಬೇಕಾಗಿ ನನ್ನ ಅತ್ಯಾಗ್ರಹದ ಸೂಚನೆ. ಈ ರೀತಿಯಾಗಿ ಪೋಲೀಸ್ ಖಾತೆಯೊಳಗೆ ಇದ್ದಂಥ ಕೆಲವು ನ್ಯೂನತೆಗಳನ್ನು ತಮ್ಮ ಮುಂದೆ ಇಡುತ್ತಾ, ನಮ್ಮ ಗೃಹಮಂತ್ರಿಗಳಾದ ಮಾನ್ಯ ಪೂಣಚ್ಚನವರು ದಕ್ಷರೂ ಮತ್ತು ನುರಿತವರೂ ಮತ್ತು ಅನುಭವವುಳ್ಳವರೂ ಆಗಿರುವುದರಿಂದ ಅವರು ಈ ತರಹದ ಪೋಲೀಸ್ ಆಡಳಿತದಲ್ಲಿರುವ ಲೋಪದೋಷಗಳನ್ನು ಹೊಡೆದೋಡಿಸುವರೆಂದು ನಾನು ತುಂಬ ನಂಬಿ ಈಗಿನ ಡಿಮ್ಯಾಂಡಿಗೆ ಬೆಂಬಲ ಕೊಡುತ್ತೇನೆ.

Mr. SPEAKER.—The House will now rise for lunch and meet at 4-30 P.M.

The House adjourned for Lunch at Four of the Clock and reassembled at Thirty Minutes past Four of the Clock.

[MR. SPEAKER in the Chair]

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ತಾವು ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ಕೆಲವು ಮಾತುಗಳನ್ನಾಡಲು ನಾನು ನಿಂತಿದ್ದೇನೆ. ಕೆಲವು ಮಂತ್ರಿಗಳು ಎಂದರೆ, ಒಬ್ಬಿಬ್ಬರು ಮಂತ್ರಿಗಳು ಇಲ್ಲಿ ನಾವು ಸುಮ್ಮನೆ ಮಾತನಾಡುವ ಚಪಲದಿಂದ ಬಂದು ಮಾತನಾಡುತ್ತಿದ್ದೇವೆ ಮತ್ತು ಏನೊಂದೂ ಸಲಹೆಗಳನ್ನು ಕೊಡುತ್ತಿಲ್ಲವೆಂದು ತಿಳಿಸಿದರು. ಸುಮ್ಮ ಸುಮ್ಮನೆ ಸರಕಾರವನ್ನು ಟೀಕಿಸಬೇಕೆಂದು ನಮ್ಮ ಉದ್ದೇಶವಲ್ಲ. ನಮ್ಮ ಉದ್ದೇಶ ಮುಖ್ಯವಾಗಿ ಸರಕಾರದಲ್ಲಿರತಕ್ಕ ನ್ಯೂನಾತಿರಿಕ್ತಗಳನ್ನು ತೋರಿಸಿಕೊಟ್ಟು ಅವನ್ನು ಸರಿಪಡಿಸಲು ತಕ್ಕ ಕ್ರಮಗಳನ್ನು

(ಶ್ರೀ ಜಿ. ಎಲ್. ಪುಟ್ಟಣ್ಣ.)

ಕೈಗೊಳ್ಳಲಿ ಎಂಬುದಾಗಿ ಇದೆ; ಮತ್ತು ಇದರಿಂದ ನಮ್ಮ ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ.

ಈಗ ಅಡ್ಮಿನಿಸ್ಟ್ರೇಷನ್ ವಿಚಾರವಾಗಿ ಆಗಲೇ ಕೆಲವು ಮಹನೀಯರು ಹೇಳಿದ್ದಾರೆ. ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಈಗ ಹೈ ಕೋರ್ಟಿನಲ್ಲಿ ಸುಮಾರು ಐದಾರು ಸಾವಿರ ಕೇಸುಗಳು ಇತ್ಯರ್ಥವಾಗದೆ ಹಾಗೆಯೇ ಉಳಿದಿವೆ. ಇದಕ್ಕೆ ಕಾರಣಗಳು ಅನೇಕವಿವೆ; ಮತ್ತು ಮುಖ್ಯವಾಗಿ ಇದಕ್ಕೆ ಕಾರಣ ಈ ನ್ಯಾಯಾಧೀಶರುಗಳ ವಯಸ್ಸಿನ ಪರಿಮಿತಿಯನ್ನು ಅರವತ್ತು ವರ್ಷಕ್ಕೆ ಏರಿಸಿರುವುದು. ಏಕೆಂದರೆ ಕೆಲವುಕಡೆ ಜಡ್ಜಿಗಳಿಗೆ ಕೈನಡುಗುತ್ತಿರುತ್ತದೆ ಮತ್ತೆ ಕೆಲವೆಡೆ ಅವರ ತಲೆ ಅಲ್ಲಾಡುತ್ತಿರುತ್ತದೆ. ಇದರಿಂದಾಗಿ ಅವರು ಮುದುಕರಾಗಿರುವುದರಿಂದ ಜಡ್ಜ್‌ಮೆಂಟನ್ನು ಆರ್ಗ್ಯುಮೆಂಟ್ ಆದಕೂಡಲೆ ಬರೆಯುವುದಕ್ಕಾಗುವುದಿಲ್ಲ. ಇಂತಹ ತೊಂದರೆಗಳಿರುವುದರಿಂದ ನಾನು ಸರಕಾರಕ್ಕೆ ಬಂದು "ಫಿಸಿಕಲ್ ಫಿಟ್‌ನೆಸ್ ಸರ್ಟಿಫಿಕೇಟ" (Physical Fitness Certificate) ನ್ನು ಕೊಡುವಹಾಗೆ ಒಂದು ಕಾನೂನನ್ನು ಜಾರಿಗೆ ತರುವುದು ಉತ್ತಮ ಎಂದು ಸಲಹೆ ಮಾಡುತ್ತಿದ್ದೇನೆ. ಹೀಗೆ ಮಾಡುವುದರಿಂದ ಈ ಜಡ್ಜಿಗಳು ತಾವೇ ತಾವಾಗಿ ರಿಟೈರು ಆಗುತ್ತಾರೆ.

ಇಂತಹ ನ್ಯಾಯಾಧೀಶರುಗಳು ಹೈ ಕೋರ್ಟಿನಲ್ಲೇ ಅಲ್ಲ, ಇತರ ಕಡೆಗಳಲ್ಲಿಯೂ ಇದ್ದಾರೆ. ಈಗ ಸರಕಾರದವರು ಬೇರೆ ಇಲಾಖೆಗಳಲ್ಲಿ ಕೆಲಸಮಾಡುವವರಿಗೆ ಒಂದು ವಯಸ್ಸಿನ ಮಿತಿಯನ್ನು ಇಟ್ಟಿದ್ದಾರೆ. ಆದರೆ ಹೈ ಕೋರ್ಟಿನಲ್ಲಿ ಮತ್ತು ಇತರ ಕೋರ್ಟುಗಳಲ್ಲಿರುವ ನ್ಯಾಯಾಧೀಶರುಗಳ ವಯಸ್ಸಿನ ಮಿತಿ 60 ವರ್ಷಗಳೆಂದು ಇಟ್ಟಿರುವುದರಿಂದ ಇವರಿಗೆ ಈ ನಿಯಮವು ಅನ್ವಯಿಸುವುದಿಲ್ಲ.

ಶ್ರೀ ಹೆಚ್. ಕೆ. ವೀರಣ್ಣಗೌಡ.—ಮೊದಲು ತಾವು ಹೈ ಕೋರ್ಟಿನಲ್ಲಿ ಮಾತ್ರ ಹೇಳಿದರಲ್ಲ.

ಶ್ರೀ ಜಿ. ಎಲ್. ಪುಟ್ಟಣ್ಣ.—ಹೈ ಕೋರ್ಟಿನಲ್ಲೇ ಅಲ್ಲ. ಇತರ ಕಡೆಗಳಲ್ಲಿಯೂ ಇರುವ ನ್ಯಾಯಾಧೀಶರುಗಳ ವಿಷಯವನ್ನು ಹೇಳಿದ್ದೇನೆ. ಆದಕಾರಣ ನಾನು ಸರಕಾರಕ್ಕೆ ಸಲಹೆಮಾಡುವುದು, ಈ ರೀತಿಯಾಗಿ ಒಂದು ಫಿಸಿಕಲ್ ಫಿಟ್‌ನೆಸ್ ಸರ್ಟಿಫಿಕೇಟನ್ನು ಕೊಡುವುದಕ್ಕೆ ಶಕ್ಯಹಾಗೆ ಒಂದು ಕಾನೂನನ್ನು ಮಾಡಿದರೆ ಅನುಕೂಲವಾಗುತ್ತದೆ. ಅಲ್ಲದೆ ಈ ಕೇಸುಗಳು ಡಿಲೇ ಆಗುವುದಕ್ಕೆ ಇನ್ನೂ ಒಂದು ಕಾರಣವಿದೆ. ಅನೇಕಕಡೆ ಜಡ್ಜಿಗಳು ಆರ್ಗ್ಯುಮೆಂಟು ಆದತಕ್ಷಣವೇ ತೀರ್ಪನ್ನು ಕೊಡುತ್ತಾರೆ. ಆದರೆ ಇನ್ನು ಕೆಲವುಕಡೆ ಎರಡು ಮೂರು ತಿಂಗಳಾದರೂ ತೀರ್ಪೇ ಬರುವುದಿಲ್ಲ. ಇದಕ್ಕೆ ಕಾರಣ ಈ ವಯಸ್ಸಾದ ನ್ಯಾಯಾಧೀಶರಿರುವುದರಿಂದ ಇವರ ಕೈಲಿ ಕೆಲಸಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಬಹಳ ಬಡಜನಗಳಿಗೆ ತೊಂದರೆಯಾಗುತ್ತಿದೆ. ಬೇಕಾದರೆ ಒಂದು ನಿದರ್ಶನವನ್ನು ಕೊಡುತ್ತೇನೆ.

ಈ ನ್ಯಾಯಾಧೀಶರುಗಳು ಕೇಸುಗಳನ್ನು ಅಡ್ಜರ್ನ್ ಮಾಡಬೇಕಾದರೆ ಸರಿಯಾಗಿ ಪರಿಶೀಲಿಸದೆಯೇ ಮಾಡುತ್ತಿದ್ದಾರೆ. ಹೀಗಾಗುವುದರಿಂದ ಬಡ ಜನಗಳು ಎಷ್ಟೋ ದುಡ್ಡುಕೊಟ್ಟು ಸಾಕ್ಷಿಗಳನ್ನು ಕರೆದುಕೊಂಡು ಬಂದು ಕಾದು ಕುಳಿತು ಕೊನೆಗೆ ನಿರಾಶರಾಗಿ ಹೋಗಬೇಕಾಗುತ್ತದೆ. ಎಲ್ಲರೂ ಹೀಗೆ ಮಾಡುತ್ತಾರೆಂದಲ್ಲ. ಕೆಲವರಿದ್ದಾರೆ. ಈ ಕೇಸುಗಳ ವಿಚಾರಣೆಗಾಗಿ ಹೊರಗಡೆಯಿಂದ ಬರುವ ಎಷ್ಟೋ ಜನಗಳು ಈ ರೀತಿಯಾಗಿ ಕೇಸುಗಳಿಗಾಗಿ ಕಾದು ಕುಳಿತು ವಾಪಸು ಹೋಗುತ್ತಿರುವ ಸಂದರ್ಭಗಳು ಬೇಕಾದಷ್ಟಿವೆ. ಆದುದರಿಂದ ಇದನ್ನು ಸರಕಾರದ ಗಮನಕ್ಕೆ ತಂದಿದ್ದೇನೆ. ಇದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

ವಿಟ್‌ನೆಸ್ ಷೆಡ್ಡಿನ ವಿಷಯವಾಗಿ ಹೇಳಬೇಕಾಗಿದೆ. ಇದರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ ಎಂದು ಹೇಳಬೇಕಾಗಿದೆ. ಇದನ್ನು ಹೇಳಲು ನನಗೆ ಬಹಳ ವ್ಯಸನವೂ ದುಃಖವೂ ಆಗಿದೆ. ಕೆಲವು ಕಡೆಗಳಲ್ಲಿ ಈ ಷೆಡ್ಡುಗಳಲ್ಲಿ ಕೂರಲು ಕೂಡ ಆಗುವುದಿಲ್ಲ. ಅಲ್ಲದೆ ಈ ಸ್ಥಳ ಬಹಳ ಕೊಳಕಾಗಿರುವುದರಿಂದ ಇದರಲ್ಲಿ ಸರಿಯಾಗಿ ನಿಂತುಕೊಳ್ಳಲು ಕೂಡ ಆಗುವುದಿಲ್ಲ. ಇದರ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಸರಕಾರ ಇದನ್ನು ಸರಿಪಡಿಸಬೇಕು.

ಇನ್ನೂ ಜೈಲುಗಳ ವಿಚಾರವಾಗಿ ಹೇಳಬೇಕಾಗಿದೆ. ನಾನು ಕೂಡ ಜೈಲು ಸೂಪರಿಂಟೆಂಡೆಂಟು ಆಗಿದ್ದೆ. ಈ ಜೈಲುಗಳಲ್ಲಿ ಮಾನ್ಯಮಂತ್ರಿಗಳೂ ಮತ್ತು ಇತರರೂ ಜೈಲುಗಳಲ್ಲಿದ್ದು ಬಂದವರು ಇವರಿಗೆ ಜೈಲಿನಲ್ಲಿರತಕ್ಕ ಕಷ್ಟ ಸುಖಗಳೇನು ಎಂಬುದು ಚೆನ್ನಾಗಿ ಗೊತ್ತಿದೆ. ಈಗ ನೋಡಿದರೆ ಈ ಪ್ರಿಜನರುಗಳ ಸ್ಥಿತಿ ಬಹಳ ಶೋಚನೀಯವಾಗಿದೆ. ಹೀಗಿರಬಾರದು. ಇವರ ಸ್ಥಿತಿಯನ್ನು ಉತ್ತಮಗೊಳಿಸಬೇಕು. ಜೈಲಿಗೆ ಬಂದ ಖೈದಿಗಳಿಗೆ ಸರಿಯಾದ ಶಿಕ್ಷಣವನ್ನು ಕೊಟ್ಟು ಅವರನ್ನು ಒಳ್ಳೆಯ ಪ್ರಜೆಗಳಾಗಿ ಮಾಡಬೇಕೆಂದು ಅನೇಕ ಸುಧಾರಣೆಗಳನ್ನು ತಂದಿದ್ದಾರೆ. ಮಾನ್ಯ ಮಂತ್ರಿಗಳು ರಷ್ಯಾ ದೇಶದಲ್ಲಿರುವ ಪದ್ಧತಿಗಳನ್ನು ಹೇಳಿದರು. ನಾನೂ ಅವೆಲ್ಲವನ್ನೂ ಓದಿದ್ದೇನೆ ಅಲ್ಲದೆ ಅನೇಕ ಪಾಶ್ಚಾತ್ಯ ದೇಶಗಳಲ್ಲಿ ನಾನುಕಂಡಂತೆ ಈ ಜೈಲಿನ ಪದ್ಧತಿ ಹೇಗಿದೆಯೆಂದರೆ ನಮ್ಮ ದೇಶಕ್ಕಿಂತ ಎಷ್ಟೋ ಮುಂದುವರಿದಿದೆ. ಅದೇ ರೀತಿಯಾದ ಸೌಕರ್ಯಗಳನ್ನು ಇಲ್ಲಿಯೂ ಒದಗಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಪೋಲೀಸು ಡಿಪಾರ್ಟುಮೆಂಟಿನ ವಿಷಯವಾಗಿ ಈಗ ತಾನೇ ಮಾನ್ಯಸದಸ್ಯರಾದ ಶ್ರೀ ಬೋರಣ್ಣಗೌಡರು ಅವರ ಡಿಸ್ಟ್ರಿಕ್ಟಿನಲ್ಲಿ ಈ ಪೋಲೀಸಿನವರಿಂದ ಆಗುತ್ತಿರುವ ಅನಾನುಕೂಲಗಳನ್ನು ಹೇಳುತ್ತಿದ್ದರು. ನಾನು ನಮ್ಮ ಡಿಸ್ಟ್ರಿಕ್ಟಿನಲ್ಲಿ ಮಾತ್ರ ಇದೆ ಎಂದು ತಿಳಿದುಕೊಂಡಿದ್ದೆ. ಆದರೆ ಈಗ ನೋಡಿದರೆ ದೇಶದಲ್ಲೆಲ್ಲ ಒಂದೇರೀತಿಯಾದ ಪರಿಸ್ಥಿತಿಯಿದೆ ಎಂದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ "Lawlessness is prevailing". ಈ ಪೋಲೀಸು ಇಲಾಖೆಯ ದುರಾಡಳಿತವನ್ನು ಯಾರೂ ಕೇಳುವವರೇ ಇಲ್ಲ. ಯಾರ ಲಂಗುಲಗಾಮೇ ಇಲ್ಲ. ಲಂಚರುಷುವತ್ತುಗಳು ಹೆಚ್ಚಾಗಿವೆ. ಎಲ್ಲರೂ ಲಂಚ ತೆಗೆದುಕೊಳ್ಳುತ್ತಾರೆಂದು ನಾನು ಹೇಳುತ್ತಿಲ್ಲ. ಸತ್ಪುರುಷರು ಎಷ್ಟೋ ಜನರಿದ್ದಾರೆ. ಆದರೆ ಅವರ ಸಂಖ್ಯೆ ಕಡಮೆ. ಸತ್ಯವಾಗಿರುವವರ ಮೈ ಬೆತ್ತಲೆ—ಡ್ಯಾನ್ಸಿಂಗ್ ಅಟೆಂಡೆನ್ಸ್ ಮಾಡುವವರಿಗೆ ವಿಪರೀತ ಪುರಸ್ಕಾರವಿದೆ—ಅದರಲ್ಲೂ ಈ ಪೋಲೀಸು ಶಾಖೆ ಏಳೆಂಟು ವರ್ಷಗಳಿಂದೀಚೆಗೆ ಬಹಳ ಹೀನಸ್ಥಿತಿಗೆ ಬಂದಿದೆ. ಇದಕ್ಕೆ ಕಾರಣ ಇಷ್ಟೇ. ನಮ್ಮ ಸರಕಾರದವರು ಈ ಅಸೆಂಬ್ಲಿ ಹಾಲಿನಲ್ಲಿ ಕುಳಿತು ಪೋಲೀಸು ಡಿಪಾರ್ಟ್‌ಮೆಂಟಿನ ಮೇಲೆ ಮಾತನಾಡುತ್ತ "ಏನೂ ಅಲಿಗೇಷನ್ನಿಲ್ಲ" ಎಂದು ಹೇಳುತ್ತಿರುವುದರಿಂದ ಈ ಪೋಲೀಸು ಶಾಖೆಯಲ್ಲಿ ಬರಬರುತ್ತ ದಕ್ಷತೆ ಕಡಮೆಯಾಗುತ್ತಿದೆ.

ಅದಕ್ಕೆ ಬದಲು ಅವರು ಹೇಳಲಿ, 'All right we will enquire" ಎಂದು. ಆಗ ಅವರಿಗೆ ಸ್ವಲ್ಪ ಭಯ ಬರುತ್ತದೆ. ಹಾಗಿಲ್ಲದೆ ಮಂತ್ರಿಗಳು ಈರೀತಿ

ಹೇಳಿದರೆ, ತಾವೇನುಮಾಡಿದರೂ ಸರ್ಕಾರದವರು ಸರಿಯೆನ್ನುತ್ತಾರೆಂದು ಭಾವಿಸುತ್ತಾರೆ. ಇದೊಂದು ದೊಡ್ಡ ತಪ್ಪು.

ಇನ್ನೊಂದೇನೆಂದರೆ, ಸರ್ಕಾರದವರು ಐ.ಪಿ.ಎಸ್. ಮತ್ತು ನಾನ್-ಐ.ಪಿ.ಎಸ್. ಅವರಿಗೆ ಸಂಬಳದಲ್ಲಿ ಮಾಡಿರುವ ತಾರತಮ್ಯ. ಬೆಂಗಳೂರಿನ ಡಿ.ಎಸ್.ಪಿ.ಗೆ 800 ರೂಪಾಯಿ ಕೊಟ್ಟು ತುಮಕೂರು ಡಿ.ಎಸ್.ಪಿ. ಗೆ 300 ಕೊಡುವುದು disparity ಅಲ್ಲವೇ? ಇದೇನು ಡಿಸ್ಟ್ರಿಕ್ಟ್‌ಬೋರ್ಡ್ ಆಫೀಸೇ? ಈರೀತಿ disparity ಇಟ್ಟುಕೊಳುವುದು ಆಫೀಸರುಗಳ ದಕ್ಷತೆಗೆ ಕುಂದು ತರುತ್ತದೆ. ಬೇರೆ ಪ್ರಾಂತ್ಯಗಳಲ್ಲಿ ಹೀಗಿಲ್ಲ. ಐ.ಪಿ.ಎಸ್. ನಾನ್-ಐ.ಪಿ.ಎಸ್. ಎಲ್ಲರಿಗೂ ಒಂದೇ ರೀತಿ ಸಂಬಳ ಕೊಡುತ್ತಿದ್ದಾರೆ. ನಾನ್-ಐ. .ಎಸ್. ಅವರು ಆ ಸ್ಥಾನದಲ್ಲಿದ್ದರೆ ಅವರಿಗೂ ಐ.ಪಿ.ಎಸ್. ಅವರ ಸಂಬಳವನ್ನೇ ಕೊಡುತ್ತಾರೆ. ಇನ್ನೂ ಒಂದು ಭೇದಭಾವನೆಯೆಂದರೆ ಐ.ಪಿ.ಎಸ್. ಅವರಿಗೆ married allowance ಎಂದು ಬೇರೆ ಕೊಡುತ್ತಿರುವುದು. ನಾನು ಟ್ರೆಜರಿ ಆಫೀಸರಾಗಿದ್ದೆ. ಈ ಅಲೋಯನ್ಸನ್ನು ಪಾಸ್ ಮಾಡಬೇಕಾದರೆ ನನಗೆ ನಿಜವಾಗಿಯೂ ಬಹಳ ಸಂಕಟವಾಗುತ್ತಿತ್ತು. ಪಾಪ, ನಾನ್-ಐ.ಪಿ.ಎಸ್. ಅವರ ಹೆಂಡಿರೇನೂ ಸೀರೆ ಯುಡುವುದಿಲ್ಲವೇ? ಅವರ ಸೀರೆಗಳೇನೂ ಹರಿಯುವುದಿಲ್ಲವೇ? ಇಂಥ ತಾರತಮ್ಯಗಳನ್ನು ಸರಿಪಡಿಸದೆ ಇದ್ದರೆ ಈ ಇಲಾಖೆಯಲ್ಲಿ ದಕ್ಷತೆಯಿರುವುದಿಲ್ಲ. ನೀವು ನಿಜವಾಗಿ ಆ ನಾನ್-ಐ.ಪಿ.ಎಸ್. ಅವರ ಸ್ಥಾನದಲ್ಲಿದ್ದರೆ ಅವರಿಗೆಂಥ ಅವಮಾನವಾಗಿದೆ ಎಂಬುದು ಗೊತ್ತಾಗುತ್ತಿತ್ತು.

ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರ ಅವಗಾಹನೆಗೆ ಒಂದು ವಿಷಯ ಹೇಳಬೇಕಾಗಿದೆ. ಸರ್ಕಾರದವರು ಈ ವಿಷಯದಲ್ಲಿ ಈಗಾಗಲೇ ಒಂದು ತೀರ್ಮಾನವನ್ನು ಕೈಕೊಂಡು, ಡಿ.ಎಸ್.ಪಿ. ಸ್ಥಾನದಲ್ಲಿ ಐ.ಪಿ.ಎಸ್. ಕೇಡರಿನಲ್ಲಿ ನಾನ್-ಐ.ಪಿ.ಎಸ್. ನವರು serve ಮಾಡಿದರೂ ಅವರಿಗೂ I.P.S. ಕೇಡರಿನ ಸಂಬಳವನ್ನೇ ಕೊಡಬೇಕೆಂದು ನಿರ್ಣಯ ಮಾಡಿದೆ.

ಶ್ರೀ ಜಿ. ಎಣ್. ಪುಟ್ಟಣ್ಣ.—ಅದಿನ್ನೂ ಜಾರಿಗೆ ಬಂದಿಲ್ಲ. ಅದಕ್ಕಾಗಿಯೇ ಹೇಳುತ್ತಿದ್ದೇನೆ.

ಆಮೇಲೆ ತುಮಕೂರು ಮತ್ತು ತುರುವೇಕೆರೆ ತಾಲ್ಲೂಕುಗಳಲ್ಲಿ ಪೋಲೀಸ್ ರಾಜ್ಯವಾಗಿದೆಯೆಂಬುದನ್ನು ಸ್ವಲ್ಪಮಟ್ಟಿಗೆ ಹೇಳುತ್ತೇನೆ. ರುಜುವಾತು ಕೊಟ್ಟು ನಾನು ತೋರಿಸಬಲ್ಲೆ. ನಮ್ಮ ತುಮಕೂರು ತಾಲ್ಲೂಕಿನಲ್ಲಿ ಬೋವಿ ಹಾಸ್ಟಲಿನಲ್ಲಿ ಅನೇಕವಾಗಿ ಹಣ ದುರುಪಯೋಗವಾಗಿದೆಯೆಂದು ದೂರುಕೊಟ್ಟರು. ಆದರೆ ಅಲ್ಲಿ ಹಣವನ್ನು ದುರುಪಯೋಗ ಮಾಡುತ್ತಿದ್ದ ಮಹನೀಯರು ಪೋಲೀಸ್ ಇನ್ಸ್‌ಪೆಕ್ಟರ ಸಂಬಂಧೀಕರ ಸ್ನೇಹಿತರಾಗಿದ್ದಾರೆ. ಅದರಮೇಲೆ ಬೋವಿಗಳೇ ದುಡ್ಡನ್ನೆಲ್ಲಾ ಹೊಡೆದುಕೊಂಡು ಹೋದರೆಂದು ಬೋವಿಗಳನ್ನೆಲ್ಲಾ ಹಿಡಿದು ಹಿಂಸೆಗೊಳಪಡಿಸಿದರು. ಹೀಗೆ ನ್ಯಾಯವಾಗಿರತಕ್ಕ ಸಂದರ್ಭಗಳಲ್ಲಿಯೂ ಡಿಪಾರ್ಟ್‌ಮೆಂಟಲ್ ಆಫೀಸರುಗಳು ಈರೀತಿ ಮಾಡಿದ್ದಾರೆ. ಸಾಧಾರಣವಾಗಿ ಕಾಂಗ್ರೆಸ್‌ನವರು ಯಾರಾದರೂ ಹೋಗಿ ಪೋಲೀಸ್ ಅಧಿಕಾರಿಗಳಿಗೆ ಹೇಳಿಬಿಟ್ಟರೆ 99ಡಿಗ್ರಿ 100ಡಿಗ್ರಿ ಜ್ವರವೇ ಬಂದುಬಿಡುತ್ತದೆ. ನಾನವರಿಗೆ ಎಷ್ಟೋವೇಳೆ, "ಸೀತರೆ ಬಿದ್ದುಹೋಗುವ ಮೂಗು ಬಹಳ ದಿವಸವಿರುವುದಿಲ್ಲ, ನಿಮ್ಮ duty ನೀವು ಧೈರ್ಯವಾಗಿ ಮಾಡಿ" ಎಂದು ಹೇಳಿದರೂ "ನಾವೇನುಮಾಡೋಣ, ಆರೀತಿ ಮಾಡಿದರೆ ನಮಗೆ ಕಷ್ಟವಾಗುತ್ತದೆ" ಎಂದು ಹೇಳುತ್ತಾರೆ. ಈರೀತಿ ಇರುವ ಭೀತಿ ಹೋಗಬೇಕು. ಯಾರೇ ಆಗಲಿ, ಯಾವ ದೊಡ್ಡ ಮನುಷ್ಯನ ಮಗನೇ ಬರಲಿ, ಸತ್ಯ, ನಿಷ್ಠೆಯಿಂದ ನಡೆದುಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರವನ್ನು ಮಂತ್ರಿಗಳ ಗಮನಕ್ಕೆ ತರುತ್ತೇನೆ. Gun Seizures ವಿಷಯ. ಪ್ರತ್ಯಕ್ಷ ನೋಡಿರುವುದು ಇದು. ಎಷ್ಟೋವೇಳೆ Gun ಅನ್ನು seize ಮಾಡಿಕೊಂಡು ಬಂದು ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಳ್ಳುತ್ತಾರೆ, ಅದನ್ನು ಸುಮ್ಮನೆ ಇಟ್ಟುಕೊಂಡಿರುವುದಿಲ್ಲ, tamper ಮಾಡಿಬಿಡುತ್ತಾರೆ. ಇದು ಒಳ್ಳೆಯದಲ್ಲ. ಒಂದುವೇಳೆ gun ಅನ್ನು forfeit ಮಾಡಬೇಕಾದರೆ ಸಂಬಂಧಪಟ್ಟ ಪಾರ್ಟಿಗಳಿಗೆ ನೋಟೀಸ್ ಕೊಡಬೇಕು. 200-300 ರೂಪಾಯಿಗಳನ್ನು ಕೊಟ್ಟು ತಂದ ಬಂದೂಕುಗಳನ್ನು ಕಿತ್ತು ತಂದು ಅಗಸನ ಕತ್ತೆ ದೊಂಬಿಗೆ ತ್ಯಾಗವೆಂದು ಮಾಡುವುದೇ? ಕೊನೆಗೆ ಪಾರ್ಟಿ ಬಂದು ಏನಾಯಿತೆಂದು ಕೇಳಿದರೆ 'sold or forfeited' ಎಂದು ಹೇಳಿಬಿಡುತ್ತಾರೆ. ಆದ್ದರಿಂದ ಕ್ರಮವಾಗಿ ನೋಟೀಸ್ ಕೊಡಿ. ನೋಟೀಸನ್ನು ಮನೆಯ ಮೇಲೆ ಜಾರಿ ಮಾಡದಿರಲಿ.

ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿನ್ಸ್ ಅವರನ್ನು ಸಸ್ಪೆಂಡ್ ಮಾಡಿದ್ದಾರೆಂದು ವರ್ತಮಾನ ಬಂದಿದೆ. ನಾನು ಪೋಲೀಸಿನಲ್ಲಿ ಹುಟ್ಟಿ ಬೆಳೆದವನು. ಅಲ್ಲಿ ನಡೆಯುವ ವಿದ್ಯಮಾನಗಳೇನೆಂಬುದನ್ನು ಅರಿತಿದ್ದೇನೆ. ಈ ಸಮಾಚಾರ ಬಂದಮೇಲೆ ನಾನು ಅವರಲ್ಲಿಗೆ ಹೋಗಿ ಏನು ವಿಷಯವೆಂದು ಕೇಳಿದೆ. ಆದರೆ ಅವರು ಹೇಳುವುದಿಲ್ಲವೆಂದುಬಿಟ್ಟರು. ಅದರಮೇಲೆ ನಾನೇಬೇರೆ ದಾಖಲೆಗಳನ್ನು ನೋಡಿ investigation ಮಾಡಿ ನೋಡಿದ್ದೇನೆ. ಕೆ.ಜಿ.ಎಫ್. ಜಾನ್ ಟೇಲರ್ ಅಂಡ್ ಸನ್ಸ್ ಅವರ ಕಂಪ್ಲೇಂಟಿನಲ್ಲಿರುವುದು 3 ಅಂಗುಲ ಪೈಪು. ಇವರ ಎಸ್ಟೇಟಿನಲ್ಲಿ ಹಾಕಿಕೊಂಡಿರತಕ್ಕದ್ದು 4 ಅಂಗುಲ ಪೈಪು. 450 ಅಡಿಗಳಷ್ಟು stoneware ಪೈಪನ್ನು ಕಂಪೆನಿಯಲ್ಲಿ ಖರೀದಿಗೆ ತೆಗೆದುಕೊಂಡು ಅವರ ಜಮೀನಿಗೆ ಹಾಕಿದ್ದಾರೆ. ಈಗ ಸರ್ಕಾರದವರು ಮಹಜರ್ ಮಾಡಿ ಅದನ್ನು ತೆಗೆದುಕೊಂಡಾಗ ಮಹಜರ್ ಕಾಪಿಯನ್ನಾದರೂ ಅವರ ಹೆಂಡತಿಯವರಿಗೆ ಕೊಡಬೇಡವೇ? ಅದನ್ನೂ ಕೊಟ್ಟಿಲ್ಲ. ಒಬ್ಬರೇ ಹೆಂಗಸರು—ದೊಡ್ಡ ಮನುಷ್ಯರ ಹೆಂಡತಿ—ಮನೆಯಲ್ಲಿ ಗಂಡನಿಲ್ಲದಿರುವಾಗ ಈ ರೀತಿ ತೆಗೆದ ಕೊಂಡು ಹೋಗಿದ್ದಾರೆ! ನಾನು ಕಂಡಿರುವಹಾಗೆ, ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿನ್ಸಸ್ ಅವರು ಸತ್ಯವಂತರು, ಧರ್ಮಿಷ್ಠರು. ಲಾಲ್ ಕೇಸಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕೊಡಲು ಪ್ರಯತ್ನಮಾಡಿದರೂ ಅವರು ಅಂಥ ಭಾರಿ ಲಂಚವನ್ನು ತೆಗೆದುಕೊಳ್ಳಲಿಲ್ಲ.

Sri K. S. SURYANARAYANA RAO (Mysore City).—I rise to a point of order.

Sri C. J. MUCKANNAPPA (Gubbi).—I also rise to a point of order. The Hon'ble Member is sitting along with the Ministers and speaking.

Mr. SPEAKER.—He has not become a Minister.

Sri C. J. MUCKANNAPPA.—That is not his allotted seat.

Mr. SPEAKER.—Does not matter.

Sri K. S. SURYANARAYANA RAO.—If I am permitted I will speak.

Mr. SPEAKER.—Yes.

Sri K. S. SURYANARAYANA RAO.—Is the Hon'ble Member permitted to speak on a matter which is under investigation and *sub judice* ?.

Mr. SPEAKER.—It is not *sub judice*.

Sri K. S. SURYANARAYANA RAO.—Under investigation.

Mr. SPEAKER.—If it is under investigation one can speak, but not if it is *sub judice*.

Sri B. K. PUTTARAMIYA.—I want a clarification from the Chair.

Mr. SPEAKER.—I do not permit the member to speak unless it is a point of order. The Hon'ble Member is taking the time of Sri Puttanna. His time would be cut short.

(*Sri K. S. Suryanarayana Rao rose*)

Sri G. N. PUTTANNA.—I am not going to yield unless it is a point of order and a ruling is given by the Chair.

Mr. SPEAKER.—I will take care of the whole thing.

ಶ್ರೀ ಜಿ. ಎನ್. ಪುಟ್ಟಣ್ಣ.—ಈ ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್‌ಅವರು ದೊಡ್ಡ ಮನುಷ್ಯರೆಂಬುದು ಗೊತ್ತು. ಅವರು ನಿಜವಾಗಿಯೂ ಕಳ್ಳತನ ಮಾಡಿದ್ದರೆ Prosecution ಮಾಡಲಿ. ಸರ್ಕಾರಕ್ಕೆ ಪ್ರಾಸಿಕ್ಯೂಷನ್ ಮಾಡುವುದಕ್ಕೆ Evidence ಇಲ್ಲ. ಸುಮ್ಮನೆ ಏಕದಂ ಹೋಗಿ suspend ಮಾಡಿದ್ದಾರೆ. ಒಂದು ವೇಳೆ suspend ಮಾಡಿದ ಮೇಲಾದರೂ ವಿಚಾರಮಾಡಿ ಒಂದು Statement ಆದರೂ ಸರ್ಕಾರದವರು ಕೊಡಬಹುದಲ್ಲವೇ, ತಾವು ಮಾಡಿದ್ದು ಸರಿಯಾಗಿದ್ದರೆ ? ಅದನ್ನೂ ಮಾಡಿಲ್ಲ !

ಕೊನೆಯದಾಗಿ ನಮ್ಮ ಸರ್ಕಾರದವರು ಪೋಲೀಸಿನವರನ್ನು ಯಾವ ಸ್ಥಿತಿಗೆ ತಂದಿದ್ದಾರೆಂದು ಹೇಳುತ್ತೇನೆ. ಬ್ರಾಥೆಲ್ಸ್ ಆಕ್ಟ್, ಗ್ಯಾಂಬ್ಲಿಂಗ್ ಆಕ್ಟ್, ಪ್ರೊಹಿಬಿಷನ್ ಆಕ್ಟ್—ಮುಂತಾದುವುಗಳನ್ನು ತಂದು ಪೋಲೀಸಿನವರಿಗೆ ಒಳ್ಳೆ ಉತ್ತೇಜನ ಕೊಟ್ಟಿದ್ದಾರೆ. ಪೋಲೀಸಿನವರು ಯಾರು ಹೆಂಡವನ್ನು ತಂದು ಮಾರುತ್ತಾನೋ ಅವನನ್ನು ಮುಟ್ಟುವುದಿಲ್ಲ. The husk will be placed before the court and not the rice. ಕುಡಿದ ವಾಸನೆ ಕಂಡರೆ ಅವನನ್ನು ಹಿಡಿದುಕೊಳ್ಳುತ್ತಾರೆ. ಇವೊತ್ತಿಗೂ ಗ್ಯಾಂಬ್ಲಿಂಗ್ ಡೆನ್‌ಗಳಿಂದ ತಿಂಗಳಿಗೆ 200-300 ರೂಪಾಯಿಗಳನ್ನು ತೆಗೆದುಕೊಂಡು ಅವುಗಳನ್ನು ನಡೆದುಕೊಂಡು ಹೋಗಲು ಬಿಟ್ಟಿರುವ ನಿದರ್ಶನಗಳನ್ನು ನಾನು ಕೊಡಬಲ್ಲೆ. ಆದರೆ ಅದನ್ನು ಕೇಳುವವರಿದ್ದಾರೆಯೇ ? ಮಂತ್ರಿಗಳಿಗೆ ಹೇಳೋಣವೆಂದರೆ interviewನೇ ನಮಗೆ ಸಿಕ್ಕುವುದಿಲ್ಲ. ಬಿಳಿ ಟೋಪಿಯವರು ಯಾರಾದರೂ interview ಕೇಳಿದರೆ ತಕ್ಷಣ ಸಿಕ್ಕುತ್ತದೆ.

ಈ ಸಂದರ್ಭದಲ್ಲಿ ಒಂದಂಶವನ್ನು ನಾನು ತಮ್ಮ ಗಮನಕ್ಕೆ ತರಬೇಕು. ಈಗ ಪೋಲೀಸಿನವರ ಮೇಲೆ ಅನೇಕ ಚಾರ್ಜುಗಳನ್ನು ಕೋರ್ಟಿನವರು ಮಾಡುತ್ತಿರುತ್ತಾರೆ. ಯಾವುದಾದರೂ ಖೂನಿ ಕೇಸು ರುಜುವಾತಾಗದೆ ಹೋದರೆ ಪೋಲೀಸರನ್ನು ಮಾತ್ರ ಚಾರ್ಜ್ ಮಾಡುವುದು ಸರಿಯಲ್ಲ. ಕೇಸುಗಳು ರುಜುವಾತಾಗದಿರುವುದಕ್ಕೆ ಪೋಲೀಸರು ಮಾತ್ರ ಕಾರಣರಲ್ಲ. ಎಷ್ಟೋ ವೇಳೆ 357ನೆಯ ಸೆಕ್ಷನ್ ಕೇಸುಗಳೂ ಸಾಬೀತಾಗದೆಹೋಗುತ್ತವೆ. ಇದಕ್ಕೆ ಕಾರಣ, ಜಡ್ಜಿಗಳು adjournmentಗಳನ್ನು ಪದೇಪದೇ ಕೊಡುವುದು. ಇದರಿಂದ ಸಾಕ್ಷಿಗಳು hostile ಆಗುತ್ತಾರೆ. ಆದ್ದರಿಂದ ಕೇಸುಗಳು ಬಿದ್ದುಹೋಗುವುದರಲ್ಲಿ ಪೋಲೀಸಿನವರದೂ ತಪ್ಪಿರುತ್ತದೆ, ಲಾಯರುಗಳದೂ ತಪ್ಪಿರುತ್ತದೆ, ಜಡ್ಜಿಗಳವರದೂ ಸಹ ತಪ್ಪಿದೆ. ಆದ್ದರಿಂದ ಇದಕ್ಕೆಲ್ಲಾ ಪೋಲೀಸರನ್ನು ಮಾತ್ರ charge ಮಾಡುವುದು ಸರಿಯಲ್ಲ. ಈ ನ್ಯೂನತೆಯನ್ನು ಸರಿಪಡಿಸಿದರೆ ಕೇಸುಗಳು ಬಹುಮಟ್ಟಿಗೆ ಬಿದ್ದುಹೋಗುವುದಿಲ್ಲ.

ಪೋಲೀಸ್ ಇಲಾಖೆಯಲ್ಲಿರುವ ಇನ್ನೊಂದು ನ್ಯೂನತೆಯಿಂದ ಹೀಗೆ ಕೇಸುಗಳು ಬಿದ್ದುಹೋಗುತ್ತವೆ. ಈ ಹೊತ್ತು ದಫೇದಾರನಾಗಿದ್ದವನನ್ನು ನಾಳೆ ದಿವಸ ಸಬ್‌ಇನ್ಸ್‌ಪೆಕ್ಟರ್ ಮಾಡಿ ಪ್ರಾಸಿಕ್ಯೂಷನ್ ನಡೆಸುವುದಕ್ಕೆ ಹಾಕಿದರೆ ಆತನೇನು ಮಾಡಿಯಾನು ? Justice fails and the public will suffer.

ಆಮೇಲೆ ಪೋಲೀಸ್ ಇಲಾಖೆಯಲ್ಲಿ ದಕ್ಷತೆ ಎಷ್ಟರಮಟ್ಟಿಗೆ ಅಧೋಗತಿಗೆ ಬಂದಿದೆ, ದೇಶದಲ್ಲಿ lawlessness ಎಷ್ಟರಮಟ್ಟಿಗೆ ಕಾಣಬರುತ್ತಿದೆಯೆಂಬುದನ್ನು ಹೇಳುತ್ತೇನೆ. ನಮ್ಮ ಡಿಸ್ಟ್ರಿಕ್ಟಿನಲ್ಲಿ ತುರುವೇಕೆರೆ ತಾಲ್ಲೂಕಿನ ಅಮ್ಮಸಂದ್ರ ಗ್ರಾಮದಲ್ಲಿ ಒಬ್ಬನ ತೋಟದಲ್ಲಿ ಹೋಗಿ ಕಳ್ಳತನ ಮಾಡುತ್ತಿರುವಾಗ ಯಾವನ ತೋಟದಲ್ಲಿ ಲೂಟಿ ಆಯಿತೋ ಅವನನ್ನು ಹಿಂಸೆಗೆ ಗುರಿಪಡಿಸಿದರು. ಕೆಲವು ಸಂದರ್ಭಗಳಲ್ಲಿ ಅನೇಕ ಅರ್ಜಿಗಳನ್ನು ಕೊಟ್ಟು ಒಂದು-ಒಂದೂವರೆ ವರ್ಷವಾದರೂ ರಿಲೀಫೇ ಇಲ್ಲ. ಕೇಳುವವರೇ ಇಲ್ಲ. ಆಸ್ತಿಪಾಸ್ತಿಗಳಿಗೆ ರಕ್ಷಣೆಯೇ ಇಲ್ಲ ಅಲ್ಲಿ. ತುಮಕೂರು ತಾಲ್ಲೂಕಿನಲ್ಲಿ ಸಹ ಹಾಗೆಯೇ ಇದೆ. ಯಾವೊಬ್ಬ ಮನುಷ್ಯನೂ ಆಸ್ತಿಯಿಟ್ಟುಕೊಂಡು ಹಳ್ಳಿಯಲ್ಲಿ ಸುಖವಾಗಿ ಬಾಳುವುದಕ್ಕೆ ಸಾಧ್ಯವಿಲ್ಲ. ಪೋಲೀಸಿನವರ ಕುಮ್ಮಕ್ಕಿಲ್ಲದೆ ಸ್ವಂತವಾಗಿ, ಆರಾಮದಿಂದ ಇರೋಣವೆಂದರೆ ಸಾಧ್ಯವಿಲ್ಲ. ಯಾವನು ಅಲಾಲ್‌ಟೋಪಿ ಆಟವಾಡುತ್ತಾನೋ ಅವನ ಬೆನ್ನನ್ನು ತಟ್ಟುತ್ತಾರೆ. ಅಧಿಕಾರಿಗಳೂ ಮಂತ್ರಿಗಳೂ ಬಂದರೆ ಯಾರು ದೊಡ್ಡದಾಗಿ salute ಹೊಡೆದು show ಮಾಡಿಕೊಂಡು ದೇಶದ್ರೋಹ ಮಾಡುತ್ತಿರುತ್ತಾನೋ ಅವನಿಗೇ ಪ್ರೋತ್ಸಾಹ. ಈಗ ಈ ಇಲಾಖೆಯಲ್ಲಿ ಅಂಥವರೇ ಜಾಸ್ತಿ. ಸತ್ಪುರುಷರು ಕಡಮೆ. ಹಿಂದಿನ ಕಾಲದಲ್ಲಿ ಪೋಲೀಸ್ ಶಾಖೆ ಯಾವ ರೀತಿ ಇತ್ತೆಂದು ಹೇಳುತ್ತೇನೆ. ನನಗೂ ಇಬ್ಬರು ಐ. ಜಿ. ಪಿ. ಗಳ ಕೈಕೆಳಗೆ ಕೆಲಸಮಾಡುವ ಸುಯೋಗವಿತ್ತು. ಆಗಿನ ಕಾಲದಲ್ಲಿ ಯಾರಾದರೂ ಯಾವುದಾದರೂ ಕೇಸನ್ನು ಪತ್ತೆ ಮಾಡಿತೆಂದರೆ ಅವನಿಗೆ ಇನಾಂಗಳು, ಪ್ರಮೋಷನ್‌ಗಳು ತಕ್ಷಣ ಬರುತ್ತಿದ್ದವು. ಈಗ ಹಾಗಿಲ್ಲ. ಕೇಸುಗಳನ್ನು ಕಷ್ಟಪಟ್ಟು ಪತ್ತೆಮಾಡಿದವನಿಗೆ ಪ್ರಮೋಷನ್ ಇಲ್ಲ. ಏನೂ ಇಲ್ಲದೆ ಕಾಲ ತಳ್ಳುತ್ತಿದ್ದವನಿಗೆ ಪ್ರಮೋಷನ್, ಅವನಿಗೇ ಎಲ್ಲಾ ಉತ್ತೇಜನ.

ಇನ್ನೊಂದು ಸಂದರ್ಭದಲ್ಲಿ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರು ತುರುವೇಕೆರೆ ತಾಲ್ಲೂಕು, ಮಾಚೇನಹಳ್ಳಿ ಗ್ರಾಮಕ್ಕೆ ಹೋಗಿ ಅಲ್ಲಿ ಕೆಲವು ವ್ಯವಹಾರಗಳ ಬಗ್ಗೆ ಆರ್‌ಬಿಟ್‌ರೇಟರಾಗಿ ಒಂದು ತೀರ್ಮಾನ ಕೊಟ್ಟು

ಬಿಟ್ಟಿದ್ದಾರೆ. ಈ ರೀತಿ ಮಾಡಿರತಕ್ಕದ್ದರ ಬಗ್ಗೆ ನಾನು ಸರ್ಕಾರದವರಿಗೆ ಯಾವ ಸಾಕ್ಷ್ಯವನ್ನು ಬೇಕಾದರೂ ಒದಗಿಸಲು ಸಿದ್ಧನಿದ್ದೇನೆ. ಈ ವಿಚಾರಗಳನ್ನೆಲ್ಲಾ ನಾನು ಬಹಳ ಜವಾಬ್ದಾರಿಯಿಂದ ತಿಳಿಸುತ್ತಿದ್ದೇನೆ. ಆದರೆ ಆ ಪೋಲೀಸ್ ಇನ್ಸ್‌ಪೆಕ್ಟರು ಕೊಟ್ಟ ಅರ್ಬಿಟ್ರೇಟರಿ ತೀರ್ಮಾನಕ್ಕೆ ಇನ್ಸ್‌ಪೆಕ್ಟರ ಪಾರ್ಟಿ ಒಪ್ಪದೆಹೋದುದಕ್ಕಾಗಿ ಪೋಲೀಸಿನವರು ಆತನ ಮೇಲೆ ಒಂದೇ ಸಮನಾಗಿ ಹತ್ತು-ಹನ್ನೆರಡು ಕೇಸುಗಳನ್ನು ಹಾಕಿದ್ದಾರೆ. ಇದಕ್ಕೆಲ್ಲ ನಾನು ಸಾಕಷ್ಟು ಸಾಕ್ಷ್ಯ ಕೊಡಬಲ್ಲೆನು. ಅಂತೂ ದೇಶದ ಆಡಳಿತ ಕಾರ್ಯದಲ್ಲಿ ಅಯೋಗ್ಯರಿಗೆ ಪುರಸ್ಕಾರ, ಯೋಗ್ಯರಾದ ಅಧಿಕಾರಿಗಳಿಗೆ ಧರ್ಮಿಷ್ಠರಾದಂಥ ಅಧಿಕಾರಿಗಳಿಗೆ ಯಾವ ಪುರಸ್ಕಾರವೂ ಇಲ್ಲದುದರಿಂದ ಆಡಳಿತ ಹದಗೆಟ್ಟು ಹೋಗಲು ಕಾರಣವಾಯಿತು. ತಪ್ಪಿತಸ್ಥರಾದಂಥ ಪೋಲೀಸ್ ಅಧಿಕಾರಿಗಳನ್ನು ಈ ದಿವಸ ವಿಚಾರಣೆ ನಡೆಸಲು ಯಾರಾದರೂ ಸಿದ್ಧವಾಗಿದ್ದಲ್ಲಿ ನಾನು ಅವರಿಗೆ ಬೇಕಾದಂಥ ಸಾಕ್ಷ್ಯ ಒದಗಿಸಲು ಸಿದ್ಧನಾಗಿದ್ದೇನೆ. ಆದುದರಿಂದ ಸರ್ಕಾರದವರು ದಯೆಯಿಟ್ಟು ಪೋಲೀಸ್ ಇಲಾಖೆ ಅಧಿಕಾರಿಗಳು ಯಾರೂ ತಪ್ಪು ದಾರಿಯಲ್ಲಿ, ನೀಚ ರೀತಿಯಲ್ಲಿ, ಹೋಗದಂತೆ ತಡೆಗಟ್ಟಿ ದೇಶಕ್ಕೆ ನೆಮ್ಮದಿಯನ್ನುಂಟುಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸ್ವಾಮಿ, ನಾನಾಗಲೇ ಆ ತುರುವೇಕೆರೆ ತಾಲ್ಲೂಕಿನ ಸಮಾಚಾರ ಹೇಳಿದೆನಲ್ಲಾ ಆ ಗ್ರಾಮಗಳು ಯಾವುವೆಂದರೆ, ಮಾಚೇನಹಳ್ಳಿ ಮತ್ತು ಅಮ್ಮಸಂದ್ರ. ಇಷ್ಟನ್ನು ಹೇಳಿ ಡಿಮ್ಯಾಂಡನ್ನು ವಿರೋಧಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Dr. R. NAGAN GOWDA (Hospet).—Mr. Speaker, Sir, our Hon'ble friend who spoke just before me spoke at length about the conduct of officers in the Police Department, but I am not going to dilate on that. But I will say this that for the proper development and progress of a country it is absolutely necessary that the citizens should have peace, tranquility and safety in all their undertakings. That is one of the most important things. The man who comes into contact with the ordinary citizen is not either the Superintendent of Police or the Inspector of Police. It is usually the constable who comes into contact with the ordinary citizen and I want to state here that the quality of the men that form our constabulary is the amount of service that the Police Department renders to the public: that is what counts. It is well known that the constable in England have got a good name for service to the public. It is one of the things that we should aspire to get in our country, but the qualifications that the men that we recruit for the constabulary have are rather pretty low. I will not say anything more than that. I would say: let us improve the quality of the men that we require for our constabulary. These are the most important people in our police administration. We are soon going to give compulsory primary education and a very large number of our young men will willingly go and study in the middle and high schools. Let us give preference to men who have had high school education in our constabulary.

Mr. SPEAKER.—Is the chance to be given only to men or to women also?

Dr. R. NAGAN GOWDA.—To both. I think that sometimes it is very necessary that we have women also in the constabulary. Of course, they will have to form a separate unit.

So, coming back to the point, the men that we recruit to the constabulary should have a good education. It is they who come into contact with the common men, the poor agriculturists, the men who go to the third class waiting rooms at railway stations and to bus stands. It is in such places that the people require the help of the police men. After recruiting men with high school education or school final qualification, we should give them promotion as Head Constables and Sub-Inspectors.

Another matter I wish to point out is that, if we recruit men with higher qualifications, we will have to give them higher salaries. We are already spending nearly Rs. 3 crores on Police and if we are to pay higher salaries, the Finance Minister will come and say, "How are we going to find money?" It is, therefore, better to have better qualified men in smaller numbers than lesser qualified men in larger numbers. That way we will be able to provide better qualified men for our constabulary. More than that I will not say here.

Another point I would like to mention is one that probably does not generally apply to all the other parts of Mysore; but, in some parts of our district recently there have been a large number of cases and they have gone undetected. There was a question in this House regarding Hagaribommanahalli by my Hon'ble friend Sri M. M. Patil. I will not apply that to the rest of the State. Probably, that is not the

(DR. R. NAGAN GOWDA.)

case in the other parts of the State. There may be peculiar circumstances in which some of these cases have gone undetected. In cases like that, may I suggest to the Hon'ble Minister to send some specially qualified man to find out what is going on? If things like this have been going on for 5-6 months in Hagaribommanahalli and in Bellary Town where one of the Assistant Commissioner's house was burgled, I think it will be better that we send the intelligence section of the police to that place and find out what is going on there. Otherwise, people will get rather disturbed.

There is another matter which I would like to touch and that is about jails. After all, jails are not intended solely to punish the people who have committed or who are accused of having committed crimes. After they come out of jails, they should be able to make a fresh start in life. When we keep men in jails for years together or for months together, it is better that we teach them some little useful industry. We are all talking about cottage industries. I know that some jails are producing good kamblis but that is not enough.

5 P.M.

Now, we have been giving a certain amount of impetus for cottage industries and we ought to be able to arrange some kind of training in the jail for cottage industries, so that men who come out of the jail would be able to start their lives once again and make a living. After all, why do people commit crimes? Most of them do so for want of comfort, food and things like that. If we show them the way to do so, they would be able to live a decent life.

Sir, on the question of administration of justice, I wish to say one thing. We inherited from this British the finest kind of judiciary in the world. The administration of justice in India can be compared with the quality of administration of justice anywhere in the world. We are proud of the thing we inherited and we are continuing it. The common man must feel that if he went to the court of law, justice would be meted out to him.

Sir, there is one important local problem and that is this. During the time, when Bellary was in Madras, we had Stationary Sub-Magistrates. I think, they are also there in Mangalore. But, in no other part of this newly organised Mysore State there is this cadre of Sub-Magistrate. Merely having 4 or 5 men as Sub-Magistrates and continue them as such is rather very inconvenient both for the administration and for the personnel. It is better that they are obsorbed in the rest of arrangements that we have in Mysore. Convert them to that of a Munsiff or something like that. With these remarks, I support the three Demands that are placed before us.

*ಶ್ರೀ ಪುಟ್ಟೇಗೌಡ (ಅರಕಲಗೂಡು).—ಅಧ್ಯಕ್ಷರೇ, ಈ ದಿವಸ ನನಗೆ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ವಂದನೆಗಳು. ಈಗ ಪೋಲೀಸ್ ಇಲಾಖೆಯ ವಿಚಾರದಲ್ಲಿ ಅನೇಕ ಸದಸ್ಯರು ದಕ್ಷತೆ ಕಡಮೆಯಾಗಿದೆ ಎಂದು ಹೇಳಿ ಟೀಕೆಗಳನ್ನು ಮಾಡಿದ್ದಾರೆ. ಆದರೆ ದಕ್ಷತೆ ಯಾವುದರಿಂದ ಕಡಮೆ ಯಾಗಿದೆ, ಏಕೆ ಎಂದು ವಿಚಾರ ಮಾಡಿದರೆ, ಇದಕ್ಕೆ ನಮ್ಮ ಸರ್ಕಾರವೇ ಕಾರಣ ಎಂದು ನಾನು ಹೇಳಬೇಕಾಗಿದೆ. ನಮ್ಮ ಮೈಸೂರು ಸಂಸ್ಥಾನ ಮಾದರೀ ಸಂಸ್ಥಾನ ಎಂದು ಹೇಳಿ ಹೊರಗಡೆಯವರೆಲ್ಲಾ ತಿಳಿದು ಕೊಂಡಿದ್ದಾರೆ. ಮೈಸೂರಿನಲ್ಲಿರತಕ್ಕ ಜನ ಬುದ್ಧಿವಂತರು ದಕ್ಷರು ಶಕ್ತರು ಎಂದು ಹೇಳುತ್ತಾ ಇದ್ದಾರೆ. ಅದಕ್ಕೆ ಉದಾಹರಣೆಯಾಗಿ ಕೇಂದ್ರ ಸರ್ಕಾರದವರು ಒಬ್ಬರಲ್ಲ ಎಂದು ಹೇಳಿ ಇಬ್ಬರನ್ನು ಮಂತ್ರಿಗಳನ್ನಾಗಿ ತೆಗೆದುಕೊಂಡಿದ್ದಾರೆ. ಹಿಂದೆ ಹೈದರಾಬಾದಿನಲ್ಲೂ ಸಹ ಮೈಸೂರಿನವರಾದ ಮೇಲ್‌ಕೋಟೆ ಅವರು ಮಂತ್ರಿಗಳಾಗಿ ಕೆಲಸಮಾಡಿ ಒಳ್ಳೆಯ ಹೆಸರು ಪಡೆದಿದ್ದಾರೆ. ಈ ದಿವಸ ಇಂಡಿಯಾ ದೇಶದ ರಕ್ಷಣೆಯನ್ನು ಕೈಹಿಡಿದಿರುವ ಜನರಲ್ ತಿಮ್ಮಯ್ಯನವರು ಮೈಸೂರು ಸಂಸ್ಥಾನದವರಾಗಿದ್ದಾರೆ. ಅಂಥದರಲ್ಲಿ ಹೊರಗಡೆ ಸಂಸ್ಥಾನದಲ್ಲಿ ಒಬ್ಬ ಅಧಿಕಾರಿಗಳ ಸರ್ವೀಸನ್ನು 30 ವರ್ಷ ಉಪಯೋಗಿಸಿಕೊಂಡು ಅವರಿಂದ ಇನ್ನು ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ರಿಟೈರ್ ಮಾಡುವಂಥ ಕಾಲದಲ್ಲಿ ಅವರಿಗೆ ನಮ್ಮ ಮೈಸೂರು ದೇಶದ ಪೋಲೀಸ್ ಇಲಾಖೆಯ ಒಂದು ಉನ್ನತ ಹುದ್ದೆಯನ್ನು ಕೊಟ್ಟು ನಮ್ಮ ಪೋಲೀಸ್ ಇಲಾಖೆಯ ದಕ್ಷತೆಯನ್ನು ಕಡಮೆಮಾಡಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಏಕೆ? ಮೈಸೂರು ದೇಶದಲ್ಲಿ ದಕ್ಷರು ಇಲ್ಲವೆ? ನಮ್ಮ ಸಭಾನಾಯಕರು ನಮ್ಮ ಸರ್ಕಾರವನ್ನು ಆಳುತ್ತಾ ಇಲ್ಲವೆ! ನಮ್ಮ ನಾಯಕರು, ಸರ್ಕಾರ ಆಳತಕ್ಕವರು ಇರುವಾಗ ಒಂದು ಐ. ಜಿ. ಪಿ. ಕೆಲಸಮಾಡುವುದಕ್ಕೆ ದಕ್ಷತೆ ಇಲ್ಲ ಎಂದು ಹೇಳುವುದಾದರೆ, ಇಲಾಖೆಯಲ್ಲಿ ಕೆಲಸಮಾಡತಕ್ಕವರಲ್ಲಿ ಎಷ್ಟುಮಟ್ಟಿಗೆ ದಕ್ಷತೆ ಕಡಮೆಯಾಗುತ್ತದೆ ಎಂಬುದನ್ನು ಸಭೆಯವರು ಯೋಚನೆಮಾಡಬೇಕಾಗಿದೆ. ನಮ್ಮ ಮಾನ್ಯ ನಾಯಕರೂ ಸಹ ಈ ವಿಷಯದಲ್ಲಿ ಯೋಚನೆ ಮಾಡಬೇಕು. ದಕ್ಷತೆಯಿಂದ ಕೆಲಸ

ಮಾಡೋಣ, ಒಂದು ಒಳ್ಳೆಯ ಹೆಸರು ತೆಗೆದುಕೊಳ್ಳೋಣ ಎನ್ನತಕ್ಕಂಥ ಬುದ್ಧಿಶಾಲಿಗಳಾದ ಜನರು ಈ ಇಲಾಖೆಯಲ್ಲಿ ಇದ್ದಾರೆ. ಹಾಗಿರುವಾಗ ಮದರಾಸು ಅಥವಾ ಬೊಂಬಾಯಿಯಿಂದ ಒಬ್ಬ ಅಧಿಕಾರಿಗಳನ್ನು ತಂದು ನೇಮಿಸಿದ್ದೀರಿ. ಇದರಿಂದ ಅವರ ಉತ್ಸಾಹ ಎಲ್ಲಾ ಕುಂದಿ ಅವರ ದಕ್ಷತೆ ಬಹಳ ಹೀನಸ್ಥಿತಿಗೆ ಬಂದಿದೆ ಎಂದು ಹೇಳಬೇಕಾಗಿದೆ. ಇದರಿಂದ ದರೋಡೆ, ಕಳ್ಳತನ, ಮೋಸ ಜಾಸ್ತಿಯಾಗುವುದಕ್ಕೆ ನಮ್ಮ ಪೋಲೀಸಿನವರೇ ಕಾರಣರಾಗುತ್ತಾರೆ. ಈ ರೀತಿ ದಕ್ಷತೆ ಕಡಮೆ ಮಾಡಿರುವುದಕ್ಕೆ ಸರ್ಕಾರದ ನಾಯಕರೇ ಕಾರಣ ಎಂದು ಈ ಸಭೆಯಲ್ಲಿ ಹೇಳುತ್ತಾ ಇದ್ದೇನೆ. ಇನ್ನು ಮುಂದಾದರೂ ಸಹ ಇಂಥ ಕೆಲಸಕ್ಕೆ ಅವಕಾಶ ಕೊಡದೆ ನಮ್ಮಲ್ಲಿ ದಕ್ಷರಾಗಿರತಕ್ಕ ಅಧಿಕಾರಿಗಳು ಬೇಕಾದಷ್ಟು ಜನರಿದ್ದಾರೆ ಅಂತಹವರಿಗೆ ಅವಕಾಶಕೊಟ್ಟು ಉನ್ನತ ಹುದ್ದೆಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಲು ಅವಕಾಶಮಾಡಿಕೊಟ್ಟು ಈಗ ಕಡಮೆಯಾಗಿರತಕ್ಕ ದಕ್ಷತೆಯನ್ನು ಹೆಚ್ಚಿಸುತ್ತೀರಿ ಎಂದು ನಾನು ನಂಬಿದ್ದೇನೆ.

Dr. R. NAGAN GOWDA.—The present I. G. P. is a native of Mysore State, Sir.

ಶ್ರೀ ಪುಟ್ಟೇಗೌಡ.—ಬಹಳ ಸಂತೋಷ.

ಅಧ್ಯಕ್ಷರು.—ಮೈಸೂರು ಸಂಸ್ಥಾನ ಎಂದರೆ, ಹಳೆಯ ಮೈಸೂರು ಸಂಸ್ಥಾನವಲ್ಲ, ಹೊಸ ಮೈಸೂರು ಸಂಸ್ಥಾನ.

ಶ್ರೀ ಪುಟ್ಟೇಗೌಡ.—ಅವರನ್ನು ಸ್ವಾಗತಿಸುತ್ತೇನೆ. ಈಗ ಪೋಲೀಸ್ ಇಲಾಖೆಯಲ್ಲಿ ಮೂರು ಹುದ್ದೆಗಳನ್ನು ಇಟ್ಟುಕೊಂಡಿದ್ದೀರಿ. ಸಬ್‌ಇನ್‌ಸ್ಪೆಕ್ಟರ ಕೆಳಮಟ್ಟದಲ್ಲಿ ಒಂದು ಜಮಾದಾರ್ ಪೋಸ್ಟ್ ಇದೆ. ಅವನಿಗೆ ಯಾವ ಪೋರ್ಟ್‌ಫೋಲಿಯೋ ಸೇರಿದೆ ಎನ್ನುವುದು ಜನಗಳಿಗೆ ಗೊತ್ತಿಲ್ಲ. ಇನ್‌ಸ್ಪೆಕ್ಟರ ಪೋಸ್ಟ್ ಒಂದು ಇದೆ. ಅವರು ತಿಂಗಳಾಗುತ್ತಲೇ ಸಂಬಳ ತೆಗೆದುಕೊಂಡು ಹೋಗತಕ್ಕ ಪರಿಸ್ಥಿತಿ ಇದೆ. ಅವರಿಂದ ಏನೂ ಪ್ರಯೋಜನವಿಲ್ಲ ಎಂದು ಹೇಳುತ್ತೇನೆ. ಅವರಿಗೆ ಒಂದು ಫೈನಲ್ ಆರ್ಡರ್ ಮಾಡತಕ್ಕ ಅವಕಾಶವಿಲ್ಲ. ವಜಾಮಾಡತಕ್ಕ ಅವಕಾಶವೂ ಸಹ ಇಲ್ಲ. ಎ.ಎಸ್.ಪಿ. ಪೋಸ್ಟು ಸಹ ಅದೇ ರೀತಿ ಆಗಿದೆ. ಈ ಮೂರು ಪೋಸ್ಟುಗಳೂ ಸಹ ಅನಾವಶ್ಯಕ ಎಂದು ಹೇಳುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಜನರಲ್ ಎಲೆಕ್ಷನ್ ಆಗುವಾಗ ಸಮಾನ್ಯವಾಗಿ ಅಣುಕು ಚುನಾವಣೆ ಎಂದು ಇಟ್ಟಿದ್ದರು. ಅದೇ ರೀತಿ ನೀವು ನಾಲ್ಕು ಜಾತ್ರೆಗಳನ್ನು ಪರೀಕ್ಷಾರ್ಥವಾಗಿ ತೆಗೆದುಕೊಂಡು ಯಾವ ಪೋಲೀಸ್ ಅಧಿಕಾರಿಗಳನ್ನೂ ಹಾಕದೆ ತಾಲ್ಲೂಕು ಅಧಿಕಾರಿಗಳಿಂದಲೇ ನಡೆಸಿ, ಕಳ್ಳತನ ಆಗುತ್ತದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡಿ. ಎಲ್ಲಿ ಪೋಲೀಸ್‌ನವರು ಜಾಸ್ತಿಯಾಗಿರುತ್ತಾರೋ ಅಲ್ಲೇ ಕಳ್ಳತನ, ಸುಲಿಗೆ, ಜೂಜು, ಮೋಸ ಎಲ್ಲಾ ಇರುತ್ತವೆ. ಹಳೆಯ ಮೈಸೂರಿನ 16 ಸಾವಿರ ಹಳ್ಳಿಗಳಲ್ಲಿ ಎಲ್ಲಾದರೂ ಸರಿಯೇ ತಾವು ಈ ರೀತಿ ಒಂದು ಪ್ರಯೋಗಮಾಡಿ ನೋಡಿ, ಎಷ್ಟೋ ಕಳ್ಳತನ, ದರೋಡೆ ಕಡಮೆಯಾಗುತ್ತದೆ ಎಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಎಷ್ಟೋ ಕಡೆ ಮನೆಗೆ ಬೀಗಗಳನ್ನೇ ಹಾಕುವುದಿಲ್ಲ, ಗದ್ದೆ ಕೆಲಸಕ್ಕೆ ಹೊರಟು ಹೋಗುತ್ತಾರೆ. ಒಂದು ಕಳ್ಳತನ ಕೂಡ ನಡೆಯುವುದಿಲ್ಲ. ಎಲ್ಲಿ ಪೋಲೀಸ್‌ನವರು ಇರುತ್ತಾರೋ. ಅಲ್ಲೇ ಕಳ್ಳತನ ಷುರುವಾಗಿರುತ್ತದೆ. ಜಾತ್ರೆಗೆ ಕಳ್ಳರನ್ನು ಕಳುಹಿ, ಜೊತೆಯಲ್ಲೂ ಕರೆದುಕೊಂಡು ಹೋಗಿ ಪಿಕ್ ಪಾಕೆಟ್ ಮುಂತಾದುವುಗಳನ್ನು ಮಾಡಿಸುತ್ತಾರೆ. ರೈತ ದನಕರು ಕೊಂಡುಕೊಳ್ಳಬೇಕೆಂದು ಜಾತ್ರೆಗೆ ಹೋಗಿರುತ್ತಾನೆ. ಅಂತಹವರಿಂದ ದುಡ್ಡು ತೆಗೆದುಕೊಳ್ಳುತ್ತಾರೆ. ಎರಡು ಮೂರು ಜಾತ್ರೆಗಳನ್ನು ಆರಿಸಿಕೊಂಡು ತಾಲ್ಲೂಕು ಅಧಿಕಾರಿಗಳ ವಶಕ್ಕೆ ಬಿಟ್ಟು ನೋಡಿ, ಒಂದು ಕಳ್ಳತನವೂ ಸಹ ಆಗುವುದಿಲ್ಲ ಎಂದು ನಾನು ಈ ಸಭೆಯಲ್ಲಿ ಸಲಹೆ ಮಾಡುತ್ತೇನೆ.

ಪೋಲೀಸ್‌ನವರಿಗೆ 56 (o) ಸೆಕ್ಷನ್ ಒಂದು ಕೊಟ್ಟಿದ್ದೀರಿ. ಸಂತೆಯಲ್ಲಿ ಹತ್ತು ಸಾವಿರ ಜನ ಸೇರಿರುತ್ತಾರೆ, ಎಲ್ಲೋ ಜಗಳ ಆಯಿತು ಎಂದರೆ ಇವರು ಬಂದು ಅವರ ಮನಸ್ಸಿಗೆ ಬಂದವರನ್ನು ಹಿಡಿದುಕೊಂಡು ಆ ಸೆಕ್ಷನ್ ಪ್ರಕಾರ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಕೇಸುಹಾಕುತ್ತಾರೆ. ಅವರಿಗೆ ಇನ್ಯಾರ ಸಾಕ್ಷಿಯೂ ಬೇಡ, ಅವರೇ ಸಾಕ್ಷಿ. ಮಾಜಿಸ್ಟ್ರೇಟ್ ಕೋರ್ಟಿನಲ್ಲಿ ಇಂಥ ಕೇಸು ಹಾಕಿರುವ ನಿದರ್ಶನ ಕೊಡುತ್ತೇನೆ. ಇಂಥ ಅನ್ಯಾಯವನ್ನು ಸರಿಪಡಿಸಲಿಕ್ಕೆ ಮುನಿಸಿಪಲ್ ಸದಸ್ಯರೆಲ್ಲರೂ ಸೈನ್ ಹಾಕಿ ಟೆಲಿಗ್ರಾಂ ಕೂಡ ಹೋಂ ಮಿನಿಸ್ಟರಿಗೂ ಮತ್ತು ಐ. ಜಿ. ಪಿ.ಯವರಿಗೂ ಕೊಟ್ಟಿದ್ದೆವು. ನಮ್ಮ ದೇಶದ ರೈತರು ನಮ್ಮ ದೇಶದ ಆಸ್ತಿ ಎಂದು ತಿಳಿದುಕೊಂಡಿರತಕ್ಕ ಸಂದರ್ಭದಲ್ಲಿ ರೈತರಿಗೆ ಹೀನಾಯವಾಗತಕ್ಕ ಕೆಲಸವನ್ನು ಮಾಡುವುದಕ್ಕೆ ಪೋಲೀಸ್‌ನವರಿಗೆ ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ರೈತರ ವಿಷಯದಲ್ಲಿ ಬಹಳ ಕನಿಕರದಿಂದ ಸರ್ಕಾರ ವರ್ತಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ರೈತರು ಇಲ್ಲದೇ ಇದ್ದರೆ ಖಂಡಿತವಾಗಿಯೂ ಈ ದಿವಸ ಸರ್ಕಾರ ನಡೆಯುವುದಿಲ್ಲ. ಇದೇ ರೀತಿ ಹಿಂದೆ ಮಾಡಿರತಕ್ಕ ಕಾನೂನನ್ನು ಮುಂದುವರಿಸಿದರೆ ಪೋಲೀಸ್ ಇಲಾಖೆಯಿಂದ ಬಹಳ ಅನ್ಯಾಯವಾಗುತ್ತದೆ ಎಂದು ಹೇಳುತ್ತೇನೆ.

ಈ ವಿಷಯದಲ್ಲಿ ನನಗೆ ಒಂದು ಅಭಿಪ್ರಾಯ ಇದೆ. ನಮ್ಮ ಮೈಸೂರಿಗೆ ಸೇರಿರತಕ್ಕವರು ನಮ್ಮ ದೇಶದ ಹೊರಗಡೆ ಉನ್ನತವಾದ ಹೆಸರನ್ನು ಗಳಿಸಿರುವಂತೆಯೇ ನಮ್ಮ ಹೊಸ ಮೈಸೂರಿಗೆ ಬಂದಿರತಕ್ಕ ಹೋಂ ಮಿನಿಸ್ಟರವರೂ ಮತ್ತು ಐ. ಜಿ. ಪಿ. ಯವರೂ ಈಗ ನಮ್ಮವರೇ ಆಗಿರುವುದರಿಂದ ದೇಶದಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಕಲ್ಪಿಸಿ ಅವರಷ್ಟೇ ಒಳ್ಳೆಯ ಹೆಸರನ್ನು ತೆಗೆದುಕೊಳ್ಳುತ್ತಾರೆ ಎಂಬ ನಂಬಿಕೆ ನನ್ನಲ್ಲಿದೆ ಎಂದು ಬಹಳ ಸಂತೋಷದಿಂದ ಹೇಳುತ್ತೇನೆ. ಹಿಂದಿನ ದಕ್ಷತೆಯನ್ನು ಇವರ ಕಾಲದಲ್ಲಾದರೂ ಕಾಪಾಡಬೇಕೆಂದು ಹೇಳಿ ಅರಿಕೆ ಮಾಡಿಕೊಂಡು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

(Several Members rose)

Mr. SPEAKER.—I have given chance to 18 members. I am watching whether Sri Kenchappa is going to speak, because he is he Leader of the Opposition. I am looking at him; he is not standing up; what can I do? (*Laughter*)

Sri K. KENCHAPPA (Hiriyur).—I want to speak, Sir.

Mr. SPEAKER.—That is all right; I will give a chance. I have given 5 out of 18 to your side. I must also give chances to others.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರುವ ಮೂರು ಬೇಡಿಕೆಗಳನ್ನು ಸ್ವಾಗತ ಮಾಡುತ್ತ ಅವುಗಳಲ್ಲಿ ಕೆಲವೊಂದು ಆಡಳಿತಗಳಲ್ಲಿ ಸುಧಾರಣೆ ಮಾಡಿಕೊಳ್ಳಲಿಕ್ಕೆ ಸರ್ಕಾರದವರಿಗೆ ನಾನು ಸಲಹೆ ಮಾಡಬೇಕೆಂದು ಇಷ್ಟಪಡುತ್ತೇನೆ. ಪ್ರಥಮತಃ ನ್ಯಾಯವಿಚಾರದಲ್ಲಿ, ಜಸ್ಟಿಸ್‌ವಿಚಾರದಲ್ಲಿ ಹೇಳಬೇಕಾದರೆ, ತುಂಗಭದ್ರ ಜಲಾಶಯದಲ್ಲಿ ಮುಳುಗಡೆಯಾಗಿ ಬೇರೆ ಕಡೆ ನೆಲಸಿರತಕ್ಕಂಥ ಜನರ ಆಸ್ತಿಗಳಲ್ಲಿ ವಿಶೇಷವಾಗಿ ವಿಧವೆಯರ ಮತ್ತು ಅಲ್ಪ ವಯಸ್ಸಿನೊಳಗೆ ಇರುವವರಿಗೆ ಕೊಡಬೇಕಾದಂಥ ಹಣವನ್ನು ಕೋರ್ಟಿನಲ್ಲಿ ಡಿಪಾಸಿಟ್ ಹಾಕಿರುವುದರಿಂದ ಅವರಿಗೆ ಈ ಡಿಪಾಸಿಟ್ ಹಣವನ್ನು ನೇರವಾಗಿ ಕೈಗೆ ಕೊಡಲಿಕ್ಕೆ ಅವಕಾಶವಿಲ್ಲದೆ ಇರುವ ಸಂದರ್ಭವಿದೆ. ಅವರುಗಳು ಬೇರೆ ಜಮೀನುಗಳನ್ನು ಖರೀದಿ ಮಾಡಿಕೊಳ್ಳಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಪರಿಹಾರವನ್ನು ಪಡೆಯಬೇಕಾಗಿದ್ದರೆ ಬಹಳ ತೊಂದರೆಯಾಗುತ್ತಿದೆ. ಅನೇಕ ವಿಧವೆಯರು ಬೇರೆಯವರ ಕಡೆಯಿಂದ ಜಮೀನನ್ನು ಖರೀದಿಮಾಡಿ, ಸೇಲ್ ಡೀಡ್ ಒಪ್ಪಿಸಿ, ಒಂದು ವರ್ಷದಲಾಗಾಯ್ತು ಕೋರ್ಟಿಗೆ ಹಣಕ್ಕಾಗಿ ಅಲೆದಾಡುತ್ತಿದ್ದರೂ ಕೂಡ ಜಮೀನು ಮಾರಿದವರಿಗೆ ಪರಿಹಾರ ಸಿಕ್ಕದೆ ಅನೇಕ ತೊಂದರೆಗಳಾಗುತ್ತಿವೆ. ವಿಶೇಷವಾಗಿ ಯಾವ ಜನ ಈ ನೀರಾವರಿ ಮುಳುಗಡೆಯ ಪ್ರದೇಶಗಳಿಂದ ಬೇರೆ ಕಡೆ ಹೋಗಿ ನೆಲಸಿದ್ದಾರೆಯೋ ಅಂಥವರ ಕಷ್ಟಸುಖಗಳನ್ನು ಜಾಗ್ರತೆ ತೀರಿಸಬೇಕಾದದ್ದು ಕೋರ್ಟಿನವರ ಕರ್ತವ್ಯ. ಆದರೆ ಈಗಿನ ಆಡಳಿತದಲ್ಲಿ ಬಹಳ ತಡವಾಗುತ್ತಿದೆ. ಅನೇಕ ಕೇಸುಗಳು ಈಗ. ನಾಲ್ಕು ವರ್ಷಗಳಲಾಗಾಯ್ತು ಹೈಕೋರ್ಟಿನಲ್ಲಿವೆ ಹೈಕೋರ್ಟಿನಲ್ಲಿ ಕೇಸುಗಳು ಪೆಂಡಿಂಗ್‌ನಲ್ಲಿದ್ದು ತೀರ್ಮಾನವಾಗದೆ ಇರುವುದರಿಂದ ಜನತೆಗೆ ಬಹಳ ತೊಂದರೆಯಾಗುತ್ತಿದೆ. ಶ್ರೀ ಮಲ್ಲಪ್ಪ ಸಮಿತಿಯವರು, ನಮ್ಮ ಜಿಲ್ಲೆಯ ಪಶ್ಚಿಮ ತಾಲ್ಲೂಕಿನಲ್ಲಿ ಕ್ರಿಮಿನಲ್ ಕೇಸುಗಳು ಜಾಸ್ತಿಯಾಗಿರುವುದರ ದೆಸೆಯಿಂದ ಅಲ್ಲಿಯವರ ಸಲುವಾಗಿ ಹರಪನಹಳ್ಳಿಯಲ್ಲಿ ಒಂದು ಕೋರ್ಟ್ ಆಗಬೇಕೆಂದು ತಮ್ಮ ರಿಪೋರ್ಟಿನಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿಯವರೆಗೂ ಕಾರ್ಯಗತ ಮಾಡದೆ ಇರುವುದರಿಂದ ಆ ಬಗ್ಗೆಯೂ ಜನಗಳಿಗೆ ಅನೇಕ ಸಂದರ್ಭಗಳಲ್ಲಿ ಹೆಚ್ಚಿನ ಖರ್ಚು ಬೀಳತಕ್ಕ ಪರಿಸ್ಥಿತಿ ಇದೆ. ಆದುದರಿಂದ ಈ ಪ್ರದೇಶದಲ್ಲಿನ ಸಾಮಾನ್ಯ ಜನತೆಗೆ ಅನುಕೂಲವಾಗುವಂತೆ, ಮಲ್ಲಪ್ಪ ಸಮಿತಿಯವರ ಶಿಫಾರಸಿನಂತೆ, ಹರಪನಹಳ್ಳಿಯಲ್ಲಿ ಒಂದು ಕೋರ್ಟನ್ನು ಮಾಡುವುದು ಉತ್ತಮವೆಂದು ಹೇಳುತ್ತಿದ್ದೇನೆ.

ಇನ್ನು ಪೋಲೀಸ್ ಇಲಾಖೆಯ ವಿಚಾರದಲ್ಲಿ ನಾನು ಹಿಂದೆಯೇ ಮಾತನಾಡಿದ್ದೇನೆ. ಆದರೆ ಈಗಲೂ ಕೂಡ ಮಾತನಾಡತಕ್ಕ ಪರಿಸ್ಥಿತಿ ಏನು ಎಂದರೆ, ಇತ್ತೀಚೆಗೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯವನ್ನು ಪಡೆದು ಕೊಂಡಿದ್ದೇವೆ. ನಮ್ಮ ಜನಾಂಗ ಸುಖವಾಗಿರಬೇಕು ಸುಖವಾಗಿರಬೇಕಾಗಿದ್ದರೆ ಸರ್ಕಾರದವರು ಅತಿ ಮುಖ್ಯವಾಗಿ ಆಹಾರ ಮತ್ತು ವಸ್ತ್ರವನ್ನು ಒದಗಿಸಿಕೊಡಬೇಕಾದದ್ದು ಹೇಗೆ ಕರ್ತವ್ಯವೋ ಅದೇ ರೀತಿ ಜನತೆಗೆ ಸಂಕಟ ಪರಿಸ್ಥಿತಿ ಉಂಟಾಗುತ್ತಿದ್ದರೆ ಅಂಥ ಸಂಕಟ ಪರಿಸ್ಥಿತಿಯಲ್ಲಿ ರಕ್ಷಣೆಯನ್ನು ಒದಗಿಸಿ ಕೊಡಬೇಕಾದದ್ದೂ ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಇತ್ತೀಚೆಗೆ ಪೋಲೀಸ್ ಆಡಳಿತದಲ್ಲಿ, ವಿಶೇಷವಾಗಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ, ಅದರಲ್ಲಿಯೂ ನಾನು ನೆಲಸಿರುವ ಹಗರಿಬೊಮ್ಮನಹಳ್ಳಿ ಪ್ರದೇಶದಲ್ಲಿ, ಮೇಲಿಂದ ಮೇಲೆ ಜನತೆಯ ವಿತ್ತಾಪಹರಣ ಮುಂತಾದ ಘಟನೆಗಳು ಜರುಗುತ್ತಿವೆ. ಈಗಾಗಲೇ ನನ್ನ ಮಾನ್ಯ ಮಿತ್ರರಾಗಿರತಕ್ಕ ನಾಗನಗೌಡರು ಅದರ ಬಗ್ಗೆ ಒಂದು ಸಲಹೆಮಾಡಿದ್ದಾರೆ. ನಾನೂ ಆ ವಿಚಾರದಲ್ಲಿ ಹೇಳಬೇಕು ಎಂದರೆ ಈಗ ಪೋಲೀಸ್ ಖಾತೆಯಲ್ಲಿ ದಕ್ಷತೆ ಬಹಳ ಕಡಮೆಯಾಗಿದೆ. ಅದನ್ನು ಮೇಲಿಂದ ಮೇಲೆ ಪರೀಕ್ಷೆಮಾಡಬೇಕು. ಹಾಗೆ ಪರೀಕ್ಷೆಮಾಡುವಾಗ ಯಾವ ರೀತಿಯಲ್ಲಿ ಮಾಡಬೇಕು ಎಂದರೆ, ಪೋಲೀಸ್ ಖಾತೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಬೇರೆ ದಕ್ಷರಾದ C.I.D. ಇಲಾಖೆಯನ್ನು ಇಟ್ಟು ಎಲ್ಲೆಲ್ಲಿ ಯಾವ ರೀತಿ ವ್ಯವಹಾರಗಳು ನಡೆಯುತ್ತಿವೆ ಎಂದು ತಿಳಿಯಬೇಕು. ಯಾವುದಾದರೂ ಭಾಗದಲ್ಲಿ ಅಧಿಕಾರಿಗಳು ಅವರು ಇರಬೇಕಾದ ಅವಧಿಗಿಂತ ಜಾಸ್ತಿ ಅವಧಿಯವರೆಗೆ ಅಲ್ಲಿ ಇರುವುದರಿಂದ ಇಂಥ ಕಾರ್ಯಗಳು ಅವರಿಂದಲೂ ಕೂಡ ಆಗುತ್ತವೆ ಎಂಬುದನ್ನು ಆಡಳಿತ ನಡೆಸತಕ್ಕವರು ತಿಳಿದುಕೊಳ್ಳಬೇಕು. ಒಂದು ಉದಾಹರಣೆ ಹೇಳಬೇಕು ಎಂದರೆ, ಕಳೆದ ಹಂಪೆ ವಿರೂಪಾಕ್ಷ ದೇವರ ಜಾತ್ರೆಯಲ್ಲಿ, ಹಂಪೆ ದೇವಸ್ಥಾನದಲ್ಲಿ ಪೋಲೀಸ್ ಕಾನ್‌ಸ್ಟೇಬಲ್ ಒಬ್ಬನು ಒಬ್ಬ ಮಹಿಳೆಯ ಕತ್ತಿನಲ್ಲಿದ್ದ ಸರವನ್ನು ತೆಗೆಯತಕ್ಕ ಪ್ರಸಂಗ ಬಂದಾಗ್ಗೆ ಆ ಮಹಿಳೆಯ ಯಜಮಾನನಾಗಿರುವವನು ಆ ವ್ಯಕ್ತಿಯನ್ನು ಹಿಡಿದು ಪೋಲೀಸಿನವರಿಗೆ ಒಪ್ಪಿಸಿದನು. ಇಂಥ ಘಟನೆಗಳು ನಡೆಯುತ್ತಿರಬೇಕಾದರೆ, ಪೋಲೀಸಿನವರು ಕೂಡ ಇಂಥ ಘಟನೆಗಳಲ್ಲಿ ಭಾಗಿಗಳಾಗಿರಬೇಕಾದರೆ, ಹೆಚ್ಚು ಟೀಕೆ ಮಾಡಲೇಬೇಕು. ಮಾನ್ಯ ಮಂತ್ರಿಗಳಿಗೆ ಆಡಳಿತದಲ್ಲಿ ಕರ್ತವ್ಯ ಜಾಸ್ತಿಯಾಗಿದೆ ಎಂದು ಒಬ್ಬ ಉಪ-ಮಂತ್ರಿಗಳನ್ನು ಕೊಟ್ಟಿದ್ದೇವೆ. ಯಾವ ಯಾವ ಕಡೆ ಏನೇನು ವಿದ್ಯಮಾನಗಳು ನಡೆಯುತ್ತಿವೆ ಎಂದು surprise visit ಕೊಟ್ಟು ಏನೇನು ತೊಂದರೆಗಳಿವೆ ಎಂಬುದನ್ನು ತಿಳಿದುಕೊಳ್ಳುವುದು ಸಾಧುವಾದುದು ; ಮತ್ತು ಕೆಲವು ಮಟ್ಟಿಗೆ ತಪ್ಪು ಮಾಡಿದವರಿಗೆ ಉಗ್ರ ಶಿಕ್ಷೆಯನ್ನು ವಿಧಿಸತಕ್ಕ ಕಾರ್ಯಕ್ರಮಗಳೇನಿವೆ ಅವುಗಳನ್ನು ತೆಗೆದುಕೊಂಡಲ್ಲಿ ಜನತೆಗೆ ರಕ್ಷಣೆಯನ್ನು ನೀಡಿದಂತಾಗುವುದು. ನಾನು ಇರತಕ್ಕ ಪ್ರದೇಶದಲ್ಲಿ ಜನರು ಎಷ್ಟೋ ಭಯಗೊಂಡಿದ್ದಾರೆ. ಇವೊತ್ತು ನಮ್ಮ ಆಸ್ತಿ ಹೋದರೂ ಚಿಂತೆಯಿಲ್ಲ ನಾಳೆಯದಿನ ಸಂಪಾದನೆಮಾಡಿಕೊಳ್ಳಬಹುದು. ಆದರೆ ಸುಖವಾಗಿ ಇರುವುದಕ್ಕೆ ಸಾಧ್ಯವಿಲ್ಲದೆ ಹೋದ ಮೇಲೆ ಏನು ಮಾಡುವುದು ಎಂದು ತಿಳಿದುಕೊಂಡು ಬೇರೆಕಡೆ ಹೋಗಿ ನೆಲಸತಕ್ಕ ಸಂದರ್ಭ ಬಹು ಕುಟುಂಬಗಳಿಗೆ ಬಂದಿದೆ. ಇಂಥ ಪರಿಸ್ಥಿತಿ ಇರುವಾಗ C.I.D.ಗಳನ್ನು ಕಳುಹಿಸುತ್ತಾ ಆಗಾಗ್ಗೆ surprise check ಮಾಡುತ್ತಾ ಬರಬೇಕು.

ಮತ್ತೊಂದು ವಿಚಾರ ನಾನು ಸಲಹೆ ಮಾಡತಕ್ಕದ್ದೇನೆಂದರೆ, ಪೋಲೀಸ್ ಆಡಳಿತದಲ್ಲಿ ದಕ್ಷತೆ ಬರಬೇಕು ಎಂದು ಹೇಳುತ್ತಿರುವಂತೆಯೇ, ಅದರ ಜೊತೆಯಲ್ಲಿ ನಾವು ಕೂಡ ಅವರಿಗೆ ಕೊಡಬೇಕಾದ ಪರಿಹಾರ ಹಣ, ಸಂಬಳ ಇತ್ಯಾದಿಗಳನ್ನು ಸರಿಯಾಗಿ ಕೊಡದೆ ಇದ್ದರೆ ಆಡಳಿತದಲ್ಲಿ ದಕ್ಷತೆ ಬರಲಿಕ್ಕೆ ಅವಕಾಶವಿರುವುದಿಲ್ಲ. ಉದಾಹರಣೆಗೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಆದವನಿಗೆ ಹದಿನೈದು ರೂಪಾಯಿ ಸಂಬಳ ಕೊಡುತ್ತಿದ್ದಾರೆ. ಅವನಿಗೆ ಬರುವ ಹದಿನೈದು ರೂಪಾಯಿ ಸಂಬಳದಲ್ಲಿ ಅವನ ಮನೆಯಲ್ಲಿ ಮೂರು ನಾಲ್ಕುಜನ ಮಕ್ಕಳು ಮರಿಗಳು ಅವನನ್ನೇ ಆಶ್ರಯಿಸಿಕೊಂಡಿರುವುದರಿಂದ ಅವರನ್ನೆಲ್ಲ ಪೋಷಣೆಮಾಡುವ ಜವಾಬ್ದಾರಿ ಇರುವುದರಿಂದ ಇಂಥ ಪರಿಸ್ಥಿತಿಯಲ್ಲಿ ದಕ್ಷತೆ ಎಲ್ಲಿಂದ ಬರುತ್ತದೆ ಎಂದು ಕೇಳುತ್ತೇನೆ. ಈಗ ಮೂರು ಕೋಟಿ ಚಿಲ್ಲರೆ ರೂಪಾಯಿಗಳನ್ನು ಪೋಲೀಸ್ ಖಾತೆಗೆ

ಕೇಳುತ್ತಿದ್ದಾರೆ. ಇಷ್ಟು ಹಣವನ್ನು ಈಗ ನಾವು ಕೊಡುವ ಸಂದರ್ಭದಲ್ಲಿ, ಇನ್ನೂ ಹೆಚ್ಚಾಗಿ ಕೊಟ್ಟರೂ ಚಿಂತೆಯಿಲ್ಲ. ಆದರೆ ಸರಿಯಾದ ರೀತಿಯಲ್ಲಿ ಸಂಬಳ ಸಾರಿಗೆಗಳನ್ನು ಸರಿಪಡಿಸಬೇಕು. ನಮ್ಮ ಅರ್ಥ ಮಂತ್ರಿಗಳು ಹಣಕಾಸಿನ ತೊಂದರೆಯನ್ನು ಮುಂದೊಡ್ಡದೆ ಹಣವನ್ನೊದಗಿಸಬೇಕು. ಇದಕ್ಕೆಲ್ಲ ಹಣವನ್ನೊದಗಿಸಬೇಕೆಂಬ ಸಂದರ್ಭ ಬಂದಾಗ್ಗೆ, ಅದನ್ನು ಪರಿಹಾರ ಮಾಡಿಕೊಳ್ಳಬೇಕಾಗಿದ್ದರೆ, ಎಲ್ಲವೂ ಗೊತ್ತಿರತಕ್ಕ ಗೆಜೆಟೆಡ್ ಆಫೀಸರುಗಳು, ಹೆಚ್ಚು ಸಂಬಳ ತೆಗೆದುಕೊಳ್ಳುವವರು ಎಲ್ಲರೂ ತಾವೇ ತಾವಾಗಿ ಮುಂದೆ ಬಂದು ನಮಗೆ ಬರುವ ಸಂಬಳದಲ್ಲಿ ಕಡಮೆ ಮಾಡಿಕೊಳ್ಳೋಣ, ಕಡಮೆ ಬರುವವರಿಗೆ ಹೆಚ್ಚು ಸಂಬಳವನ್ನು ಕೊಡೋಣವೆಂದು ಮನಸ್ಸು ಮಾಡಬೇಕು. ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ. ಪ್ರಜೆಗಳೆಲ್ಲ ಸುಖವಾಗಿರಬೇಕು ಎಂದು ಹೇಳುತ್ತಿದ್ದೇನೆ. ಒಂದು ಕಡೆಯಲ್ಲಿ ಒಬ್ಬ ಮೃಷ್ಟಾನ್ನ ಭೋಜನಮಾಡುತ್ತಿರುವುದು, ಮತ್ತೊಂದುಕಡೆ ಒಬ್ಬನು ರೊಟ್ಟಿ ಇಲ್ಲದೆ ಇರುವುದು ಇಂಥ ಪರಿಸ್ಥಿತಿ ಬಂದಿರುವಾಗ ಅವನನ್ನೂ ಕೂಡ ಮೇಲಕ್ಕೆ ಒಯ್ಯಬೇಕೆಂಬ, ಸಮತಾ ಸಮಾಜ ರಚನೆ ಮಾಡಬೇಕೆಂದು ಇರುವಾಗ, ತಾವಾಗಿಯೇ ಮುಂದಕ್ಕೆ ಬಂದು ತಮ್ಮ ಸಂಬಳಗಳಲ್ಲಿ ಖೋತಾ ಮಾಡಿಕೊಳ್ಳೋಣವೆಂದು ಗೆಜೆಟೆಡ್ ಅಧಿಕಾರಿಗಳು ದೇಶಸೇವೆಯಲ್ಲಿ ಭಾಗವಹಿಸಬೇಕೆಂದು ನಾನು ಸೂಚನೆ ಮಾಡುತ್ತಿದ್ದೇನೆ. ಜೈಲು ವಿಚಾರವಾಗಿ ಒಂದು ಸಲಹೆ ಮಾಡುತ್ತೇನೆ. ಈಗಾಗಲೇ ಜೈಲುಗಳಲ್ಲಿಯ ಮಟ್ಟವು ಸುಧಾರಿಸಿದೆ. ಒಳ್ಳೆ ಆಹಾರ ಕೊಡಲಾಗುತ್ತಿದೆ. ಓದಲು ಪುಸ್ತಕಗಳನ್ನು ಕೊಡುತ್ತಾರೆ. ಜೈಲುಗಳಲ್ಲಿ ವಾಸವು ಸುಖಕರವಾಗಿದೆ. ಆದರೆ ನಾನು ಹಿಂದಕ್ಕೆ ಜೈಲಿನಲ್ಲಿದ್ದಾಗ, ಭೇಟಿಯ ಅವಕಾಶವು ದೊರೆಯಲಿಲ್ಲ, ಪುಸ್ತಕಗಳನ್ನು ಓದಲು ಕೊಡುತ್ತಿರಲಿಲ್ಲ. ಆಗ ಜೈಲಿನಲ್ಲಿದ್ದವರಿಗೆ ಹೊರಗಿನ ಜಗತ್ತಿನ ಸಂಬಂಧವೇ ಇರುತ್ತಿರಲಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಜೈಲುಗಳಲ್ಲಿ ಹೆಚ್ಚಾಗಿ ಸುಧಾರಣೆಯಾಗಿದೆ. ಯಾವನೊಬ್ಬ ಮನುಷ್ಯನು ಅಪರಾಧಕ್ಕಾಗಿ ಜೈಲಿಗೆ ಹೋಗಿ ಕೆಲವು ದಿವಸ ಅಲ್ಲಿದ್ದು ಮನೆಗೆ ತಿರುಗಿ ಬರುವಾಗ ಅವನೊಬ್ಬ ಮಾನವನು ಆಗುವ ಹಾಗೆ ಹೃದಯ ಪರಿವರ್ತನೆಯು ಆಗಬೇಕು. ಇನ್ನೊಬ್ಬರಿಗೆ ತೊಂದರೆ ಕೊಡಬಾರದು, ತಾನು ದುಡಿದು ಜೀವಿಸಬೇಕು ಎನ್ನುವ ಮೂಲ ಶಿಕ್ಷಣವು ಜೈಲಿನಲ್ಲಿರುವಾಗ ದೊರೆತು ಅವನ ಬುದ್ಧಿಯು ವಿಕಾಸಗೊಳ್ಳುವಂತೆ ಮಾಡಬೇಕು. ಇನ್ನು ಹೆಚ್ಚಿಗೆ ಹೇಳದೆ ಈಗ ಸಭೆಯ ಮುಂದಿಟ್ಟಿರುವ ಮೂರು ಬೇಡಿಕೆಗಳನ್ನೂ ಸ್ವಾಗತಿಸುತ್ತಾ ಪೂರ್ಣ ಬೆಂಬಲ ಕೊಡುತ್ತೇನೆ ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಕೆ. ಕೆಂಚಪ್ಪ.—ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ಸಭೆಯ ಮುಂದೆ ಚರ್ಚೆಗೆ ಬಂದಿರುವ ಬೇಡಿಕೆಗಳ ಪೈಕಿ ನ್ಯಾಯಾಂಗ ಮತ್ತು ಜೈಲುಗಳ ವಿಚಾರವಾಗಿ ಮೊದಲನೇ ಬೇಡಿಕೆಯಾದ ನ್ಯಾಯಾಂಗದ ವಿಚಾರದಲ್ಲಿ ಮಾತನಾಡುತ್ತಾ ಈಗ ನಮ್ಮ ಸಂಸ್ಥಾನದಲ್ಲಿ ನ್ಯಾಯ ಧರ್ಮಗಳು ಜಾಗ್ರತೆಯಾಗಿ ತೀರ್ಮಾನವಾಗುವುದಿಲ್ಲವೆಂದು ಮಾನ್ಯ ಸದಸ್ಯರುಗಳು ತಿಳಿಸಿದ್ದಾರೆ. ಅದಕ್ಕೆ ಕಾರಣವೇನು ಎಂಬ ವಿಚಾರದಲ್ಲಿ ಈಗಾಗಲೇ ವಿಪುಲ ಚರ್ಚೆಯಾಗಿದೆ. ಈ ಬಗ್ಗೆ ಮತ್ತೆ ನಾನು ಮಾತನಾಡಲು ಇಷ್ಟಪಡುವುದಿಲ್ಲ. ಒಂದು ವಿಚಾರ ಮಾತ್ರ ನಾನು ಹೇಳಬೇಕು ಎನ್ನುತ್ತೇನೆ. ಈಗಾಗಲೇ ಹೇಳಿದ ಕೆಲವು ವಿಚಾರಗಳನ್ನು ಪುನರುಕ್ತಿಯಾಗಿ ಮತ್ತೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮೊದಲನೆಯದಾಗಿ ಜಡ್ಜುಗಳನ್ನು ಜಾಗ್ರತೆಯಾಗಿ ನೇಮಕಮಾಡದೇ ಇರುವುದು ಇದಕ್ಕೆ ಕಾರಣವಾಗಿದೆ. ಈ ಅಸೆಂಬ್ಲಿಯಲ್ಲಿ ನಾವು ಕೇಳಿದ ಕೆಲವಾರು ಪ್ರಶ್ನೆಗಳಿಗೆ ಸರ್ಕಾರದವರು ಉತ್ತರ ಕೊಡುವಾಗ ಕಾನೂನಿನ ಪ್ರಕಾರ ಎಷ್ಟು ಜಡ್ಜುಗಳು ಆಗಬೇಕೋ ಅಷ್ಟು ಮಂದಿಯನ್ನು ನೇಮಕ ಮಾಡಲಾಗುವದೆಂದು ಮೊಗಂ ಉತ್ತರ ಬಂದಿದೆ. ಒಂದು ನಿದರ್ಶನವೆಂದರೆ, ನಮ್ಮ ಮೈಸೂರು ಸಂಸ್ಥಾನದಲ್ಲಿ ಯಾರು ಎಷ್ಟು ಜಡ್ಜುಗಳು ಇರಬೇಕೆಂದು ತೀರ್ಮಾನಮಾಡಬೇಕಾಗಿದೆಯೋ ಅವರಿಗೆಯೇ ಗೊತ್ತಿಲ್ಲದೇ ಇರಬಹುದು ಎಂಬ ಭಾವನೆ ಬರುತ್ತದೆ. ಇಷ್ಟು ಮುಖ್ಯವಾದ ಮತ್ತು ತೀವ್ರವಾಗಿ ಜಡ್ಜುಗಳ ನೇಮಕ ಮಾಡಬೇಕಾದ ವಿಚಾರವನ್ನು ಉಪೇಕ್ಷೆಯಿಂದ ಕಾಣುವುದು ಸರಿಯಾದುದಲ್ಲ. ಭಾರತದ ಸಂವಿಧಾನದ 216ನೇ ಆರ್ಟಿಕಲ್ ಹೀಗಿದೆ :—

> "Every High Court shall consist of a Chief Justice and such other Judges as the President may from time to time deem it necessary to appoint."

ಅಂದರೆ ನಮ್ಮ ರಾಷ್ಟ್ರಾಧ್ಯಕ್ಷರು ಪ್ರತಿಯೊಂದು ರಾಜ್ಯದಲ್ಲಿ ಎಷ್ಟು ಜಡ್ಜುಗಳು ಇರಬೇಕೆಂದು ಅಭಿಪ್ರಾಯ ಕೊಡುತ್ತಾರೋ ಅಷ್ಟುಮಂದಿ ಜಡ್ಜುಗಳನ್ನು ನೇಮಕ ಮಾಡುವುದು ಕರ್ತವ್ಯವಾಗಿದೆ. ಮತ್ತು ಕೆಲಸ ಕಾರ್ಯಗಳು ಹೆಚ್ಚಿಗೆ ಇದ್ದಾಗ್ಗೆ, ಮುಂದಿನ ಆರ್ಟಿಕಲ್ 224 ರಲ್ಲಿ ಈ ಪ್ರಕಾರವಾಗಿ ಹೇಳಿದೆ.

> "If by reason of any temporary increase in the business of a High Court or by reason of arrears of work therein, it appears to the President that the number of the Judges of that Court should be for the time being increased, the President may appoint duly qualified persons to be additional Judges of the Court for such period not exceeding two years as he may specify."

ಹೀಗಿರುವಾಗ ಇಷ್ಟು ದೊಡ್ಡ ಪ್ರಮಾಣದಲ್ಲಿ ಕೇಸುಗಳನ್ನು ಪೆಂಡಿಂಗ್ ಇಟ್ಟುಕೊಳ್ಳುವಂಥ ಪರಿಸ್ಥಿತಿಯನ್ನು ಉಂಟುಮಾಡಿರುವುದು ಯಾರಿಗೂ ಗೌರವ ತರತಕ್ಕಂಥ ವಿಚಾರವಲ್ಲವೆಂದು ಬಹಳ ವಿಷಾದದಿಂದ ನಾನು ಹೇಳಬೇಕಾಗಿದೆ. ತಡವಾಗಿ ತೀರ್ಮಾನ ಆಗುವದರ ಮೂಲಕ ಕಡಕಾಗುತ್ತಿದೆ ಎಂಬ ಭಾವನೆಯುಂಟಾಗುತ್ತದೆ. Justice delayed is worse than justice denied. ಆದುದರಿಂದ ಈ ವಿಷಯವನ್ನು ತೀವ್ರಾಸಕ್ತಿಯಿಂದ ವಿಚಾರ ಮಾಡಬೇಕು. ತತ್ವವನ್ನು ಒಮ್ಮೆ ಒಪ್ಪಿಕೊಂಡಮೇಲೆ ಅದರಲ್ಲಿ ನಿಷ್ಠೆ ಇರಬೇಕು. ಈ ರೀತಿಯಾಗಿ ತಡವಾಗುವುದಕ್ಕೆ ಉಂಟಾಗಿರುವ ಪರಿಸ್ಥಿತಿಯನ್ನು ನಿವಾರಣೆ ಮಾಡುವದರಲ್ಲಿ ದಕ್ಷತೆಯ ಲೋಪ ಬಂದಿದೆ ಎಂದು ಬಹು ವಿಷಾದದಿಂದ ಹೇಳಬೇಕಾಗಿದೆ, ಜಡ್ಜುಗಳನ್ನು ನೇಮಕ ಮಾಡುವದರಲ್ಲಿ ಇಷ್ಟು ವಿಳಂಬವು ಆಗಬಾರದಾಗಿತ್ತು. ಇದಕ್ಕೆ ಕಾರಣ ಕರ್ತರು ಯಾರು ಮತ್ತು ಕೇಂದ್ರ ಸರ್ಕಾರದ ತಪ್ಪು

(ಶ್ರೀ ಕೆ. ಕೆಂಚಪ್ಪ.)

ಈ ವಿಚಾರದಲ್ಲಿ ಎಷ್ಟರ ಮಟ್ಟಿಗೆ ಇದೆ ಎಂದು ಆಲೋಚನೆ ಮಾಡೋಣ. ಒಂದು ವೇಳೆ ಇದರಲ್ಲಿ ಕೇಂದ್ರ ಸರ್ಕಾರದ ತಪ್ಪು ಇಲ್ಲದೇ ಇದ್ದರೂ ಸಹ ನಮ್ಮವರ ವಿಚಾರದಲ್ಲಿ ತಡವಾಗಲು ತಪ್ಪಿಲ್ಲವೆಂದು ಹೇಳುವುದಕ್ಕೆ ನಾನು ತಯಾರು ಇಲ್ಲ. ವಿಪರೀತವಾಗಿ ತಡವಾಗುವ ಸಂದರ್ಭವುಂಟಾಗಲು ಏನಾದರೂ ಕಾರಣ ಇರಲಿಕ್ಕೇ ಬೇಕು. ನಮ್ಮ ರಾಷ್ಟ್ರಾಧ್ಯಕ್ಷರಿಂದ ಜಡ್ಜುಗಳ ನೇಮಕವಾಗಲಿಕ್ಕೆ ಇಷ್ಟು ತಡವಾಯಿತು ಎಂಬುದು ಕಾರಣವಲ್ಲ ಎಂದು ಹೇಳಲು ನಾನು ಹಿಂಜರಿಯುವುದಿಲ್ಲ. ಇನ್ನು ಮುಂದೆಯಾದರೂ ಬಡವರಿಗೆ ನ್ಯಾಯ ಮುಫತ್ತಾಗಿ ದೊರೆಯತಕ್ಕ ಸಂದರ್ಭ ತತ್ಕಾಲಿಕವಾಗಿ ಇಲ್ಲದೇ ಹೋದರೂ ಸಹ, ಬಹಳ ಕಡಮೆಯ ಖರ್ಚಿನ ದರ್ಜೆಯಲ್ಲಿ ನ್ಯಾಯ ದೊರಕುವಂತೆ ಆಗಬೇಕು ಎನ್ನುವ ವಿಷಯವನ್ನು ಒಪ್ಪಿಕೊಳ್ಳಬೇಕು. ಬಡವರಿಗೆ ಮುಫತ್ತಾಗಿ ನ್ಯಾಯ ದೊರಕಬಾರದು ಎಂದು, ಹೇಳುವವರ ಪೈಕಿ ನಾನಲ್ಲ. ಪಕೃತದಲ್ಲಿ ಆ ಪದ್ಧತಿಯು ನಡೆಯುತ್ತದೋ ಇಲ್ಲವೋ ಎಂಬ ಶಂಕೆ ಇರುವುದರಿಂದ, ನಮ್ಮಲ್ಲಿ ನಡೆದುಕೊಂಡುಬಂದಿರುವ ಪದ್ಧತಿಯನ್ನು ಅನುಸರಿಸಿದರೂ ಸಹ, ಬಡವನಿಗೆ ಕಡಮೆ ಖರ್ಚಿನಲ್ಲಿ ನ್ಯಾಯ ದೊರಕಬೇಕು. ಈಗ ನಾವು ವರಮಾನ ತೆರಿಗೆಯ ವಿಚಾರವನ್ನು ಒಂದು ದೃಷ್ಟಿಯಿಂದ ನೋಡುತ್ತಿದ್ದೇವೆ. ಸೇಲ್ಸ್‌ಟಾಕ್ಸ ಪ್ರಶ್ನೆ ಬಂದಾಗ ಇನ್ನೊಂದು ದೃಷ್ಟಿಯಿಂದ ನೋಡುತ್ತಿದ್ದೇವೆ ಮತ್ತು ಕೋರ್ಟ ಫೀ ಸ್ಟಾಂಪ್ಸ, ಸೂಟ್ಸ ವ್ಯಾಲ್ಯುಯೇಷನ್ ಆಕ್ಟಿನಲ್ಲಿ ಪರಿಮಿತಿಯನ್ನು ನಿಗದಿ ಮಾಡುವ ವಿಚಾರದಲ್ಲಿ ಮತ್ತೊಂದು ದೃಷ್ಟಿಯಿಂದ ನೋಡುತ್ತಿದ್ದೇವೆ. ಜನ ಸಾಮಾನ್ಯರ ದೃಷ್ಟಿ ನಮ್ಮ ರಾಜ್ಯಭಾರ ಮಾಡುವ ಜನರಿಗೆ ಇದೆಯೋ ಇಲ್ಲವೋ ಎಂಬ ಶಂಕೆ ಬಂದಿದೆ. ಸಾಮಾನ್ಯವಾಗಿ ತೆರಿಗೆಯ ವಿಷಯದಲ್ಲಿ ಅನುಸರಿಸುವ ಪದ್ಧತಿಗೂ ಇನ್‌ಕಂಟ್ರ್ಯಾಕ್ಸ್ ವಿಷಯದಲ್ಲಿ ಅನುಸರಿಸುವ ಪದ್ಧತಿಗೂ ಕೋರ್ಟಿನಲ್ಲಿ ನ್ಯಾಯ ದೊರಕಿಸಿಕೊಡುವ ವಿಷಯದಲ್ಲಿ ಅನುಸರಿಸುವ ಪದ್ಧತಿಗೂ ಎಷ್ಟೋ ಅಂತರವಿದೆ. ನಮ್ಮ ನ್ಯಾಯವನ್ನು ಮಾರಾಟ ಮಾಡಿಕೊಳ್ಳಬಾರದು. Justice of the country should not be sold ಎಂಬ ತತ್ವವನ್ನು ಒಪ್ಪುವುದಿಲ್ಲವೇ? ಈ ರೀತಿಯಾಗಿ ಒಪ್ಪಿದ ಮೇಲೆ ನಮ್ಮ ದೇಶದಲ್ಲಿ ಹಿಂದಿನವರು ಮಂಡಿಸಿರತಕ್ಕಂಥ ಬಜೆಟ್ಟನ್ನು ಯೋಚನೆಮಾಡಿದರೆ, ಹಿಂದಿನ ಐದು ತಿಂಗಳುಗಳಲ್ಲಿ ಬಂದಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ, 26,49,000 ರೂಪಾಯಿ ವರಮಾನ ಬರುತ್ತಿತ್ತು ಮತ್ತು ಖರ್ಚು ಸಹ 26,91,800 ರೂಪಾಯಿ ಖರ್ಚಾಗುತ್ತಿತ್ತು. ಹಿಂದಿನ ಐದು ತಿಂಗಳುಗಳ ಅಂಕಿ ಅಂಶಗಳಿಂದ ಇದು ಗೊತ್ತಾಗುತ್ತದೆ, 1956-57ನೇ ಸಾಲಿನ ಬಜೆಟ್ಟಿನಲ್ಲ ಕೊಟ್ಟಿರತಕ್ಕಂಥ ಅಂಶಗಳಿಂದ ಗೊತ್ತಾಗುತ್ತದೆ. ಇದನ್ನು ನೋಡಿದರೆ ಈ ವರಮಾನಕ್ಕೂ ಖರ್ಚಿಗೂ ಸರಿದೂಗುತ್ತದೆ. ಬೇಕಾದರೆ ವಿಶದವಾಗಿ ಸ್ಟಾಂಪಿನ ಮೂಲಕ ಇಷ್ಟು ಖರ್ಚಾಗಿದೆ, administration of justice ಮೂಲಕ ಇಷ್ಟು ಎಂದು ಹೇಳಬಲ್ಲೆ. ಅದು ಅನಾವಶ್ಯಕ ಆದ್ದರಿಂದ, ನಾನು ಕೇಳುತ್ತೇನೆ, ಇವೊತ್ತಿನ ದಿವಸ ಕೋರ್ಟ ಫೀಜ್ ಸ್ಟಾಂಪ್ ಆಕ್ಟನ್ನು ಇಂಟ್ರೊಡ್ಯೂಸ್ ಮಾಡುವಾಗ ನಮ್ಮ ನ್ಯಾಯವನ್ನು ಮಾರಾಟ ಮಾಡಬೇಕೆಂಬ ದೃಷ್ಟಿಯಿಂದ ಸಭೆಯ ಮುಂದೆ ಇಟ್ಟಿದ್ದಾರೋ ಅಥವಾ ನ್ಯಾಯವನ್ನು ದೊರಕಿಸತಕ್ಕಂಥ ವ್ಯವಸ್ಥೆಗೆ ಖರ್ಚು ಬಹಳ ಹೆಚ್ಚಾಗುತ್ತದೆ ಅದನ್ನು ಸರಿತೂಗಿಸೋಣ ಎಂಬ ದೃಷ್ಟಿಯಿಂದ ಇಟ್ಟಿದ್ದಾರೆೊ ಅಥವಾ ಯಾವುದೋ ಒಂದು ರೀತಿಯಿಂದ ದೇಶಕ್ಕೆ ಉತ್ಪತ್ತಿ ಬರಲಿ, ಈ ಬಾಬಿನಿಂದಲೂ ಸ್ವಲ್ಪ ಮಟ್ಟಿಗೆ ಉತ್ಪತ್ತಿಯನ್ನು ಹೆಚ್ಚಿಗೆ ಮಾಡೋಣ ಎನ್ನುವ ದೃಷ್ಟಿಯಿಂದ ಈ ಕೊರ್ಟ ಫೀ ಸ್ಟಾಂಪನ್ನು ಜಾಸ್ತಿಮಾಡಿದ್ದಾರೋ, ಎನ್ನುವ ಪ್ರಶ್ನೆಯನ್ನು ಈಗ ಆಲೋಚನೆ ಮಾಡಬೇಕಾಗಿದೆ. ಈ ದೃಷ್ಟಿಯಿಂದ ಹೆಚ್ಚಿಗೆ ಹೇಳಲು ಇಷ್ಟವಿಲ್ಲ. "Double thinking and double action is against a man of conviction" ಒಬ್ಬ ಮನುಷ್ಯನಿಗೆ ಎಷ್ಟೇ ಕಷ್ಟಬರಲಿ ಎಷ್ಟೇ ತೊಂದರೆ ಬರಲಿ ನಿಜವಾದ ಭಕ್ತಿ ಒಂದು ತತ್ವದಲ್ಲಿ ಇದ್ದ ಪಕ್ಷದಲ್ಲಿ ಆ ತತ್ವಕ್ಕೆ ಸರಿಯಾದ ರೀತಿಯಲ್ಲಿ ವ್ಯವಸ್ಥ ಮಾಡತಕ್ಕದ್ದು ಅವನ ಕರ್ತವ್ಯವಾಗಿದೆ. ಇಲ್ಲದೆ ಹೋದರೆ "it amounts to double thinking and double action" ಇದನ್ನು ನಾವು ತೀವ್ರವಾಗಿ ಆಲೋಚನೆ ಮಾಡಬೇಕಾಗಿ ಬಂದಿದೆ.

5-30 P.M.

ತತ್ವವನ್ನು ಮಾತು ಎತ್ತಿದರೆ ಹೇಳುತ್ತಿರುತ್ತಾರೆ. ಅದನ್ನು ಬೇಕಾದಷ್ಟು ಸಾರಿ ಹೇಳುತ್ತಿರುತ್ತಾರೆ. ಆದರೆ ಆ ತತ್ವಕ್ಕೆ ಅನುಸಾರವಾಗಿ ವ್ಯವಸ್ಥೆಯನ್ನು ಏಕೆ ಮಾಡುತ್ತಾ ಇಲ್ಲ? ಆ ತತ್ವವನ್ನು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದಾರೆ ಎನ್ನುವ ವಿಚಾರವನ್ನು ನೋಡುವುದಾದರೆ ಏನೂ ಕಾಣುತ್ತಾ ಇಲ್ಲ. ಮಾತೆತ್ತಿದರೆ ನಾಲಿಗೆಯ ತುದಿಯಲ್ಲಿ ತತ್ವ ಕುಣಿಯುತ್ತದೆ ಆದರೆ ನಮಗೆ ಬೇಕಾದುದು ಅದನ್ನು ಅನುಷ್ಠಾನಕ್ಕೆ ತರುವ ಮಾರ್ಗವೇ ಹೊರತು ಬಾಯಿ ಪಠನವಲ್ಲ. ಎಂದು ನಾನು ತಮ್ಮಲ್ಲಿ ಅತಿವಿನಯದಿಂದ ಬೇಡಿಕೊಳ್ಳುತ್ತೇನೆ. ಈ ತತ್ವಗಳ ವಿಚಾರದಲ್ಲಿ ಒಂದು ಕ್ಯಾಟಗಾರಿಕಲ್ ಸ್ಟೇಟ್‌ಮೆಂಟ್ ಮಾಡಬೇಕು. ಇಂಥಿಂಥ ವಿಚಾರದಲ್ಲಿ ನಿಮಗೆ ನಂಬಿಕೆ ಇದೆ. ನಂಬಿಕೆಇರುವ ದೆಶೆಯಿಂದ ಎಷ್ಟೇ ಎಡರುತೊಡರುಗಳು ಬರಲಿ ನಂಬಿಕೆಗೆ ತಕ್ಕ ವ್ಯವಸ್ಥೆ ಮಾಡುತ್ತೇವೆ. ಇಂಥಿಂಥಾ ವಿಚಾರದಲ್ಲಿ ನಂಬಿಕೆ ಇಲ್ಲ ಆದ್ದರಿಂದ ವ್ಯವಸ್ಥೆಮಾಡುವುದಕ್ಕೆ ಇಷ್ಟವಿಲ್ಲ ಎಂದು ಹೇಳಲಿ. ಒಂದಾನೊಂದು ಕಾಲದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನನ್ನು ಮಾರಾಟ ಮಾಡಬಹುದಾಗಿತ್ತು. ಅಂತಹ ಕಾಡಿನ ಕಾನೂನನ್ನು ಈಗ ಜಾರಿಗೆ ತರತಕ್ಕ ಮನೋಭಾವವನ್ನು ಬಿಟ್ಟುಬಿಡಬೇಕು. ನಾವು ಈಗ 1957ನೆಯ ಇಸ್ವಿಯಲ್ಲಿ ಇದ್ದೇವೆ. ಆ ತತ್ವಕ್ಕೆ ಅನುಸಾರವಾಗಿ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ತತ್ವದಲ್ಲಿ ನಂಬಿಕೆ ಇಲ್ಲ. ಎನ್ನುವ ವಿಚಾರ ಹೇಳಬೇಕು ಎಂದು ಮತ್ತೊಮ್ಮೆ ಒತ್ತಿಹೇಳುತ್ತೇನೆ.

ಇಷ್ಟು ಹೇಳಿ ಬಡವರಿಗೆ ಕೆಲವು ಸಂಧರ್ಭಗಳಲ್ಲಿ ಕೋರ್ಟ್‌ಫೀ ಸ್ಟಾಂಪ್‌ನ್ನು ಕಡಮೆ ಮಾಡಬೇಕೆಂದು ಹೇಳುತ್ತೇನೆ. ಶಕ್ತಿ ಇಲ್ಲದೆ ಇರುವ ಜನಗಳ ವಿಚಾರದಲ್ಲಿ ಏನು ಮಾಡಬೇಕೋ ಅದನ್ನೂ ಸಹ ನಾವು ಉಪೇಕ್ಷೆಯಿಂದ ಕಾಣತಕ್ಕದ್ದಲ್ಲ. ಈ ವಿಚಾರದಲ್ಲಿ ಏನುಮಾಡಬೇಕು ಎನ್ನುವುದನ್ನು ಆಲೋಚನೆ ಮಾಡಬೇಕು. ಅದನ್ನು ಸಹ ನಾವು ಉಪೇಕ್ಷೆಯಿಂದ ಕಾಣತಕ್ಕದ್ದು ಸರಿಯಲ್ಲ. ಈ ವಿಚಾರದಲ್ಲಿ ನಾವು ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಅನುಸರಿಸಿಕೊಂಡು ಬಂದಿರತಕ್ಕ ವಿಚಾರಗಳನ್ನು ಮನಸ್ಸಿಗೆ ತೆಗೆದು ಕೊಳ್ಳಲೇಬೇಕು. ಅಲ್ಲಿಯೂ ಸಹ ಬಡವರಿಗೆ ಸಹಾಯ ಮಾಡಲು ಮತ್ತು ಅವರಿಗೆ ನ್ಯಾಯ ಮುಫತ್ತಾಗಿ ದೊರೆಯ ಬೇಕು ಎನ್ನುವ ರೂಪದಲ್ಲಿ ಬೇಕಾದಷ್ಟು ವ್ಯವಸ್ಥೆಗಳನ್ನು ಮಾಡಿರುವುದು ನಮ್ಮ ಗಮನಕ್ಕೆ ಬಂದಿದೆ. ಇಲ್ಲಿಯೂ ಸಹ ಕೈಯ್ಯಲ್ಲಿ

ಕಾಸು ಇಲ್ಲದೆ ಇರುವವರಿಗೆ ಅನ್ಯಾಯ ವಾದ ಸಂದರ್ಭದಲ್ಲಿ ಅವರಿಗೆ ನ್ಯಾಯ ದೊರಕಿಸಿ ಕೊಡಬೇಕಾದ ಪ್ರಸಂಗ ಬಂದರೆ ಅದಕ್ಕೆ ಹಿಂಜರಿದು ಮಾತನಾಡುವುದು ಸರಿಯಿಲ್ಲ ಎಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರ ಹೇಳುತ್ತೇನೆ. ಪ್ರಭುತ್ವ ನಡೆಸತಕ್ಕಂಥವರು ಜಡ್ಜಿಗಳ ನೇಮಕ ವಿಚಾರದಲ್ಲಿ ಬಹಳ ಹುಷಾರಾಗಿ ನಡೆದುಕೊಂಡು ಹೋಗಬೇಕಾಗಿತ್ತು. ಆದರೆ ಅಷ್ಟು ತೀವ್ರವಾದ ಗಮನವನ್ನು ಈ ಜಡ್ಜಿಗಳ ನೇಮಕದ ವಿಚಾರದಲ್ಲಿ ಕೊಟ್ಟಿಲ್ಲ, ಯಾವುದೋ ಪರ್ಸನಲ್ ಅಥವಾ ಸ್ವಂತ ಅಥವಾ ಪಾರ್ಟಿ ಇಂಟ್ರೆಸ್ಟಿನ ದೃಷ್ಟಿಯಿಂದ ಒಂದು ನಮೂನೆಯಾದ ಅಭಿಪ್ರಾಯಗಳು ಎದ್ದು ಬಂದು ಕಾಣುವ ರೀತಿಯಲ್ಲಿ ಬಂದಿರತಕ್ಕ ಪ್ರಸಂಗಕಾಣುತ್ತದೆ. ಯಾರ ವಿಚಾರವನ್ನು ಹೇಳದೆ ಹೋದರೂ ಕೆಲವು ಸ್ಥೂಲವಾದ ಅಂಶಗಳನ್ನು ಹೇಳದೆ ಹೋದರೆ ಅದು ಅಪಾರ್ಥವಾದೀತು. ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. 1948ನೆ ಇಸ್ವಿಯಿಂದ 6—7ವರ್ಷ ನಡೆದುಕೊಂಡು ಬಂದಿರತಕ್ಕ ವಿಧಾನದಲ್ಲಿ ತೀರ್ಮಾನವಾಗಿ ನೇಮಕ ಆಗಿದ್ದಂಥ ಮತ್ತು ನ್ಯಾಯಾಧೀಶರ ವಿಚಾರದಲ್ಲಿ ಕೆಲವು ಜಡ್ಜಿಗಳು ರಾಜೀನಾಮೆ ಕೊಡಲು ಕಾರಣ ಆಗಿರತಕ್ಕ ವಿಚಾರವನ್ನೂ ಮತ್ತು ಇನ್ನೂ ಕೆಲವರು ಮನಸ್ಸು ಇಲ್ಲದೆ ರಿಟೈರ್ ಆಗಿರತಕ್ಕಸಂದರ್ಭಗಳನ್ನೂ ಇತ್ತೀಚಿಗೆ ನೇಮಕಮಾಡಿರುವ ಸಂದರ್ಭದಲ್ಲೂ ಸಹ ಅನೇಕ ಎಡರುತೊಡರುಗಳು ಬಂದಿರುವುದನ್ನೂ ಗಮನಿಸಿ ನೋಡಿದರೆ, ರಾಜ್ಯಭಾರ ವ್ಯವಸ್ಥೆಮಾಡತಕ್ಕ ಜನರು ಈ ಜಡ್ಜಿಗಳನ್ನು ನೇಮಕಮಾಡತಕ್ಕ ವಿಚಾರದಲ್ಲೂ ಸಹ ಒಂದು ಮೇಲ್ಮಟ್ಟದ ರೀತಿಯಲ್ಲಿ ಆಲೋಚನೆ ಮಾಡದೆ ನಾನಾ ವಿಚಾರಗಳಲ್ಲಿ ಕೈಹಾಕಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಇದನ್ನು ಯಾರೂ ಇಲ್ಲ ಎಂದು ಹೇಳುವಹಾಗಿಲ್ಲ. ಪ್ಯಾಲೇಸ್‌ಹತ್ತಿರ ನಡೆದ ದೊಂಬಿ ಕೇಸಿನ ವಿಚಾರದಲ್ಲಿ ನಡೆದಿರತಕ್ಕ ಒಂದು ತೀರ್ಪನ್ನು ಸಹ ನಾವು ಗಮನಕ್ಕೆ ತೆಗೆದುಕೊಂಡು ಆಲೋಚನೆಮಾಡಬೇಕಾದ ವಿಚಾರ ಇದೆ. ಈ ದೃಷ್ಟಿಯಿಂದ . . . .

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ಸಬ್ ಜುಡೀಸ್.

ಶ್ರೀ ಕೆ. ಕೆಂಚಪ್ಪ.—ಹಿಂದೆ ಒಂದು ರೈಟಿಂಗ್ ಆದ ವಿಚಾರ ಹೇಳುತ್ತಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಅದು ಸಬ್ ಜುಡೀಸ್.

ಶ್ರೀ ಕೆ. ಕೆಂಚಪ್ಪ.—ಜಡ್ಜ್‌ಮೆಂಟ್ ಮುಗಿದು ಹೋಗಿದೆ ಎಂದು ತಿಳಿದುಕೊಂಡು ಹೇಳಿದ್ದು. ನಾವು ಆ ವಿಚಾರವನ್ನೂ ಸಹ ಆಲೋಚನೆ ಮಾಡ ಬೇಕಾಗಿದೆ. ಇಷ್ಟು ಹೇಳಿ ನಾನು ಪೋಲೀಸ್‌ಖಾತೆ ವಿಚಾರಕ್ಕೆ ಬರುತ್ತೇನೆ. ಪೋಲೀಸಿನವರ ವಿಚಾರದಲ್ಲೂ ಸಹ ನಾನಾ ಬಗೆಯ ವಿಷಯಗಳನ್ನು ನನ್ನ ಮಿತ್ರರು ಹೇಳಿರುವುದರಿಂದ ಅವರ ನೇಮಕದ ವಿಚಾರದಲ್ಲಿ ಸಹ ಸರ್ಕಾರದ ಮನೋಭಾವನೆ ಯಾವ ರೀತಿ ಇದೆ ಎನ್ನು ವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಪೋಲೀಸ್‌ಖಾತೆಯಲ್ಲಿರತಕ್ಕಂಥ ನೌಕರರಲ್ಲಿ ವಿಪರೀತ ವಾದ ಅಸಮಧಾನವನ್ನು ತಂದಿಡುವುದಕ್ಕೆ ಕಾರಣ ವಾಗಿದೆ ಎಂಬುದು ಅಷ್ಟೇ ಅಲ್ಲ. ಈ ದೇಶೆಯಿಂದ ಆಡಳಿತ ವಿಪರೀತ ಸಡಿಲವಾಗಿ ದೇಶದ ಹಿತಕ್ಕೆ ತುಂಬ ತೊಂದರೆ ಬಂದಿದೆ ಎನ್ನುವ ವಿಚಾರವನ್ನು ಹೇಳು ವುದಕ್ಕೆ ಕೂಡ ನಾನು ಹಿಂಜರಿಯುವುದಿಲ್ಲ. ಯಾಕೆಂದರೆ 1947ನೇ ಇಸವಿಯಲ್ಲಿ ಇದ್ದಂಥ ಪೋಲೀಸ್ ಐ.ಜಿ. ಯವರು ಕಂಪಲ್‌ಸರಿಯಾಗಿ ರಿಟೈರ್ ಆಗುವುದಕ್ಕೆ ಕಾರಣವೇನು ? ಆಗಿನಕಾಲದಲ್ಲಿ ಡಿ.ಐ.ಜಿ. ಆಗಿರತಕ್ಕ ಹಳಬರು ಇಬ್ಬರು ಒಂದಲ್ಲ ಒಂದು ವಿಧವಾಗಿ ಕಷ್ಟಕ್ಕೆ ಒಳಗಾಗಿ ಕಂಪಲ್‌ಸರಿ ರಿಟೈರ್ ಆಗುವುದಕ್ಕೆ ಕಾರಣವೇನು ? ಅದರಮೇಲೆ ಇನ್ನೊಬ್ಬ ಡಿ.ಐ.ಜಿ ತಮ್ಮ ಕೆಳಗೆ ಇರತಕ್ಕ ಡಿ.ಎಸ್.ಪಿ. ಯನ್ನು ಐ.ಜಿ. ಯಾಗಿ ಮಾಡಿರುವುದರಿಂದ ಡಿ.ಐ.ಜಿ. ಆಗಿರುವುದಕ್ಕೆ ಇಷ್ಟಪಡದೆ ರಾಜೀನಾಮೆ ಕೊಟ್ಟು ಇನ್ನೂ ಮುಂಚಿತ ವಾಗಿ ಹೋಗುವುದಕ್ಕೆ ಕಾರಣ ಏನು ? ಇವೆಲ್ಲ 1947ನೇ ಇಸವಿಯಿಂದ 1952ನೇ ಇಸವಿಯವರೆಗೂ ನಡೆದುಕೊಂಡು ಬಂದಿರತಕ್ಕ ವಿಚಾರ. ಹೀಗೆಲ್ಲಾ ಆಗಿರುವುದು ರಾಜ್ಯಭಾರ ಮಾಡತಕ್ಕವರು ಕೈಹಾಕು ವುದಕ್ಕೆ ಹೋಗಿರುವುದರ ದೆಸೆಯಿಂದ. ಇನ್ನು 1955ನೇ ಇಸವಿಯಲ್ಲಿ ಸ್ವಲ್ಪ ದಿವಸ ಡಿ.ಎಸ್.ಪಿ. ಆಗಿದ್ದವರು ಐ.ಜಿ. ಆಗುವುದಕ್ಕೆ ಕಾರಣ ಏನು ಬಂತು ?

ಅಧ್ಯಕ್ಷರು.—ಅವೆಲ್ಲಾ ಈಗ ಸಂಬಂಧಿಸಿಲ್ಲ. ಹೊಸ ಆಡಳಿತದ ಬಗ್ಗೆ ಏನಾದರೂ ಇದ್ದರೆ ಹೇಳಿ.

ಶ್ರೀ ಕೆ. ಕೆಂಚಪ್ಪ.—ಈಗಿನ ಆಡಳಿತ ವಿಚಾರಕ್ಕೆ ಎರಡು ನಿಮಿಷಗಳಲ್ಲಿ ಬರುತ್ತೇನೆ. ಕೆಲವರು ಅಧಿ ಕಾರಕ್ಕೆ ಬರತಕ್ಕ ಸಂದರ್ಭವಿದ್ದರೂ ಸಹ ಅವರನ್ನು ಹಿಂದಕ್ಕೆ ತಳ್ಳಿ ಬೇರೆಯವರನ್ನು ನಾಮಕಾವಸ್ತೆಗೆ ತೆಗೆದುಕೊಂಡು ಬಂದಿರುವುದರ ಮೂಲಕ ಅವರಿಗೆ ಚಾನ್ಸ್ ತಪ್ಪಿಸಿಬಿಟ್ಟಿದ್ದಾರೆ. ಈಗ ನಮ್ಮ ಮೈಸೂರು ಸಂಸ್ಥಾನದ ಪೋಲೀಸ್‌ಖಾತೆಯಲ್ಲಿ ಬೇಕಾದಷ್ಟು ಜನ ಸೀನಿಯಾರಿಟಿ ಲಿಸ್ಟಿನಲ್ಲಿದ್ದರೂ ಸಹ ಅಥವಾ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನಲ್ಲಿ ಬೇಕಾದಷ್ಟು ಜನ ಇದ್ದರೂ ಸಹ ಅವರೆಲ್ಲರನ್ನೂ ಬಿಟ್ಟು 1956 ನವಂಬರ್ ತಿಂಗಳಲ್ಲಿ ಆಂಧ್ರದಲ್ಲಿ ರಿಟೈರ್ ಆಗಿರತಕ್ಕಂಥವರನ್ನು ಈಗ ಇಲ್ಲಿಗೆ ಐ.ಜಿ. ಆಗಿ ತರಲು ಕಾರಣವೇನು ?

MR. SPEAKER.—He belongs to Karnataka. ಹೊಸ ಮೈಸೂರು ಆದಮೇಲೆ ಬೇರೆ ಕಡೆ ಕೆಲವರು ಸರ್ವೀಸ್ಸಿನಲ್ಲಿದ್ದವರು ಇಲ್ಲಿಗೆ ಬಂದಿದ್ದಾರೆ.

ಶ್ರೀ ಕೆ. ಕೆಂಚಪ್ಪ. ಅವರು ಇಂಟಿಗ್ರೇಟೆಡ್ ಏರಿಯಾದಿಂದ ಬಂದವರ ಪೈಕಿ ಒಬ್ಬರಾಗಿರಲಿಲ್ಲ. ಅವರು ಆಂಧ್ರದಲ್ಲಿದ್ದವರು.

MR. SPEAKER.—He was in service in Hyderabad.

ಶ್ರೀ ಕೆ. ಕೆಂಚಪ್ಪ.—ಹಾಗಿದ್ದರೂ ಅವರು ರಿಟೈರ್ ಆದಮೇಲೂ ಮತ್ತೆ ಇಲ್ಲಿ ಅವರನ್ನು ಐ.ಜಿ.ಪಿ. ಆಗಿ ನೇಮಕಮಾಡುವುದಕ್ಕೆ ಕಾರಣವೇನು ? ಇದರಿಂದ ಇಲ್ಲಿ ಮೈಸೂರು ಸಂಸ್ಥಾನದಲ್ಲಿ ಕೆಲಸಮಾಡುತ್ತಿರುವವರಿಗೆ ಎಷ್ಟೋ ಅಸಮಾಧಾನ ಬಂತು. ಕರ್ನಾಟಕದಲ್ಲಿ ಸೇವೆಸಲ್ಲಿಸಿರತಕ್ಕ ದಕ್ಷರಿರುವಾಗ ಹೀಗೇಕೆ ಮಾಡ ಬೇಕಾಗಿತ್ತು ?

ಅಧ್ಯಕ್ಷರು.—ಇವರಿಗೇಕೆ ' ಎಕ್ಸ್‌ಟೆನ್ಷನ್ ' ಕೊಟ್ಟಿರಿ ಎಂದು ಕೇಳಿದರೆ ನನ್ನ ಅಭ್ಯಂತರವಿಲ್ಲ. ಹಳೆಯ ಮೈಸೂರಿನವರಾಗಲಿ, ಹೊಸ ಮೈಸೂರಿನವರಾಗಲಿ ಅವರು ಮೈಸೂರಿನವರೇ. ಹೊಸ ಮೈಸೂರಿನವರು ಎಂದರೆ, ಇವರೂ ಮೈಸೂರಿನವರಲ್ಲವೆ ?

ಶ್ರೀ ಕೆ. ಕೆಂಚಪ್ಪ.—ಇವರೂ ಮೈಸೂರಿನವರಾಗು ತ್ತಾರೆ, ಆದರೆ ನಮ್ಮ ಜನರಲ್ಲಿ ಅಧಿಕಾರದಲ್ಲಿದ್ದವರನ್ನೇ ಏಕೆ ನೇಮಕ ಮಾಡಬಾರದಾಗಿತ್ತು ? ಇವರಿಗೆ ಎಕ್ಸ್‌ಟೆನ್ಷನ್ ಕೊಟ್ಟು ಏಕೆ ಮಾಡಿದರು ?

ಇದನ್ನೆಲ್ಲಾ ನೋಡಿದರೆ ಇದು Democracy ಅಲ್ಲ, ಇದರ ಹೆಸರಿನಲ್ಲಿ Fascist Bureaucracy or Dictatorship ನಡೆಯುತ್ತಿದೆ ಎಂಬುದು ವ್ಯಕ್ತ ವಾಗುತ್ತದೆ. ತಮ್ಮ ಮೂಗಿನ ನೇರಕ್ಕೆ ಕೆಲಸಮಾಡಿ

(ಶ್ರೀ ಕೆ. ಕೆಂಚಪ್ಪ)

ಕೊಳ್ಳುವುದಕ್ಕೆ ವ್ಯವಸ್ಥೆಮಾಡುವ ದೃಷ್ಟಿಯಿಂದ ಮಾಡುತ್ತಿದ್ದಾರೆ. ಇದು ದೊಡ್ಡ ಮರವಾಗಿ ಬೆಳೆದು ಹೋಗಿದೆ. ಈ ಹೊತ್ತಿನ ದಿವಸ ಆಡಳಿತದಲ್ಲಿ ಬಿಗಿ ತಪ್ಪುವುದಕ್ಕೆ ಇದೇ ಕಾರಣ. ಚಿಕ್ಕಟ್ಟಿನಿಂದ ಆಡಳಿತ ನಡೆಸಿದ್ದರೆ ಈ ರೀತಿ ಆಗುತ್ತಿರಲಿಲ್ಲ.

Mr. SPEAKER.—The Hon'ble Member started at 6-22. As the Hon'ble Member happens to be the Leader of the Opposition, I have to be lenient. But 10 or 15 minutes more would be too much. Please finish in five minutes.

ಶ್ರೀ ಕೆ. ಕೆಂಚಪ್ಪ.—ಈ ದೃಷ್ಟಿಯಿಂದ ಆಲೋಚನೆ ಮಾಡಿದರೆ, ಮೈಸೂರಿನಲ್ಲಿ ಪೋಲೀಸ್ ಇಲಾಖೆಯಲ್ಲಿ ಅವ್ಯವಸ್ಥೆಗೆ ಮುಖ್ಯಕಾರಣವೇನೆಂದರೆ, ಅಧಿಕಾರಿಗಳನ್ನು ನೇಮಕಮಾಡುವುದರಲ್ಲಿ ಸರ್ಕಾರ ಅನುಸರಿಸಿಕೊಂಡು ಬಂದಿರತಕ್ಕ ವಿಧಾನ ಎಂದು ಖಂಡಿತವಾಗಿ ಹೇಳಬೇಕಾಗಿದೆ. ಇನ್ನು ಜೈಲುಗಳ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಜೈಲುಗಳ ವ್ಯವಸ್ಥೆಯ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಒತ್ತಿ ಹೇಳುತ್ತಿದ್ದೇನೆ. ನಾವೆಲ್ಲರೂ ಹಿಂದೆ ಅನೇಕ ಸಾರಿ ಜೈಲಿಗೆ ಹೋಗಿದ್ದವರೇ ಆಗಿದ್ದೇವೆ. ಅದರಲ್ಲಿಯೂ not once or twice, a number of times. ನಾನೂ ಮಾನ್ಯ ನಿಜಲಿಂಗಪ್ಪನವರೂ ಪದೇ ಪದೇ ಜೈಲಿಗೆ ಹೋದಾಗ ಜೈಲಿನಲ್ಲಿ ಮಾತನಾಡುತ್ತಿದ್ದೆವು. ಜೈಲಿನ ವ್ಯವಸ್ಥೆಗೆ ಯಾರೇ ಜವಾಬ್ದಾರರಾಗಿರಲಿ, ಅದು ಯಾರ ಕೈಯ್ಯಲ್ಲೇ ಇರಲಿ, ನಾವು ಕೂಡಲೇ ರಾಜಕೀಯ ಖೈದಿಗಳ ವಿಚಾರದಲ್ಲಿ ಸರಿಯಾದ ವ್ಯವಸ್ಥೆಮಾಡುವ ಪ್ರಯತ್ನಮಾಡಬೇಕು, ಇದು ಪ್ರಜೆಗಳ ಹಕ್ಕು ಎಂದುಕೊಳ್ಳುತ್ತಿದ್ದೆವು. ಆದರೆ ಈ ಹೊತ್ತಿನ ಸ್ಥಿತಿಯನ್ನು ನೋಡಿದರೆ ನನಗೆ ವ್ಯಸನವಾಗುತ್ತದೆ. ಇದುವರೆಗೂ ರಾಜಕೀಯ ಖೈದಿಗಳ ವಿಚಾರದಲ್ಲಿ ಎಳ್ಳಷ್ಟೂ ಅನುಕೂಲ ಮಾಡಿಲ್ಲ. ಈ ಹೊತ್ತು ಹಿಂದಿದ್ದಂತೆಯೇ ಅನುಷ್ಠಾನದಲ್ಲಿದೆ. ನಿಜವಾಗಿಯೂ ಅವರು ಹಿಂದಿದ್ದ ಒಳ್ಳೆಯ ಭಾವನೆಯನ್ನೇ ಈಗಲೂ ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡಬೇಕೆಂಬ ಉದ್ದೇಶದಿಂದ ಕೆಲಸ ನಡೆಸಿದ್ದಾರೆಯೇ? ನಿಜವಾಗಿ ಅದರಂತೆ, ನಡೆಸಬೇಕೆಂದು ಈಗಲೂ ಅವರ ಮನಸ್ಸಿನಲ್ಲಿದೆಯೇ ಎಂಬ ಬಗ್ಗೆ ಅವರು ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆ. ಜೈಲನ್ನು ಸ್ವಾವಲಂಬನೆಯಿಂದ ನಡೆಸಿಕೊಂಡು ಬರಬೇಕಾದುದು ಅವಶ್ಯಕ. ಹೀಗೆ ನಡೆಸುವುದು ಕಷ್ಟವೇನೂ ಅಲ್ಲ. ಜೈಲುಸುಧಾರಣೆ, ಲಾಕಪ್ ಸುಧಾರಣೆಯ ಸಂಬಂಧವಾಗಿ ಈ ಬಡ್ಜೆಟ್ಟಿನಲ್ಲಿ ಎಳ್ಳಷ್ಟು ಹಣ ಒದಗಿಸಿರುವುದೂ ಕಂಡುಬರುತ್ತಿಲ್ಲ. ಖೈದಿಗಳು ವಾಸಮಾಡುವ ಮನೆ ಸರಿಯಾಗಿದ್ದು, ಅಲ್ಲಿ ನೈರ್ಮಲ್ಯವಿರಬೇಕು. ಒಂದುಸಾರಿ ಜೈಲಿಗೆ ಹೋಗಿ ಹೊರಗೆ ಬಂದವನು ಮತ್ತೆ ತಪ್ಪುಮಾಡಬಾರದೆಂಬ ಭಾವನೆ ಅವನಲ್ಲಿ ಬರುವಂತೆ ಮಾಡಬೇಕು. ಈ ಯೋಚನೆಯನ್ನು ಸರ್ಕಾರ ಮಾಡಬೇಕು. This is also connected with social pathology. If a person becomes a thief either his parents should be accused or the Government should be accused.

ಇದರಲ್ಲಿ ಒಂದು ತತ್ವವಿದೆ, ಜಪಾನ್‌ದೇಶದಲ್ಲಿ ಮನೆಗಳಿಗೆ ಬೀಗಹಾಕುವುದಿಲ್ಲ. ಆ ರೀತಿ ರಾಜ್ಯಭಾರ ಅಲ್ಲಿ ನಡೆದುಕೊಂಡು ಬಂದಿದೆ. ಆ ರೀತಿಯ ಭಾವನೆಯನ್ನು ಅಲ್ಲಿಟ್ಟುಕೊಂಡಿದ್ದಾರೆ. ಆದರೆ ಆ ನೀತಿಯನ್ನು ಇಲ್ಲಿ ಅನುಸರಿಸಿಲ್ಲ. ಬಡ್ಜೆಟ್ಟನ್ನು ನೋಡಿದರೆ ಇದರಲ್ಲಿ ಉತ್ಪತ್ತಿ 7,80,000 ರೂಪಾಯಿ, ಖರ್ಚು 37,35,000 ರೂಪಾಯಿ. ಖರ್ಚು 2,95,500 ರೂಪಾಯಿ ಹೆಚ್ಚಾಗಿದೆ. ಆದರೆ ವ್ಯವಸ್ಥೆ ಸರಿಯಾಗಿಲ್ಲ. ಈ ಹಣವನ್ನು ಯಾವರೀತಿ ಹಂಚಿದ್ದಾರೆಂದು ನೋಡಿದರೆ, ಜೈಲುಗಳಿಗೆ 13,20,700 ರೂಪಾಯಿಗಳನ್ನೊದಗಿಸಿದ್ದಾರೆ; ಸಣ್ಣ ಜೈಲುಗಳಿಗೆಷ್ಟೆಂಬುದು ಸ್ಪಷ್ಟವಾಗಿಲ್ಲ. ಈ 13,20,700 ರೂಪಾಯಿ ಎಲ್ಲಾ ಜೈಲುಗಳ ಮತ್ತು ಲಾಕಪ್‌ಗಳ ಸಿಬ್ಬಂದಿಗಾಗಿ. ಎಂದರೆ, ಒಟ್ಟುಖರ್ಚಿನ ಮೂರನೆಯ ಒಂದುಭಾಗ ಸಿಬ್ಬಂದಿಯ ಖರ್ಚು. ಬಾಕಿ ಖರ್ಚು ನೋಡಿದರೆ, ನಿಜವಾಗಿ ಉಪಯುಕ್ತವಾದ ಖರ್ಚು ಮಾಡಿರುವುದು Sanitation 1,300 ರೂಪಾಯಿ, Miscellaneous services and supplies 13,000, Other charges 4,200. ಉಪ ಜೈಲುಗಳಲ್ಲಿ ಯಾವರೀತಿ ಖರ್ಚುಮಾಡುತ್ತಾರೆಂಬುದನ್ನು ತಿಳಿಸಿಲ್ಲ. Sanitation charges ಎಂದರೆ works and repairs ಎಂದು ಹೇಳಿದ್ದಾರೆ. ಚರಂಡಿಗಳನ್ನು ಮಾಡುವುದಕ್ಕೆ ಖರ್ಚೆ ಅಥವಾ ಯಾವುದಕ್ಕೆ ಖರ್ಚು ಮಾಡುತ್ತಾರೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇಲ್ಲಿ—

Other allowances	33,000
Contingency	3,56,900
Sanitation	60,000
Miscellaneous services and supplies	97,000
Other charges	21,000
Total	5,67,900

ಇಷ್ಟು ಹಣವನ್ನು ಯಾವ ಬಾಬುಗಳಿಗೆ ಖರ್ಚುಮಾಡುತ್ತಾರೆಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಇದರ ಪೈಕಿ ನ್ಯಾಯವಾದ ರೀತಿಯಲ್ಲಿ ಖೈದಿಗಳಿಗಾಗಿ ಎಷ್ಟು ಖರ್ಚಾಗುತ್ತದೆಂದು ನಾನು ಕೇಳುತ್ತೇನೆ. ಕಾಮಗಾರಿ ಮತ್ತು ರಿಪೇರಿಗಳಿಗೆ 33 ಸಾವಿರ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಇಷ್ಟೇ ಸರಿಯಾಗಿ ಕಾಣುವುದು. ಖೈದಿಗಳ ಉಪಚಾರಕ್ಕೆ, ಸುಧಾರಣೆಗೆ ಯಾವರೀತಿ, ಎಷ್ಟು ಖರ್ಚುಮಾಡುತ್ತಾರೆಂಬುದು ಇಲ್ಲಿಲ್ಲ. ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಯಾವರೀತಿ ಮತ್ತು ಎಷ್ಟು ಹಣವನ್ನೊದಗಿಸಿದ್ದಾರೆಂದು ಕೇಳಿದರೆ, ಏನೂ ಇಲ್ಲ, a big blank. ಅಂದಮೇಲೆ ಜೈಲು ಸುಧಾರಣೆಗಳನ್ನು ಎಷ್ಟರಮಟ್ಟಿಗೆ ಮಾಡುತ್ತಿದ್ದೇವೆಂಬುದು ಗೊತ್ತಾಗುತ್ತದೆ. ಖೈದಿಗಳೂ ಮಾನವರು, ಅವರನ್ನು ಮನುಷ್ಯರನ್ನು ನೋಡುವ ರೀತಿಯಲ್ಲಿ ನೋಡಬೇಕು ಎಂಬ ಮನೋಭಾವವನ್ನಿಟ್ಟುಕೊಂಡಿಲ್ಲವೆಂಬುದು ವ್ಯಕ್ತವಾಗುತ್ತದೆ. ಒಂದು ದಿವಸ ಜೈಲಿನಲ್ಲಿ ಶ್ರೀ ನಿಜಲಿಂಗಪ್ಪನವರು ಒಂದುಕಡೆ, ನಾನು ಒಂದುಕಡೆ ಇದ್ದಾಗ ನಮ್ಮ ತಲೆ ಒಡೆದು ಹಾಕುತ್ತಿದ್ದರು, ಏನೋ ದೇವರ ದಯದಿಂದ ಅದು ತಪ್ಪಿತು. ಒಂದು ಜೈಲಿನಲ್ಲಿ 60 ಜನರಿರುವಾಗ ಒಬ್ಬೊರೊಂದಿಗೆ ಇನ್ನೊಬ್ಬರು ಮಾತನಾಡಿದರೂ ಅದು ಅಪರಾಧ. ಹೀಗೆ ಹಿಂದಿರುವ ಏರ್ಪಾಡುಗಳನ್ನೇ ಈಗಲೂ ಇಟ್ಟುಕೊಂಡು ನಾವು ಸುಧಾರಣೆಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಸುಧಾರಣೆ ಮಾಡಬೇಕೆಂಬ ಇಷ್ಟ

ಇವರಿಗಿಲ್ಲ. ಮಕ್ಕೀಕಾಮಕ್ಕಿ ಹಿಂದಿನಿಂದ ಯಾವರೀತಿ ಇದೆಯೋ ಅದೇರೀತಿ ಮುಂದುವರಿಸಿಕೊಂಡು ಹೋಗ ಬೇಕೆಂಬ ಮನೋಭಾವವಿದೆಯೇ ವಿನಾ ಸುಧಾರಣೆ ಮಾಡುವ ಇಷ್ಟವಿಲ್ಲ. ಈಗಲಾದರೂ ನಾನು ಹೇಳಿರು ವಂತೆ, ಈ ಮೂರು ಬಾಬುಗಳಲ್ಲಿ ಸುಧಾರಣೆ ಮಾಡ ಬೇಕೆಂಬ ಇಷ್ಟವಿದ್ದು, ಎಷ್ಟೇ ಕಷ್ಟಬಂದರೂ ನಿವಾ ರಣೆ ಮಾಡಿಕೊಂಡು ಈ ಕೆಲಸ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದರೆ ತಾತ್ವಿಕವಾಗಿ ನಾವು ಒಪ್ಪಿ ಕೊಳ್ಳುತ್ತೇವೆ. ಹೀಗೆ ಹೇಳದೆ ಹೋದರೆ, ಸರ್ಕಾ ರಕ್ಕೆ ಸುಧಾರಣೆಮಾಡುವ ಇಷ್ಟವೇ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಸ್ವಾಮಿ, ಹೈಕೋರ್ಟ್ ವಿಚಾರದಲ್ಲ ಕೆಲವು ಮಾತುಗಳನ್ನು ಹೇಳಬೇಕೆಂದಿ ದ್ದೇನೆ.

(*Interruption*)

I am only intervening in the debate.

Mr. SPEAKER.—The position is, when any minister who is not in charge of the Department gets up to speak, it is to be taken that he is intervening in the debate.

*ಶ್ರೀ ಎಸ್. ನಿಜಲಿಂಗಪ್ಪ.—ಶ್ರೀ ಕೆಂಚಪ್ಪನವರು ಬಹಳ ದೀರ್ಘವಾದ ಭಾಷಣಮಾಡಿದ್ದಾರೆ. ಆದರೆ ಆ ಭಾಷಣವನ್ನು ಅರ್ಥಮಾಡಿಕೊಂಡು ತಿಳಿದುಕೊಳ್ಳತಕ್ಕ ಶಕ್ತಿ ನನಗಿಲ್ಲವೆಂದೆನಿಸುತ್ತಿದೆ. ಅದು ಪೂರ್ಣವಾಗಿ ನನಗೆ ಅರ್ಥವಾಗಿಲ್ಲ. ಆದರೂ ಶ್ರೀ ಪೂಣಚ್ಚ ಅವರು ಕೆಲವು ವಿಚಾರಗಳಿಗೆ ಜವಾಬು ಕೊಡುವವರಿದ್ದಾರೆ, ಬಹುಶಃ ಅವರು ನನಗಿಂತ ಸೂಕ್ಷ್ಮಮತಿಗಳೆಂದು ಕಾಣುತ್ತದೆ, ಅವರಿಗೆ ಜವಾಬುಕೊಡುವ ಶಕ್ತಿಯಿದೆ. ಶ್ರೀ ಕೆಂಚಪ್ಪನವರು ಹಿಂದೆ ಜೈಲಿನಲ್ಲೇನು ಪರಿಸ್ಥಿತಿ ಯಿತ್ತೋ ಅದೇ ಪರಿಸ್ಥಿತಿ ಈಗಲೂ ಇದೆ ಎಂದು ಹೇಳಿ ದರು. ಬಹುಶಃ ಈಚೆಗೆ ಅವರು ಜೈಲಿಗೆ ಹೋಗಿ ನೋಡಿಲ್ಲ. ಹೋಗಿ ನೋಡಿದರೆ ಬಹುಶಃ ಆಗ್ಗೂ ಈಗ್ಗೂ ಅರ್ಥಾರ್ಥ ಸಂಬಂಧವಿಲ್ಲ, ಈಗಿನ ಜೈಲು ಜೀವನ ನಿಜವಾಗಿಯೂ ಬಹಳ ಮಟ್ಟಿಗೆ ಉತ್ತಮ ವಾಗಿದೆ. ಜೈಲುವಾಸಿಗಳು ಸಹ ಮನುಷ್ಯರೆಂದು ತಿಳಿದುಕೊಂಡು ಅಲ್ಲಿ ಅವರಿಗೇನೇನು ಅನುಕೂಲತೆ ಗಳನ್ನು ಮಾಡಬೇಕೋ ಅವನ್ನು ಮಾಡುತ್ತಿದೆ, 1942ನೆಯ ಇಸವಿಗೂ 1947ನಯ ಇಸವಿಗೂ ಬಹಳ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ಗೊತ್ತಾಗು ತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರೇಕ್ಷ ಕರಾಗಿ ಅವರು ಜೈಲಿಗೆ ಹೋಗಿಬಂದರೆ ವಿಚಾರ ಅವ ರಿಗೇ ಗೊತ್ತಾಗುತ್ತದೆ. ಬಹುಶಃ ಆ ವಿಚಾರದಲ್ಲಿ ಶ್ರೀ ಪೂಣಚ್ಚ ಅವರು ಉತ್ತರಕೊಡುತ್ತಾರೆ. ಆದರೆ ಇಷ್ಟುಮಾತ್ರ ಹೇಳಬಲ್ಲೆ; ಜೈಲಿನ ಆಗಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಬಹಳ ವ್ಯತ್ಯಾಸವಿದೆ. ಹಳೆಯ ಮೈಸೂರಿನಲ್ಲಿ ಕೆಲವು ವರ್ಷಗಳಿಂದಲೂ ಏನು ತೊಂದರೆಯಿತ್ತೋ ಅದನ್ನು ಗಮನದಲ್ಲಿಟ್ಟುಕೊಂಡು ಈ ಸರ್ಕಾರದ ಮೇಲೆ ಟೀಕೆಮಾಡುವುದು ರೂಢಿಯಾ ಗಿದೆ. ಆದರೆ ಆಗಿನ ಸರ್ಕಾರಕ್ಕೂ ಈಗಿನ ಸರ್ಕಾರಕ್ಕೂ ಸಂಬಂಧವಿಲ್ಲ. ಆದ್ದರಿಂದ ಆರೋಪ ಮಾಡುವಾಗ ಬಹುಶಃ ಸಾಕಷ್ಟು ವಿಷಯ ತಿಳಿಯದೆ ಮಾಡುತ್ತಿದ್ದಾ ರೆಂದು ಹೇಳಬೇಕಾಗಿದೆ. ಹಿಂದೆ ಸರ್ಕಾರ ಬದಲಾ ವಣೆ ಮಾಡಬೇಕೆಂದು ಶ್ರೀ ಕೆಂಚಪ್ಪನವರೂ ಮತ್ತು ನಾನೂ ಜೈಲಿಗೆ ಹೋಗಿದ್ದೆವು. 1947ನೆಯ ಇಸವಿ ಯಿಂದ ಬೇರೆ ಸರ್ಕಾರವಿದೆ. ಈಗ ವಿಶಾಲ ಪ್ರದೇಶ ವಿದೆ, ಜನಸಂಖ್ಯೆ ಹೆಚ್ಚಿದೆ, ಐಶ್ವರ್ಯ ಹೆಚ್ಚಿದೆ, ಅನೇಕ ರೀತಿಯ ಸಮಸ್ಯೆಗಳು ನಮ್ಮಮುಂದಿವೆ. ಆದ್ದರಿಂದ ಹಿಂದೆ ಆಗಿರುವುದಕ್ಕೂ ಈಗಿರುವುದಕ್ಕೂ ಗಂಟುಹಾಕಿ ಯಾವುದೋ ಒಂದು ಮನೋಭಾವದಿಂದ ಟೀಕೆ ಮಾಡ ಬಾರದೆಂದು ಮನವಿ ಮಾಡುತ್ತೇನೆ.

ಆಮೇಲೆ ಹೈಕೋರ್ಟ್ ನ್ಯಾಯಾಧೀಶರನ್ನು ನೇಮಕಮಾಡುವ ವಿಚಾರದಲ್ಲಿ ಬಹಳ ಹೆಚ್ಚಾಗಿ ಆಕ್ಷೇ ಪಣೆ ಬಂದಿದೆ. ಈ ಕೆಲಸ ತಡವಾಗಿದೆಯೆಂಬುದನ್ನು ನಾನೂ ಒಪ್ಪುತ್ತೇನೆ. ಹಾಗೆ ಹೇಳುವಾಗ ಸದಸ್ಯರು ಆ ರೀತಿ ಟೀಕೆಮಾಡುವುದಕ್ಕೆ ಅವಕಾಶವಿದೆ, ಹಾಗೆ ಮಾಡುವುದು ಸಾಧುವಾದುದು ಎಂದು ಒಪ್ಪುತ್ತೇನೆ. ಏಕೆಂದರೆ ತಡವಾಗಿರುವುದು ನಿಜ. ಆದರೆ ಅದಕ್ಕೆ ಕೆಲವು ಮುಖ್ಯವಾದ ಕಾರಣಗಳಿವೆ. ಐದು ಪ್ರದೇಶಗಳು ಸೇರಿ ಒಂದು ದೇಶವಾಗಿರುವಾಗ ಯಾವುದೇ ಸರ್ಕಾರ ವಾಗಲಿ, ಕೇಂದ್ರ ಸರ್ಕಾರವಾಗಲಿ ಅಥವಾ ಸೂಚನೆ ಕೊಡುವ ರಾಜ್ಯ ಸರ್ಕಾರವಾಗಲಿ ಹೈಕೋರ್ಟ್ ಜಡ್ಜಿ ಗಳನ್ನು ನೇಮಕಮಾಡತಕ್ಕ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬರಬೇಕಾದರೆ ಅದಕ್ಕೆ ಬಹಳ ಹೊಣೆ ಗಾರಿಕೆಯಿದೆ. ಏಕೆಂದರೆ ಒಬ್ಬ ಜಡ್ಜಿಯನ್ನು ನೇಮಕ ಮಾಡಬೇಕಾದರೆ ಎಲ್ಲಾ ವಿಚಾರಗಳನ್ನೂ ಆಲೋಚನೆ ಮಾಡಿ ಮಾಡಬೇಕು. ಆದ್ದರಿಂದ ಅದು ಅತ್ಯಂತ ಪವಿತ್ರವಾದ ಕೆಲಸ, ಅತ್ಯಂತ ಹೊಣೆಗಾರಿಕೆ ಕೆಲಸ ಮತ್ತು ಜವಾಬ್ದಾರಿ ಕೆಲಸ. ಇದನ್ನು ಎಲ್ಲರೂ ಗಮ ನಿಸಬೇಕು. ಆದ್ದರಿಂದ ಶಿಫಾರ್ಸುಮಾಡುವವನಾಗಲಿ ಅಥವಾ ಸೂಚನೆ ಕೊಡುವವನಾಗಲಿ ನಾನಾ ಭಾಗ ಗಳಿಂದ ಬಂದಿರುವವರ ಪೈಕಿ ಯಾರು ಯೋಗ್ಯರೆಂದು ಪರಿಶೀಲಿಸಬೇಕಾಗುತ್ತದೆ.

ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಇದನ್ನು ಮಾಡುವುದಕ್ಕೆ ಒಂಭತ್ತು ತಿಂಗಳು ಬೇಕೆ ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವುಕಡೆ ಎರಡು ವರ್ಷಗಳಾಗಿವೆ, ಮಾನ್ಯ ಸದಸ್ಯರಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ನಮ್ಮ ವಿಚಾರ ತೆಗೆದುಕೊಂಡರೆ ಇಲ್ಲಿ ಸಾಕಷ್ಟು ವಿಚಾರಮಾಡಿ ತೀರ್ಮಾನಮಾಡಿ ಸೂಚನೆ ಕೊಡಬೇಕಾಗುತ್ತದೆ. ಅದೇ ರೀತಿಯಲ್ಲಿ ಮೇಲಿನವರೂ ಸಹ ಹೊಸರಾಜ್ಯಾಂಗದ ಪ್ರಕಾರ ಪರಿಶೀಲನೆಮಾಡಿ ಸಾಕಷ್ಟು ಗಂಭೀರವಾಗಿ, ಆಳವಾಗಿ ಹೊಣೆಗಾರಿಕೆ ಯಿಂದ ಆಲೋಚಿಸಬೇಕಾಗುತ್ತದೆ. ಹೀಗಾಗಿ ಕೆಲ ಕೆಲವು ಸ್ವಲ್ಪ ತಡವಾಗುವುದಕ್ಕೆ ಕಾರಣವಾಗಿದೆಯೇ ವಿನಾ ಯಾವುದೇ ಒಂದು ಬೇರೆ ದೃಷ್ಟಿಯಿಂದ, ಬೇಜವಾಬ್ದಾರಿ ದೃಷ್ಟಿಯಿಂದ ನಿಧಾನವಾಗಿಲ್ಲ. ಸರಿ ಯಾಗಿ ವಿಚಾರ ಮಾಡಿದರೆ ಈ ಭಾವನೆ ಬರಲು ಅವ ಕಾಶವಿಲ್ಲ. ತಡವಾಗುವುದಕ್ಕೆ ಸಕಾರಣವಿದೆ ಯೆಂಬುದು ತಮಗೂ ಗೊತ್ತಿದೆ. ಬಾಕಿ ಹೈಕೋರ್ಟ್ ಗಳಲ್ಲೂ ಹೆಚ್ಚು ಪೆಂಡೆನ್ಸಿಯಿದೆ. ನಮ್ಮಲ್ಲಿ ಎಷ್ಟಿರ ಬೇಕೋ ಅದಕ್ಕಿಂತ ಹೆಚ್ಚಾಗಿದೆಯೆಂಬುದು ಗಮನ ದಲ್ಲಿದೆ. ನಮ್ಮ ಹೈಕೋರ್ಟಿನಲ್ಲೆಷ್ಟು ಜನ ನ್ಯಾಯಾ ಧೀಶರಿರಬೇಕೆಂಬುದನ್ನು ತೀರ್ಮಾನ ಮಾಡುವವರು ಪ್ರೆಸಿಡೆಂಟರು ; ಅದಕ್ಕೆ ಕಾನೂನಿದೆ. ಹೈಕೋರ್ಟ್ ವಿಚಾರ ಮತ್ತು ಇನ್ನೂ ಕೆಲವು ವಿಚಾರ ಮಾನ್ಯ ಸದ ಸ್ಯರು ಮಾತನಾಡದಿದ್ದರೆ ಚೆನ್ನಾಗಿತ್ತೆಂದು ಕಾಣು ತ್ತದೆ. ಸದಸ್ಯರು ಹೇಳಿದ ಕೆಲವು ವಿಚಾರಗಳಲ್ಲಿ ನನಗೂ ಸಹಾನುಭೂತಿಯಿದೆ. ಪೆಂಡೆನ್ಸಿ ಜಾಸ್ತಿ, ಸುಮಾರು ಏಳೂವರೆ ಸಾವಿರ ಕ್ರಿಮಿನಲ್, ಮತ್ತು ಸಿವಿಲ್ ಲಿಟಿಗೇಷನ್ಸ್ ಮತ್ತು ರಿಟ್ ಪೆಟಿಷನ್ಸ್ ಇವೆ.

Sri C. K. RAJIAH SETTY (Chicknaikanahally).—Shall I say that article 216 is amended ?

Sri S. NIJALINGAPPA.—About the number ?

Sri C. K. RAJIAH SETTY.—Yes.

ಶ್ರೀ ಎಸ್. ನಿಜಲಿಂಗಪ್ಪ.—ಒಂದೊಂದು ಹೈ ಕೋರ್ಟಿಗೆ ಇಷ್ಟು ನ್ಯಾಯಾಧೀಶರಿರಬೇಕೆಂಬುದು ರಾಜ್ಯಾಂಗದಲ್ಲಿ ಮೊದಲೇ ನಮೂದಾಗಿತ್ತು. ಆಮೇಲೆ ಕೆಲವು ಕಡೆ ಜಾಸ್ತಿ ಮಾಡಬೇಕೆಂದು ಮನವಿ ಮಾಡಿದ್ದು ರಿಂದ ಯಾವ ಯಾವ ಕೋರ್ಟಿನಲ್ಲಿ ಎಷ್ಟೆಷ್ಟಿರಬೇಕೆಂದು ತೀರ್ಮಾನ ಮಾಡಿ, ಅನುಕೂಲಕ್ಕೆ ಎಷ್ಟುಬೇಕೋ ಅಷ್ಟಕ್ಕೆ ಅಧ್ಯಕ್ಷರು ಸೂಚನೆ ಕೊಟ್ಟು ಅದರಂತೆ ನೇಮಕ ಮಾಡುವುದಕ್ಕೆ ಕಾನೂನು ಬದಲಾವಣೆಮಾಡಿದರು. ನಮ್ಮ ಕೋರ್ಟಿಗೆ ಅಷ್ಟು ಕೆಲಸವಿಲ್ಲದಿರುವುದರಿಂದ ಏಳು ಮಂದಿ ನ್ಯಾಯಾಧೀಶರಿದ್ದರೆ ಸಾಕೆಂದು ಕೆಲವರೂ, ಹತ್ತು ಮಂದಿಯಿರಬೇಕೆಂದು ಮತ್ತೆ ಕೆಲವರೂ ಅಭಿಪ್ರಾಯಪಡುತ್ತಿದ್ದಾರೆ. ಆದರೆ ಪೆಂಡೆನ್ಸಿ ಜಾಸ್ತಿ, ಅದು ಕಡಮೆಯಾಗಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿದೆ, ಅದನ್ನು ಕಡಮೆ ಮಾಡಿ ಎಲ್ಲರಿಗೂ ಅನುಕೂಲ ಒದಗಿಸಬೇಕೆಂದು ಅಭಿಪ್ರಾಯಪಡುವುದನ್ನು ಎಲ್ಲರೂ ಸ್ವಾಗತಿಸುತ್ತಾರೆ. ಹೀಗೆ ಕಡಮೆ ಮಾಡಲು ಅಡೀಷನಲ್ ಜಡ್ಜಸ್ ನೇಮಕ ಆವಶ್ಯಕವಾದರೆ ಮಾಡಬೇಕೆಂದಿದೆ. ಈ ವಿಚಾರದಲ್ಲಿ ಕಾರ್ಯಕ್ರಮವಿದೆ. ಈಗಾಗಲೇ ಚೀಫ್ ಜಸ್ಟಿಸ್ ಅವರನ್ನು ಹೊಸದಾಗಿ ನೇಮಿಸಲಾಗಿದೆ. ಈಗ ಒಂದು ವಾರದಲ್ಲಿ ಇಬ್ಬರು ನ್ಯಾಯಾಧೀಶರು ಛಾರ್ಜು ತೆಗೆದುಕೊಂಡಿದ್ದಾರೆ. ಬಹುಶಃ ಒಂದೆರಡು ವಾರದೊಳಗೆ ಇನ್ನಿಬ್ಬರ ನೇಮಕವಾಗುತ್ತದೆ. ಅಲ್ಲಿಗೆ ಏಳು ಜನರಾಗುತ್ತಾರೆ. ಅದಕ್ಕಿಂತ ಜಾಸ್ತಿ ನ್ಯಾಯಾಧೀಶರು ಬೇಕೆ ಬೇಡವೆ ಎಂಬುದು ಅಭಿಪ್ರಾಯದ ವಿಚಾರ. ಅಡೀಷನಲ್ ಜಡ್ಜಸ್ ನೇಮಕಮಾಡಿ ಪೆಂಡೆನ್ಸಿ ಕಡಮೆ ಮಾಡಬೇಕೆಂಬುದು ಎಲ್ಲರ ಅಭಿಪ್ರಾಯವಾದರೆ ಸೂಕ್ತಕ್ರಮ ಕೈಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಯಾವುದೇ ಒಂದು ದುರುದ್ದೇಶದಿಂದ ಅಥವಾ ಭಾವನೆಯಿಂದ ಈ ವಿಚಾರದಲ್ಲಿ ತಡಮಾಡಿಲ್ಲ. ಹೊಸರಾಜ್ಯವೇರ್ಪಟ್ಟಿರುವುದರಿಂದ ಸ್ವಲ್ಪ ಕಷ್ಟವಾಗಿದೆ ಶಿಫಾರಸ್ಸು ಮಾಡುವುದು, ಒಪ್ಪಿಕೊಳ್ಳುವುದು, ವಿಚಾರಮಾಡುವುದು ಮುಂತಾದ ಕಾರಣಗಳಿಗಾಗಿ ಸ್ವಲ್ಪ ನಿಧಾನವಾಗಿದೆ. ಸರ್ಕಾರದ ಜವಾಬ್ದಾರಿ ಎಷ್ಟಿದೆ ಯೆಂಬುದನ್ನು ಮಾನ್ಯ ಸದಸ್ಯರು ಆಲೋಚಿಸಬೇಕೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ವಿಚಾರದಲ್ಲಿ ಆದಷ್ಟು ಜಾಗ್ರತೆ ಪರಿಹಾರ ಮಾರ್ಗವನ್ನು ಅನುಸರಿಸಬೇಕೆಂದಿದ್ದೇವೆ.

6 P.M.

ಕೆಲವರು ಮಾನ್ಯ ಸದಸ್ಯರು ಟೀಕೆಗಳನ್ನು ಮಾಡುವ ಸಂದರ್ಭದಲ್ಲಿ ಒಂದು ಅಭಿಪ್ರಾಯವನ್ನು ಬರೆದು ಕಳುಹಿಸಿದ್ದಾರೆ. ಅಡ್ವೋಕೇಟ್ ಜನರಲ್ ಅವರು ತಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತಾ ಇಲ್ಲ ಎಂದು ಅದರಲ್ಲಿ ತಿಳಿಸಿದ್ದಾರೆ. ಬಹುಶಃ ಮಾನ್ಯ ಸದಸ್ಯರು ತಪ್ಪು ಭಾವನೆಯಿಂದ ಆ ರೀತಿ ಹೇಳಿದ್ದಾರೆಂದು ನನಗೆ ತೋರುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಕಡೆ ಯಾರೂ ಹೇಳಲಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಯಾರಾದರೂ ಹೇಳಲಿ, ತಪ್ಪು ಅಭಿಪ್ರಾಯಕ್ಕೆ ಕಾರಣವಾಗುವುದಾದರೆ, ಅದನ್ನು ಸರಿಪಡಿಸುವುದು ನನ್ನ ಕರ್ತವ್ಯ. ಅಡ್ವೋಕೇಟ್ ಜನರಲ್ ಅವರು ಅತ್ಯಂತ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಈಗ್ಗೆ ಕೆಲವು ತಿಂಗಳುಗಳ ಹಿಂದೆ ಆರ್ಬಿಟ್ರೇಷನ್ ಕೇಸುಗಳು ಇದ್ದವು. ಅವು ಸುಮಾರು 50-60 ಲಕ್ಷರೂಪಾಯಿಗಳ ಮೊಕದ್ದಮೆಗೆ ಸಂಬಂಧಪಟ್ಟವು. ಅಂತಹ ಕೇಸುಗಳನ್ನು ಇತ್ಯರ್ಥಮಾಡಲು ಇವರನ್ನು ನೇಮಿಸಲಾಯಿತು. ಅದಕ್ಕಾಗಿ ಇವರು ಕೆಲವು ತಿಂಗಳುಗಳಿಂದ ಅತಿಯಾಗಿ ಆ ಕೆಲಸ ಮಾಡಿದ್ದಾರೆ. ಹೀಗೆ ಮಾಡಿದರೂ ಅವರು ಚೆನ್ನಾಗಿ ಕೆಲಸ ಮಾಡಿಲ್ಲ ಎಂದು ಹೇಳುವ ಆರೋಪಣೆ ಸರಿಯಲ್ಲ. ಅವರು ಆ ರೀತಿ ವಿಶೇಷವಾಗಿ ಕೆಲಸಮಾಡಿ ವಿಶ್ರಾಂತಿ ಬೇಕು ಎಂದು ಹೇಳಿದರು ಅವರು ಆ ರೀತಿ ವಿಶ್ರಾಂತಿ ತೆಗೆದುಕೊಳ್ಳುವುದರಲ್ಲಿ ಏನೂ ತಪ್ಪಿಲ್ಲ. ಹೀಗಿರುವಾಗ ಅವರ ಮೇಲೆ ಟೀಕೆ ಮಾಡುವುದನ್ನು ನೋಡಿದರೆ ನನಗಂತೂ ಬಹಳ ವಿಷಾದವಾಗುತ್ತಿದೆ. ನ್ಯಾಯಾಡಳಿತದಲ್ಲಿ ಏನೇತಪ್ಪುಗಳು ಬಂದರೂ, ಅವುಗಳನ್ನು ಸರಿಪಡಿಸುವುದು ನನ್ನ ಕರ್ತವ್ಯ. ಈಗ ಹೈಕೋರ್ಟು ಜಡ್ಜಿಗಳನ್ನು ನೇಮಕಮಾಡುವ ವಿಚಾರದಲ್ಲಿ ಸರಿಯಾದ ಮಾರ್ಗವನ್ನು ಅವಲಂಬಿಸುತ್ತಿದ್ದೇವೆಂಬುದನ್ನು ಹೇಳಬಿಚ್ಛಿಸುತ್ತೇನೆ.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಸರ್ಕಾರದವರು ನ್ಯಾಯಾಡಳಿತ, ಬಂದೀಖಾನೆಗಳು ಮತ್ತು ಖೈದಿಗಳ ವಸಾಹತುಗಳು, ಮತ್ತು ಪೋಲೀಸ್ ಈ ಮೂರು ಖಾತೆಗಳಿಗೆ ಈ ವರ್ಷ 4,33,38,700 ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ನಮ್ಮ ಮುಂದೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ನಾನು ಮೊದಲನೆಯದಾಗಿ ವಿರೋಧಿಸುತ್ತಾ, ನ್ಯಾಯಾಲಯ, ಪೋಲೀಸ್ ಮತ್ತು ಬಂದೀಖಾನೆ ಈ ಮೂರು ಇಲಾಖೆಗಳ ವಿಚಾರವಾಗಿ ಕೆಲವು ಅಂಶಗಳನ್ನು ಕುರಿತು ಮಾತನಾಡಬೇಕೆಂದು ನಿಂತಿದ್ದೇನೆ. ಪೋಲೀಸ್ ಖಾತೆಯ ವಿಚಾರವನ್ನು ಸ್ಪಷ್ಟಪಡಿಸುವಾಗ, ಎಲ್ಲಿ ಗೃಹಸಚಿವರಿಗೆ ಕಹಿ ಮನಸ್ಸು ಆಗುತ್ತದೋ ಎಂದು ಯೋಚನೆಮಾಡುತ್ತಿದ್ದೇನೆ. ಆ ರೀತಿ ಕಹಿಮನಸ್ಸನ್ನು ಗೃಹಸಚಿವರು ಮಾಡಿಕೊಳ್ಳಬಾರದು. ಏನಾದರೂ ನಾವು ಹೇಳುವುದರಲ್ಲಿ ತಿರುಳು ಇದ್ದರೆ, ಅದನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಜಾಗ್ರತೆ ನಮ್ಮ ಸಲಹೆಗಳನ್ನು ಕಾರ್ಯಗತ ಮಾಡಬೇಕು. ನ್ಯಾಯಾಲಯದ ವಿಚಾರವಾಗಿಯೂ ಮೈಸೂರಿನ ಶ್ರೇಷ್ಠನ್ಯಾಯಾಸ್ಥಾನದ ವಿಚಾರವಾಗಿಯೂ ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಸತ್ತ ಕುದುರೆಯನ್ನು ಹೊಡೆದ ಹಾಗಾಗುತ್ತದೆ. ಅವರು ಈ ಸಭೆಯಲ್ಲಿ ಏಳು ಜನ ಜಡ್ಜಿಗಳನ್ನು ನೇಮಕ ಮಾಡುತ್ತೇವೆ ಎಂದು ಒಂದು ಅಷ್ಯೂರೆನ್ಸನ್ನು ಕೊಟ್ಟಿದ್ದಾರೆ. ಪುನಃ ಆ ವಿಷಯದ ಮೇಲೆ ನಾನು ಮಾತನಾಡಿದರೆ, ಅದು ರಿಪಿಟಿಷನ್ ಆಗುತ್ತದೆ. ಕಾರ್ಯಾಂಗದಿಂದ ನ್ಯಾಯಾಂಗ ಬೇರ್ಪಟ್ಟ ಮೇಲೆ ಪ್ರತಿಯೊಬ್ಬರಿಗೂ ನ್ಯಾಯ ಸರಿಯಾಗಿ ಸಿಕ್ಕುತ್ತದೆಂದು ನಾವು ತಿಳಿದುಕೊಂಡಿದ್ದೆವು. ಇದು ಮರಳುಗಾಡಿನಲ್ಲಿ ಕಂಡ ಬಿಸಿಲು ಕುದುರೆಯಂತೆ ಆಗಿದೆ. ಏತಕ್ಕೆಂದರೆ ನ್ಯಾಯಾಸ್ಥಾನದಲ್ಲಿಯೂ ಕೂಡ ರಾಜಕೀಯ ಹೈಕೋರ್ಟಿನ ಜಡ್ಜಿಗಳ ನೇಮಕದ ವಿಚಾರವಾಗಿ ಪ್ರವೇಶವಾಗಿರುವುದು ಒಂದು ಭೀತಿಯಾಗಿದೆ. ಸಭಾನಾಯಕರನ್ನು ಕೇಳಿದರೆ ಈ ವಿಷಯವು ರಹಸ್ಯವಾಗಿದೆಯೆಂದು ಹೇಳುತ್ತಾರೆ. ಈಗ ಹೊರಗಿನ ಮೈಸೂರಿನಲ್ಲಿ ಎಷ್ಟೋ ಕೋರ್ಟುಗಳಿವೆ. ಅಲ್ಲಿನ ಪರಿಸ್ಥಿತಿ ನನಗೆ ಚೆನ್ನಾಗಿ ಗೊತ್ತಿಲ್ಲದೆಹೋದರೂ ಮೈಸೂರಿನಲ್ಲಿ ನ್ಯಾಯ ಶೀಘ್ರವಾಗಿ ದೊರೆಯುತ್ತಿಲ್ಲ. ನ್ಯಾಯ ಶೀಘ್ರವಾಗಿ ದೊರೆಯಲು ನಮ್ಮ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಮಲ್ಲಪ್ಪ ಕಮಿಟಿಯವರು ಕೊಟ್ಟಿರುವ ವರದಿಯನ್ನು ವಿಶಾಲ ಮೈಸೂರಿಗೆ ಅಪ್ಲೈ ಮಾಡದೇ ಹೋದರೂ ಹಳೆಯ ಮೈಸೂರಿಗಾದರೂ ಅದನ್ನು ಅಪ್ಲೈ ಮಾಡಿ ಎಲ್ಲರಿಗೂ ಅದರಿಂದ ಎಷ್ಟರ ಮಟ್ಟಿನ ಪರಿಹಾರ ಆಗಬಹುದೋ ಅಷ್ಟನ್ನೂ ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡುತ್ತಾರೆಂದು ನಾನು ಹೇಳುತ್ತೇನೆ. ಈಗ ನ್ಯಾಯಾಂಗಕ್ಕೋಸ್ಕರ ಖರ್ಚು ಮಾಡುವ ಭಾರಿ ಹಣ ನಿಜವಾಗಿಯೂ ಸದುಪಯೋಗವಾಗಬೇಕು. ಅದರಿಂದ ಜನಗಳಿಗೆ ರಿಲೀಫ್ ಸಿಕ್ಕಬೇಕು. ಆಗ ನಾವು ಹಣವನ್ನು ಖರ್ಚು ಮಾಡಿದ್ದಕ್ಕೂ ಒಳ್ಳೆಯ ಹೆಸರು ಬರುತ್ತದೆ ಇನ್ನು ಹೆಚ್ಚಾಗಿ ನ್ಯಾಯಾಸ್ಥಾನದ ವಿಚಾರವಾಗಿ ಹೇಳುವುದಿಲ್ಲ. ಪೋಲೀಸ್ ಆಡಳಿತದ ವಿಚಾರವಾಗಿ ಮಾತನಾಡಬೇಕೆಂದು ನನ್ನ ಮನಸ್ಸು ಬಹಳವಾಗಿ ಎಳೆಯುತ್ತಿದೆ. ಈಗ ತಾನೆ ನನಗೆ ಒಂದು ಅರ್ಜಿ ಬಂದಿದೆ. ಅದನ್ನು ಗೃಹ ಸಚಿವರಿಗೆ ಕೊಡುತ್ತೇನೆ. I am not going to read it, I will simply h.nd it over to the Minister.

Mr. SPEAKER.—If the Hon'ble Member wants to hand it, over he can do it elsewhere. Not here. Hon'ble Menber m.y hand it over to me. I will send it to the Hon'ble. Minister concerned.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಹಿಂದೆ ಬಡ್ಜೆಟ್ ಮೇಲೆ ಭಾಷಣ ಮಾಡುತ್ತಾ ಪೋಲೀಸರ ವಿಚಾರವಾಗಿ ಕೆಲವು ಅಂಶಗಳನ್ನು ವ್ಯಕ್ತಪಡಿಸಿದ್ದೇನೆ. ಈಗ ಪೋಲೀಸ್ ವ್ಯಾನಿನ ಮೇಲೆ ಏನು ಬರೆದಿದ್ದಾರೆ ಎಂದರೆ "Police to guard the people" ಎಂದು ಇದೆ. ಅದು ಈಗ ಹೋಗಿ "People to guard the police" ಎಂದು ಆಗಿದೆ. "Police to guard the people" ಎಂದು ಪೋಲೀಸ್ ವ್ಯಾನಿನ ಮೇಲೆ ಬರೆದಿರುವುದನ್ನು ಜಾಗ್ರತೆಯಾಗಿ ಅಳಿಸುವುದು ಉತ್ತಮವೆಂದು ಮಾನ್ಯ ಗೃಹಸಚಿವರಲ್ಲಿ ಅತಿವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ರಕ್ಷಣ್ ಖಾತೆ ಅಷ್ಟು ಮಟ್ಟಿನ ಆಡಳಿತವನ್ನು ನಡೆಸುತ್ತಿದೆ. ಪೋಲೀಸ್ ಖಾತೆಯು ರಕ್ಷಣೆ ಕಾರ್ಯಕ್ರಮಕ್ಕೆ ಬದಲಾಗಿ ಭಕ್ಷಣ ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ. ದೇಶದಲ್ಲಿ ಯಾರೇ ರಾಜ್ಯಭಾರಮಾಡಲಿ, ಕಮ್ಯೂನಿಸ್ಟ್ ಸರ್ಕಾರವೇ ಬರಲಿ ಪ್ರಜಾಸೋಷಿಯಲಿಸ್ಟ್ ಪಕ್ಷವೇ ರಾಜ್ಯ ಭಾರಮಾಡಲಿ, ಕಾಂಗ್ರೆಸ್ ಪಕ್ಷವೇ ರಾಜ್ಯಭಾರಮಾಡಲಿ, ಪೋಲೀಸಿನವರ ಜವಾಬ್ದಾರಿ ದೊಡ್ಡದು, ಮತ್ತು ಬಹಳ ಗುರುತರವಾದುದು. ಲಾ ಮತ್ತು ಆರ್ಡರನ್ನು ಇವರು ಮೇಂಟೇನ್ ಮಾಡದೆ ಹೋದರೆ ದೇಶದಲ್ಲಿ ದಂಗೆ, ದರೋಡೆಗಳು ಆಗುತ್ತವೆ. ಅದಕ್ಕೋಸ್ಕರವಾಗಿ ಪೋಲೀಸ್ ಖಾತೆಯನ್ನು ಈಗ ಹೊಸದಾಗಿ ಓವರಾಲ್ ಮಾಡಬೇಕು. ಪೋಲೀಸ್ ಕಾನ್ಸ್ಟಬಲ್‌ನಿಂದ ಹಿಡಿದು ಇನ್‌ಸ್ಪೆಕ್ಟರ್ ಜನರಲ್ ಆಫ್ ಪೋಲೀಸ್‌ವರೆಗೂ ರೀ-ಓರಿಯಂಟೇಷನ್ ಮಾಡಬೇಕು. ಆಗ ದೇಶಕ್ಕೆ ಬಂದಿರುವ ಹಿಂದೂಸ್ಥಾನದ ಸ್ವಾತಂತ್ರ್ಯ ಉಳಿಯುತ್ತದೆ. ಇಲ್ಲದೇ ಹೋದರೆ ದೇಶದಲ್ಲಿ ಅತೃಪ್ತಿ ಅಸಮಾಧಾನ ಹೆಚ್ಚುತ್ತವೆ. ಕಳ್ಳಕಾಕರು ಹೆಚ್ಚಾಗುವುದಕ್ಕೆ ಪೋಲೀಸಿನವರೇ ಕಾರಣರಾಗುತ್ತಾರೆ. ಈ ವಿಷಯಗಳನ್ನೆಲ್ಲಾ ಗೃಹಸಚಿವರು ದೀರ್ಘವಾಗಿ ಯೋಚಿಸಬೇಕು. ಈಗ ಪೋಲೀಸ್ ಇಲಾಖೆಯಲ್ಲಿ ರಾಜಕೀಯ ಪ್ರಭಾವ ಜಾಸ್ತಿಯಾಗಿದೆ. ತಮಗೆ ಬೇಕಾದ D.S.P. ಇದ್ದಾರೆ, ಅವರ ಮರೆ ಹೊಕ್ಕರೆ ಕೆಲಸವಾಗುತ್ತದೆ ಎಂದು ಹೇಳುವ ಸ್ಥಿತಿ ಬಂದು ಈ ಇಲಾಖೆ ಡೀಮಾರಲೈಸ್ ಆಗಿದೆ. ಪೋಲೀಸ್ ಖಾತೆಯು ಈಗ ನಿರ್ವೀರ್ಯವಾಗಿದೆ. ದಕ್ಷತೆಯನ್ನು ಕಳೆದುಕೊಂಡಿದೆ. ದೇಶದ ಕೀರ್ತಿಯನ್ನು ಎತ್ತಿ ಹಿಡಿಯುವ ಕಾರ್ಯದಲ್ಲಿ ಬಹಳ ದೂರ ಹಿಂದಕ್ಕೆ ಸರಿದಿದೆ. ಇದನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಇವರ ಕೈಯಲ್ಲಿ ಎಷ್ಟೋ ಕಾನೂನುಗಳನ್ನು ಕೊಟ್ಟಿದ್ದಾರೆ, ಪ್ರಿವೆನ್ಷನ್ ಆಫ್ ಅನಿಮಲ್ ಸ್ಯಾಕ್ರಿಫೈಸಿನ ಕಾನೂನನ್ನು ಜಾರಿ ಮಾಡಲು ಕೊಟ್ಟಿದ್ದಾರೆ. ಏನು ಪ್ರಯೋಜನವಾಗುತ್ತಿದೆ ? ಒಂದು ಉದಾಹರಣೆ ಹೇಳಬೇಕಾದರೆ ಮೊನ್ನೆ ಅಸೆಂಬ್ಲಿ ಅಡ್‌ಜರ್ನ್ ಆದಮೇಲೆ ಎರಡು ಗ್ರಾಮಗಳಲ್ಲಿ 300 ಕುರಿಗಳನ್ನು ಮತ್ತು ಮೂರು ಕೋಣಗಳನ್ನು ಕಡಿದರು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್, ಅಮಲ್ದಾರ್, ಮತ್ತು ಡೆಪ್ಯುಟಿ ಕಮಿಷನರಿಗೆ ತಿಳಿಸಿದೆವು. ಆದರೆ ಪೋಲೀಸಿನವರಿಗೆ ಇರುವ ಪವರ್ಸ್ ಲಿಮಿಟೆಡ್ ಆಗಿರುವುದರಿಂದ ಅವರೇನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು ಇನ್ನೊಂದು ಸಾರಿ ಸಿರಾದಲ್ಲಿ ಪೋಲೀಸಿನವರ ಮುಂದೆಯೇ ಒಂದು ಕೃತ್ಯ ನಡೆಯಿತು. ಕಡಿಯಲು ತಂದಿದ್ದ ಮೂರು ಕೋಣಗಳನ್ನು ಜನ ಪೋಲೀಸರ ವಶಕ್ಕೆ ಕೊಟ್ಟರು. ಅದಕ್ಕೆ ಏನಾದನೂ ಮಹಜರ್ ಮಾಡಿದ್ದಾರೆಯೋ ಎಂದರೆ ಏನೂ ಇಲ್ಲ. ಆಗ ಏನು ನಡೆಯಿತೋ ಗೊತ್ತಾಗಲಿಲ್ಲ. ಕೋಣಗಳನ್ನೇನೋ ಕಡಿದೇ ಹಾಕಿದರು. ಇಂತಹ ಕಾನೂನಿಗೆ ವಿರುದ್ಧವಾದ ಕಾರ್ಯಗಳು ನಡೆಯುತ್ತಿದ್ದರೂ ಅವುಗಳನ್ನು ನೋಡಿಕೊಂಡೇ ತಮ್ಮ ಕರ್ತವ್ಯ ನಿರ್ವಹಣ್ ಮಾಡದ ಪೋಲೀಸಿನವರು ಹಿಂದಕ್ಕೆ ಸರಿದರೆ, ಇಂತಹ ಕಾನೂನುಗಳನ್ನು ಮಾಡುವುದೇಕೆ? ಇಂತಹ ಕಾನೂನುಗಳನ್ನು ಮಾಡಿ ಅಧಿಕಾರಿಗಳ ಕೈಗೆ ಕೊಡುವುದೇಕೆ? ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಪೋಲೀಸ್ ಇಲಾಖೆಯಲ್ಲಿರುವ ಕಾನ್‌ಸ್ಟೇಬಲುಗಳ ವಿಚಾರದಲ್ಲಿ ಎಲ್ಲರೂ ಹೇಳಿದ್ದಾರೆ. ತಾವು ಕೊಡತಕ್ಕ ಸಂಬಳ ಅವರಿಗೆ ಸಾಲದು.

ಇನ್ನು ಈ ಪ್ರೊಹಿಬಿಷನು ಶಾಖೆ ನಿಜವಾಗಿಯೂ ದಕ್ಷತೆಯಿಂದ ಕೆಲಸ ಮಾಡಿದರೆ ದೇಶಕ್ಕೆ ಕೀರ್ತಿ ಬರುತ್ತದೆ. ಆದರೆ ಅವೊತ್ತಿನ ದಿವಸ ಈ ಪ್ರೊಹಿಬಿಷನ್ ಇಲಾಖೆಯ ವಿಷಯವಾಗಿ ಹೇಳಬೇಕಾದರೆ ನಮ್ಮ ಡಿ.ಎಸ್.ಪಿ. ಯಿಂದ ಕೆಳಗಿರತಕ್ಕ ಅಧಿಕಾರಿಗಳವರೆಗೆ, they have become fattened due to this prohibition. ಕಳ್ಳಭಟ್ಟಿ ಸಾರಾಯಿಯನ್ನು ಪ್ರೋತ್ಸಾಹಿಸುವುದರಲ್ಲಿ ನಿಸ್ಸೀಮರಾಗಿದ್ದಾರೆ. ಇದನ್ನು ಮಾನ್ಯ ಗೃಹ ಮಂತ್ರಿಗಳು eradicate ಮಾಡಬೇಕೆಂದು ಕೋರುತ್ತೇನೆ.

ಈ ಪೋಲೀಸು ಶಾಖೆಯನ್ನು re-orient ಮಾಡಬೇಕೆಂದು ಗೃಹ ಮಂತ್ರಿಗಳನ್ನು ಕೋರುತ್ತಿದ್ದೇನೆ. ಏಕೆಂದರೆ ನಿಜವಾಗಿಯೂ ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾತನಾಡಿದ ಮಹನೀಯರು ದೊಡ್ಡ ದೊಡ್ಡ ವಿಚಾರಗಳ ಮೇಲೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಇದರಿಂದ ಒಂದು ಅಂಶ ಸ್ಪಷ್ಟವಾಗಿದೆ. ಈಗಿರತಕ್ಕ ನ್ಯಾಯಾಧೀಶರ ಸಂಖ್ಯೆ ಸಾಲದು ಮತ್ತು ವ್ಯವಹಾರಕ್ಕೆ ತಕ್ಕಂತೆ ನ್ಯಾಯಾಧೀಶರನ್ನು ಹೆಚ್ಚುಮಾಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದಾರೆ. ಇದನ್ನು ನಾನು ಕೂಡ ಸಮರ್ಥಿಸುತ್ತೇನೆ. ಸಾರ್ವಜನಿಕ ಜೀವನದಲ್ಲಿ ಏನಾಗಿದೆ ಎಂದರೆ ನ್ಯಾಯಾಲಯಗಳಲ್ಲಿ ಸರಿಯಾಗಿ ನ್ಯಾಯ

(ಶ್ರೀ ಬಿ. ಎಲ್. ನಾರಾಯಣಸ್ವಾಮಿ.)

ದೊರೆಯುತ್ತಿಲ್ಲವೆಂಬ ದೂರುಗಳು ಹೆಚ್ಚಾಗುತ್ತಿವೆ. ಹಿಂದೆ ನಮ್ಮ ದೇಶದಲ್ಲಿ ಪಂಚಾಯಿತಿಗಳೇ ನ್ಯಾಯಾಸ್ಥಾನಗಳಾಗಿದ್ದವು ಆದರೆ ಈಗಿರತಕ್ಕ ನ್ಯಾಯಾಸ್ಥಾನಗಳು ಎಷ್ಟರ ಮಟ್ಟಿಗೆ ನ್ಯಾಯ ವಿಮರ್ಶೆ ಮಾಡುತ್ತಿವೆ ಎಂದು ನೋಡಿದರೆ, ಅದರಿಂದ ಬಡ ಜನಗಳಿಗೆ ಸರಿಯಾದ ನ್ಯಾಯವು ದೊರಕುತ್ತಿಲ್ಲವೆಂಬುದು ಕಂಡು ಬರುತ್ತದೆ. ಅದಕ್ಕಾಗಿ ನ್ಯಾಯಾಸ್ಥಾನಗಳು ದಕ್ಷತೆಯಿಂದ ಕೆಲಸ ಮಾಡುವಂತಿರಬೇಕು. ಇಲ್ಲದಿದ್ದರೆ ಬಡ ಜನಗಳಿಗೆ ಬಹಳ ಕಷ್ಟಗಳುಂಟಾಗುತ್ತವೆ. ಯಾವಾಗಲೂ ನ್ಯಾಯಾಸ್ಥಾನದಿಂದ ಹೊರಬರುವ ತೀರ್ಪುಗಳು ಸತ್ಯದಿಂದಲೂ ಧರ್ಮದಿಂದಲೂ ಕೂಡಿರುವಂತಿರಬೇಕು. ಇವೊತ್ತಿನ ದಿವಸ ನ್ಯಾಯಾಲಯಗಳಲ್ಲಿ ಹೋಗಿ ನೋಡಿದರೆ, ಅಲ್ಲಿಂದ ಹೊರ ಬರುವ ತೀರ್ಪುಗಳು ಒಂದು ತರಹ ಪಾಲಿಟಿಕ್ಸಿಗೆ ಸೇರಿದಂತಹ ಭಾವನೆಗಳು ಬರುತ್ತಿವೆ. ವ್ಯವಹಾರಗಳು ಸರಿಯಾಗಿ ಇತ್ಯರ್ಥವಾಗಬೇಕೆಂದು ಬಡಜನರು ಕೋರ್ಟಿಗೆ ಬರುತ್ತಾರೆ. ಆದರೆ ಅವರಿಗೆ ಸರಿಯಾದ ನ್ಯಾಯ ದೊರಕದೆ ಬಹಳ ಕಷ್ಟಗಳಿಗೆ ಈಡಾಗುತ್ತಿದ್ದಾರೆ. ಅಲ್ಲದೆ ಕೆಲವು ಕಡೆ ಕೋರ್ಟುಗಳಿಗೆ ಹೆಚ್ಚಿನ ಕೇಸುಗಳು ಬರುತ್ತಿವೆ ಮತ್ತು ಕೆಲವು ಕಡೆ ಕಡಮೆಯಾಗುತ್ತಿವೆ. ಇದಕ್ಕೆ ಕಾರಣ ಕೆಲಸಕ್ಕೆ ತಕ್ಕಂತೆ ನ್ಯಾಯಾಧೀಶರುಗಳಿರುವುದಿಲ್ಲ. ಅದರಿಂದಾಗಿ ಕೋರ್ಟಿನ ಕೆಲಸ ಕಾರ್ಯಗಳಿಗೆ ಧಕ್ಕೆ ಬರುತ್ತದೆ. ಆದಕಾರಣ ಈ ನ್ಯೂನತೆಗಳನ್ನೆಲ್ಲ ಪರಿಹರಿಸಬೇಕಾದುದು ಸರಕಾರದ ಮುಖ್ಯ ಕರ್ತವ್ಯ ಮತ್ತು ಈಗಿರತಕ್ಕ ಪದ್ಧತಿಯನ್ನು ಬದಲಾಯಿಸಿದರೆ ಒಳ್ಳೆಯದೆಂದು ತೋರುತ್ತದೆ.

ಸ್ವಾತಂತ್ರ್ಯ ಬಂದನಂತರ ನಾವು ಏನೋ ಸುಧಾರಣೆಗಳನ್ನು ಮಾಡಿ ಇರತಕ್ಕ ನ್ಯಾಯಾಸ್ಥಾನಗಳನ್ನು ಜಾಸ್ತಿ ಮಾಡುತ್ತೇವೆ ಮತ್ತು ಅದಕ್ಕೆ ತಕ್ಕ ಹಾಗೆ ಈ ನ್ಯಾಯಾಧೀಶರ ಸಂಬಳಗಳನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತಿದ್ದುದನ್ನು ಕೇಳಿದ್ದೆ. ಆದರೆ ಕಾರ್ಯರೂಪದಲ್ಲಿ ಇದುವರೆಗೆ ಏನೂ ಆಗಿಲ್ಲ. ಹಿಂದೆ ಪೂಜ್ಯ ಮಹಾತ್ಮಾ ಗಾಂಧೀಜಿಯವರು ಒಂದು ಮಾತನ್ನು ಹೇಳಿದ್ದರು. ಅವರು ಪಂಚಾಯಿತಿ ರಾಜ್ಯಸ್ಥಾಪನೆ ಮಾಡಬೇಕೆಂದು ಆಶಿಸಿದ್ದರು, ಆಮೇಲೆ ರಾಮರಾಜ್ಯವನ್ನು ಸ್ಥಾಪಿಸಬೇಕೆಂದು ಹೇಳುತ್ತಿದ್ದರು. ಆದರೆ ತಾವು ಸಮಾಜವಾದೀ ರಾಜ್ಯಸ್ಥಾಪನೆ ಮಾಡಬೇಕೆಂದು ಒಂದು ಕಡೆ ಹೇಳಿದ್ದೀರಿ. ಆದರೆ ಅದಕ್ಕೆ ತಕ್ಕ ಮಾರ್ಗದರ್ಶನವನ್ನು ತಾವು ಕೊಟ್ಟಿಲ್ಲ. ಈಗಿರತಕ್ಕ ನ್ಯಾಯಾಸ್ಥಾನಗಳು ಎಷ್ಟುಮಟ್ಟಿಗೆ ಕೆಲಸ ಮಾಡಬೇಕೋ ಅಷ್ಟು ಮಟ್ಟಿಗೆ ಮಾಡುತ್ತಿಲ್ಲ. ಮತ್ತು ಜನಗಳಿಗೆ ಸರಿಯಾದ ನ್ಯಾಯ ದೊರಕುತ್ತಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ಸರಕಾರಕ್ಕೆ ಒಂದು ಸಲಹೆಮಾಡುತ್ತೇನೆ. ಪಂಚಾಯಿತಿ ಕೋರ್ಟುಗಳನ್ನು ಸ್ಥಾಪಿಸಿದರೆ ವ್ಯಾಜ್ಯಗಳು ಕೋರ್ಟಿಗೆ ಬರುವುದು ಕಡಮೆಯಾಗುತ್ತದೆ. ಇದಕ್ಕಾಗಿ ಒಂದು ಸಮಿತಿಯನ್ನು ನೇಮಿಸಬೇಕು. ಇದರಿಂದಾಗಿ ವ್ಯವಹಾರಗಳು ತೀರ್ಮಾನವಾಗುವ ಕಾಲಾವಕಾಶಗಳು ಕಡಮೆಯಾಗುತ್ತವೆ. ಸ್ವರಾಜ್ಯವೇನೋ ಬಂದಿತೆಂದು ಸಂತೋಷಪಡಬಹುದು. ಆದರೆ ಅದರಿಂದ ಜನಗಳಿಗೆ ಇನ್ನೂ ಹೆಚ್ಚಿನ ಕಷ್ಟಗಳು ತಪ್ಪಿಲ್ಲ. ಇತರ ದೇಶಗಳಲ್ಲಿ, ಎಂದರೆ ಚೀಣಾ ದೇಶದಲ್ಲಿ ಈ ರೀತಿಯಾದ ಸಾರ್ವಜನಿಕ ನ್ಯಾಯಾಲಯಗಳು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿವೆ. ಹಿಂದೆ ಈ ವಿಷಯವನ್ನು ಶ್ರೀ ಜೆ. ಸಿ. ಕುಮಾರಪ್ಪನವರು, ಪಂಡಿತ ಸುಂದರಲಾಲ್ ಇವರೆಲ್ಲರೂ ಹೇಳಿದ್ದಾರೆ. ಏನೋ ಚೀಣ ದೇಶವೆಂದರೆ communist ದೇಶವೆಂದು ನಾವು ಅವರು ಅನುಸರಿಸುತ್ತಿರುವ ಕ್ರಮ ಒಳ್ಳೆಯದಾದರೂ ಅದನ್ನು ಅನುಸರಿಸಕೂಡದು ಎಂಬ ಭಾವನೆ ಇರಬಾರದು. ಯಾವುದು ದೇಶಕ್ಕೆ ಒಳ್ಳೆಯದಾಗುತ್ತದೆಯೋ ಆ ಪದ್ಧತಿ ಯಾವ ದೇಶದ್ದಾದರೂ ಸರಿಯೇ, ಅದನ್ನು ಅನುಸರಿಸಲು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಆದಕಾರಣ ಇವೆಲ್ಲವನ್ನೂ ಯೋಚಿಸಿ ಸರಕಾರ ಈ ಕೆಲಸಗಳನ್ನು ಕಾರ್ಯಗತ ಮಾಡುವುದಕ್ಕೆ ತಜ್ಞರಾದ ನಿಪುಣರು ಮತ್ತು ಮುಖಂಡರಿಂದ ಕೂಡಿದ ಒಂದು ಸಮಿತಿಯನ್ನು ಈ ಸಾರ್ವಜನಿಕ ನ್ಯಾಯಾಲಯಗಳನ್ನು ಏರ್ಪಡಿಸಲು ನೇಮಿಸಬೇಕೆಂದು ಸರಕಾರವನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಬಂದೀಖಾನೆಗಳ ಸುಧಾರಣೆಗಳ ವಿಚಾರವಾಗಿ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಕೇಳಿದರೆ ಈ ಸುಧಾರಣೆಗಳನ್ನು ಕೂಡ ತೃಪ್ತಿಕರವಾಗಿ ಮಾಡಿಲ್ಲವೆಂದು ತೋರುತ್ತದೆ. ಏಕೆಂದರೆ ಕೆಲವು ಮಾನ್ಯ ಸದಸ್ಯರುಗಳು ಮತ್ತು ನಾನೂ ಕೂಡ ಈ ಜೈಲಿನಲ್ಲಿದ್ದುದರಿಂದ ಅಲ್ಲಿ ಬಂದಿಗಳಿಗಿರುವ ಕಷ್ಟಸುಖಗಳೇನೆಂಬುದು ಚೆನ್ನಾಗಿ ತಿಳಿದಿದೆ. ಒಂದು ದೃಷ್ಟಿಯಿಂದ ನೋಡಿದರೆ 1947ನೆ ಇಸವಿಯಿಂದ ಇಲ್ಲಿಯವರೆಗೆ ಬಹುಮಟ್ಟಿಗೆ ಸುಧಾರಣೆಗಳೇನೋ ಆಗಿವೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ಈ ಸುಧಾರಣೆಗಳು ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿ ಆಗಬೇಕೋ ಅಷ್ಟರಮಟ್ಟಿಗೆ ಆಗಿಲ್ಲ. ಹೀಗಾಗುವುದಕ್ಕೆ ಕಾರಣವೇನೆಂಬುದನ್ನು ಸರಕಾರದವರು ಕೂಲಂಕಷವಾಗಿ ಯೋಚಿಸಿಲ್ಲ. ಇವೊತ್ತಿನ ದಿವಸ ಬಂದೀಖಾನೆಗೆ ಬರುವ ಒಬ್ಬ ತಪ್ಪುಮಾಡಿರತಕ್ಕ ಕ್ರಿಮಿನಲ್ ಬಂದಿಯ ಜೀವನ ನಿಜವಾಗಿಯೂ ಆಕರ್ಷಣಯುತವಾಗಿಯೇನೋ ಇದೆ. ಅವನಿಗೆ ಜೈಲಿನಲ್ಲಿ ಬೆಳಿಗ್ಗೆ ಎದ್ದ ತಕ್ಷಣ ಉಪಾಹಾರ, ಎರಡು ಹೊತ್ತು ಊಟ, ತಿಂಡಿ, ಬೀಡಿ ವಗೈರೆ ಎಲ್ಲವೂ ಸರಕಾರದ ಖರ್ಚಿನಲ್ಲಿಯೇ ನಡೆಯುತ್ತದೆ. ಇದರಿಂದ ಆ ಖೈದಿಗಳಿಗೆ ಜೈಲಿನಿಂದ ಹೊರಗಡೆ ಹೋಗಲು ಮನಸ್ಸೇ ಬರುವುದಿಲ್ಲ; ಅಲ್ಲದೆ ಈ ಖೈದಿಗಳನ್ನು ಪುನಃ ಜೈಲಿಗೆ ಬರದಂತೆ ಮಾಡಲು ಅವರಿಗೆ ಸರಿಯಾದ ಶಿಕ್ಷಣ ಕೊಟ್ಟು ಸತ್ಪ್ರಜೆಗಳಾಗುವ ಮನೋಭಾವವನ್ನು ಬರುವಂತೆ ಕಲ್ಪಿಸಬೇಕು. ಮತ್ತು ಈಗಿರುವ ನ್ಯೂನತೆಗಳೆಲ್ಲವನ್ನೂ ಸರಕಾರದವರು ಸೂಕ್ಷ್ಮವಾಗಿ ಕಂಡುಹಿಡಿದು ಈ ಖೈದಿಗಳಿಗೆ ಖರ್ಚುಮಾಡುವ ಹಣಕ್ಕೆ ಸರಿಯಾದ ಫಲ ದೊರಕುವಂತೆ ಮಾಡಬೇಕು. ಈ ವಿಚಾರದಲ್ಲಿ ಸರಕಾರ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಸಲಹೆಮಾಡುತ್ತಿದ್ದೇನೆ.

ಮೂರನೆಯದಾಗಿ, ಈ ಪೋಲೀಸು ಆಡಳಿತದ ವಿಚಾರ. ದೇಶದಲ್ಲಿ ಪೋಲೀಸರು ಇರಬೇಕು. ಆದರೆ ನಮ್ಮ ರಾಷ್ಟ್ರದಲ್ಲಿ ಪೋಲೀಸರು ಸಾರ್ವಜನಿಕರ ಸ್ನೇಹಿತರಾಗಿ, ಬಾಂಧವರಾಗಿ ಕೆಲಸ ಮಾಡುವವರಾಗಿರಬೇಕು. ಹೀಗೆ ಮಾಡಿದರೆ ನಿಜವಾಗಿಯೂ ಪ್ರಜಾಪ್ರಭುತ್ವ ಖ್ಯಾತಿಯನ್ನು ಪಡೆಯುತ್ತದೆ. ಆದರೆ ಇಂದು ಈ ಪೋಲೀಸು ಆಡಳಿತವನ್ನು ನೋಡಿದರೆ ಅದರಂತೆ ನಡೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಈಗಾಗಲೇ ಎಷ್ಟೋ ಸ್ನೇಹಿತರು ಈ ವಿಚಾರದಲ್ಲಿ ಬೇಕಾದಷ್ಟು ಹೇಳಿದ್ದಾರೆ. ಆದಕಾರಣ ಮತ್ತೆ ನಾನು ಅದೇ ವಿಷಯಗಳನ್ನು ಹೇಳಲು ಇಷ್ಟಪಡುವುದಿಲ್ಲ.

ನಮ್ಮ ಮಾನ್ಯ ಡಾ॥ ನಾಗನಗೌಡರು, ಇಂಗ್ಲೆಂಡಿನಲ್ಲಿ ಪೋಲೀಸಿನವರು ಬಹಳ ಯಶಸ್ವಿಯಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದರು. ಇದರ ವಿಷಯವಾಗಿ

ಸರಕಾರ ಡಾಕ್ಯುಮೆಂಟರಿ ಫಿಲ್ಮುಗಳನ್ನು ತರಿಸಿ ಈ ಶಾಖೆಯಲ್ಲಿ ಪ್ರಚಾರ ಮಾಡುವುದು ಉತ್ತಮ. ಅಲ್ಲಿಯ ಪೋಲೀಸಿನವರ ಆಡಳಿತಕ್ಕೂ ಇಲ್ಲಿಯ ಪೋಲೀಸಿನವರ ಆಡಳಿತಕ್ಕೂ ಇರತಕ್ಕ ವ್ಯತ್ಯಾಸಗಳನ್ನು ನೋಡಿದರೆ ಅಜಗಜಾಂತರ ವ್ಯತ್ಯಾಸಗಳಿರುವುದು ಬಹಳ ಚೆನ್ನಾಗಿ ಗೊತ್ತಾಗುತ್ತದೆ.

ಈ ದೃಷ್ಟಿಯಿಂದ, ನಮ್ಮ ಸರ್ಕಾರದವರು ಡಾಕ್ಯುಮೆಂಟರಿ ಫಿಲ್ಮನ್ನು ತೋರಿಸುತ್ತಿರುವುದರಲ್ಲಿ ಯಾವ ಮಟ್ಟದಲ್ಲಿನ ಪೋಲೀಸಿನವರನ್ನು ಕಾಣುತ್ತೇವೆಯೋ ಆ ಪೋಲೀಸಿನವರ ಮಟ್ಟಕ್ಕೆ ನಮ್ಮ ಪೋಲೀಸಿನವರನ್ನೂ ತರಲು ಪ್ರಯತ್ನಿಸಬೇಕೆಂದು ಹೇಳುತ್ತೇನೆ. ಇಲ್ಲದೆ ಇದ್ದರೆ ಸರ್ಕಾರದವರಿಗೆ ಒಳ್ಳೆಯ ಹೆಸರು ಬರುವುದಿಲ್ಲ. ಸಾಮಾನ್ಯವಾಗಿ ಕೆಳಗಿನ ನೌಕರರು ತಪ್ಪುಮಾಡುವುದು ಸ್ವಾಭಾವಿಕ. ಆದರೆ ಅನೇಕವೇಳೆ ಮೇಲಿನ ಅಧಿಕಾರಿಗಳ ಬಲೋದ್ಬಂಧನದದೆಶೆಯಿಂದ, ಅವರ ಒತ್ತಾಯಕ್ಕಾಗಿ ಕೆಳಗಿನ ನೌಕರರು ಅನ್ಯಾಯವೆಸಗುವ ಸಂದರ್ಭಗಳೂ ಅನೇಕವಿವೆ. ಈ ವಿಚಾರದಲ್ಲಿ ಒಂದೇ ಒಂದು ನಿದರ್ಶನವನ್ನು ಸರ್ಕಾರದವರ ಗಮನಕ್ಕೆ ತರುತ್ತೇನೆ.

ಕಳೆದ ಮೇತಿಂಗಳಿನಲ್ಲಿ ಚುನಾವಣೆಗಳು ಆಗತಾನೆ ನಡೆದಿವೆ; ಕಾಂಗ್ರೆಸ್ ಅಭ್ಯರ್ಥಿಯೊಬ್ಬರಿಗೆ ಸೋಲಾಗಿದೆ; ವಾತಾವರಣ ಬಿಸಿಯಾಗಿದೆ. ಇಂಥ ಸಂದರ್ಭದಲ್ಲಿ ಯಾವನೋ ಒಬ್ಬ ವ್ಯಕ್ತಿ ತನ್ನಸ್ವಂತ ಕಾರಣಗಳಿಗಾಗಿ ದೇಶಾಟನೆಮಾಡಲು ಹೋಗಿದ್ದರೆ ಆತನು ಸತ್ತುಹೋದ, ಖೂನಿಯಾಯಿತು ಎಂದು, ಬದುಕಿದ್ದ ಮನುಷ್ಯನನ್ನೇ ಸತ್ತನೆಂದು ಹುಯಿಲೆಬ್ಬಿಸಿ, murder caseನ್ನು book ಮಾಡಿಸಿ ಅವನಿಗೆ ಆಗದ ಜನರನ್ನೆಲ್ಲಾ ಹಿಡಿದುಕೊಂಡು ಹೊಡೆದುಬಡಿದು, ನಿರಪರಾಧಿಗಳನ್ನು ಹಿಂಸೆಗೊಳಪಡಿಸಿದರು. ಕಡೆಗೇನಾಯಿತು ? ಸತ್ತನೆಂದ ಮನುಷ್ಯ ಬದುಕಿದ್ದ; ಅವನು ಹಿಂತಿರುಗಿದ. ಹೀಗೆ ಬದುಕಿದ್ದ ಮನುಷ್ಯನನ್ನೇ ಸತ್ತುಹೋಗಿದ್ದಾನೆಂದು murder case ಹೂಡಿ ತಮಗೆ ಆಗದಜನರಿಗೆ ಹಿಂಸೆ ಕೊಡಲು ಪ್ರಯತ್ನಿಸುವುದೇ? ಚಿತ್ತೂರಿನ ಜನರುಕೂಡ ಬಂದು ಆತನು ಬದುಕಿದ್ದಾನೆಂದು ಹೇಳಿದರೂ ಪೋಲೀಸಿನವರು ಕೇಳರು. ನಿಜಸ್ಥಿತಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಪಡದೆ ಸಾರ್ವಜನಿಕರಿಗೆ ಬೇಕೆಂದು ತೊಂದರೆ ಕೊಡುವ ಸಂದರ್ಭಗಳು ಇವು. ಇಂಥವಕ್ಕೆ ಮತ್ತೆ ಅವಕಾಶವಿಲ್ಲದಿರಲಿ, ಈಗ ಸಾರ್ವಜನಿಕರಿಗೆ ಮಾಡಿದ ಅಪಚಾರಕ್ಕೆ ಸರ್ಕಾರ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿ ಒಂದು ಹೇಳಿಕೆ ಕೊಡುವುದು ಧರ್ಮವೆಂದು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಸಾಮಾನ್ಯವಾಗಿ ಈಗತಾನೆ ನನ್ನ ಮಿತ್ರರು ಅನೇಕ ವಿಷಯಗಳನ್ನು ಕುರಿತು ಮಾತನಾಡಿದ್ದಾರೆ. ಮಾತನಾಡಿದ ವಿಷಯಗಳನ್ನೇ ನಾನು ಮತ್ತೆ ಹೇಳುವುದಿಲ್ಲ. ಆದರೆ ಒಂದು ವಿಷಯ ನಾನು ಬಿನ್ನವಿಸಿಕೊಳ್ಳುತ್ತೇನೆ. ಈ ವಿಷಯಗಳಮೇಲೆ ಮಾತನಾಡುವಾಗ ಸಂಬಂಧಪಟ್ಟ ಮಂತ್ರಿಗಳು ತಮ್ಮಸ್ಥಾನದಲ್ಲಿದ್ದು ಕೊಡತಕ್ಕ ಸಲಹೆಗಳನ್ನು ಗುರುತು ಹಚ್ಚಿಕೊಳ್ಳುವುದು ಎಂದಿನ ಪದ್ಧತಿ. ಆದ್ದರಿಂದ ಬೇರೆ ವಿಷಯಗಳನ್ನು ಕುರಿತು ಮಂತ್ರಿಗಳು ಸಭೆಯಲ್ಲಿ ಮಾತನಾಡುತ್ತಾ ಇರುವುದನ್ನು ತಪ್ಪಿಸಿ ಸದಸ್ಯರು ಹೇಳುವ ವಿಷಯಗಳಿಗೆ ಗಮನಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಕೋರ್ಟಿನ ವಿಷಯದಲ್ಲಿ, ನಾನು ಹೈಕೋರ್ಟಿನ ವಿಷಯವಾಗಿ ಹೆಚ್ಚಿಗೆಯೇನೂ ಹೇಳುವುದಿಲ್ಲ. ಒಟ್ಟಿನಲ್ಲಿ ಈ ನ್ಯಾಯಾಲಯಗಳಿಂದ ಹಳ್ಳಿಗಾಡಿನವರಿಗೆ, ಬಡ ಕಕ್ಷಿಗಾರರುಗಳಿಗೆ ಜಾಗ್ರತೆ ನ್ಯಾಯ ದೊರಕುವ ಹಾಗೆ ಸಂಬಂಧಪಟ್ಟ ಮಂತ್ರಿಗಳು ಹೊಸ ನಿಯಮಗಳನ್ನುಮಾಡಿ ಹೈಕೋರ್ಟಿಗೆ ಸೂಚನೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ತಾನೆ, ಅನೇಕ ಕೇಸುಗಳು ಹೈಕೋರ್ಟಿನಲ್ಲಿವೆಯೆಂದು ಮಾನ್ಯಮಂತ್ರಿಗಳು ಹೇಳಿದರು. ಅದಕ್ಕಿಂತ ಹೆಚ್ಚಿಗೆ ಡಿಸ್ಟ್ರಿಕ್ಟಿನ ಸಿವಿಲ್ ಮತ್ತು ಕ್ರಿಮಿನಲ್‌ಕೋರ್ಟುಗಳಲ್ಲಿ ಬಾಕಿ ಇವೆ. ದಿನದಿವಸಕ್ಕೂ ಕೇಸುಗಳು ಹೆಚ್ಚು ಬೆಳೆಯುತ್ತಿವೆ. ಈ ವಿಷಯವನ್ನು ಗಮನಕ್ಕೆ ತೆಗೆದುಕೊಂಡು ಜಾಗ್ರತೆ ಫೈಸಲು ಮಾಡುವಹಾಗೆ ಸರ್ಕಾರದವರು ಕೂಡಲೆ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಂಬಿದ್ದೇನೆ. ಎರಡನೆಯದಾಗಿ ಹಳ್ಳಿಗಾಡಿನಲ್ಲಿ litigation ಮತ್ತು ಚಿಕ್ಕಪುಟ್ಟ ಕಳ್ಳತನ ಮುಂತಾದ ತಕ್ರಾರುಗಳು ದಿನೇದಿನೇ ಜಾಸ್ತಿಯಾಗುತ್ತಿವೆ. ಇವಕ್ಕೆಲ್ಲಾ ನೇರವಾಗಿ ಮುನಿಸೀಫ್ ಅಥವಾ ಕ್ರಿಮಿನಲ್‌ಕೋರ್ಟಿಗೆ ಹೋಗುವ ಪದ್ಧತಿಯನ್ನು ತಪ್ಪಿಸಿ ಗ್ರಾಮಪಂಚಾಯಿತಿಗಳಲ್ಲೇ ಅಥವಾ ಹೋಬಳಿ ಹೆಡ್‌ಕ್ವಾರ್ಟರುಗಳಲ್ಲೇ ನ್ಯಾಯದೊರೆಯುವ ಹಾಗೆ ವ್ಯವಸ್ಥೆ ಮಾಡುವುದಾದರೆ, ಈಗ ಕೋರ್ಟುಗಳಿಗೆ ಬರುವ ಅರ್ಧ ಕೇಸುಗಳು ಫೈಸಲಾಗುತ್ತವೆ. ಈ ಬದಲಾವಣೆಯನ್ನು ಜಾಗ್ರತೆಮಾಡಿ ಹಳ್ಳಿಗಾಡಿನ ಕೇಸುಗಳು ಬೇಗ ಇತ್ಯರ್ಥವಾಗುವುದಕ್ಕೆ ಏರ್ಪಾಡುಮಾಡುತ್ತಾರೆಂದು ನಂಬಿದ್ದೇನೆ. ಇದರಿಂದಾಗಿ ಬಡ ರೈತರಿಗೆ ಬಡ ಕಕ್ಷಿಗಾರರಿಗೆ ನೇರವಾಗಿ ನ್ಯಾಯ ದೊರಕುವಂತಾಗಿ ಅವರ ಹೃದಯಪರಿವರ್ತನೆಯೂ ಆಗುತ್ತದೆ. ಹಿಂದೆ ಇದೇ ಪದ್ಧತಿಯಿತ್ತು. ಈಗಲಾದರೋ ದೂರ ಹೋಗಬೇಕು; ಮತ್ತು ಲಾಯರುಗಳನ್ನೂ ಸಾಕ್ಷಿಗಳನ್ನೂ ಕಟ್ಟಿಕೊಂಡು ತಿರುಗುತ್ತಾ ಅವನ ಆರ್ಥಿಕಮಟ್ಟ ದಿನೇದಿನೇ ಕುಗ್ಗಿ ಹೋಗುತ್ತದೆ. ನ್ಯಾಯಮಂತ್ರಿಗಳು ಈ ಮಾರ್ಪಾಡನ್ನು ಆದಷ್ಟು ಜಾಗ್ರತೆ ಮಾಡುವುದನ್ನು ಯೋಚನೆಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಪೋಲೀಸ್ ಇಲಾಖೆಯ ವಿಷಯದಲ್ಲಿ ಒಂದೆರಡು ಮಾತು ಹೇಳುತ್ತೇನೆ. ಈಗ ಅನೇಕ ಕಾಂಗ್ರೆಸ್ ಸದಸ್ಯರು ಮಾತನಾಡುತ್ತಿರುವಾಗ, ಅವರೂ ಕೂಡ ಪೋಲೀಸ್ ಇಲಾಖೆಯ ಮೇಲೆ ಅನೇಕ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಈ ಇಲಾಖೆಯಲ್ಲಿ efficiency ಬಹಳ ಕಡಮೆಯಾಗಿದೆಯೆಂದು ಹೇಳಿದ್ದಾರೆ. ನಾನು ಹೇಳುತ್ತೇನೆ, 1947ರ ಹಿಂದೆ ಪೋಲೀಸ್ ಇಲಾಖೆಯಲ್ಲಿದ್ದ ಆಡಳಿತ ದಕ್ಷತೆ ಇಂದು ಬಹಳಮಟ್ಟಿಗೆ ಕುಗ್ಗಿ ಹೋಗಿದೆ. ಬಹಳದಿವಸಗಳಿಂದ ರಾಜಕೀಯವನ್ನು ತಿಳಿದವನಾಗಿ ನಾನಿದನ್ನು ಹೇಳುತ್ತಿದ್ದೇನೆ. ಹಿಂದೆ ಅವರಲ್ಲಿ ದಕ್ಷತೆ ಇಷ್ಟೊಂದು ಉಡುಗಿರಲಿಲ್ಲ. ಈಚೀಚೆಗೆ ಅನೇಕ ಕಾಂಗ್ರೆಸ್ ನಾಯಕರು ಪೋಲೀಸ್ ಆಡಳಿತದ ವಿಷಯದಲ್ಲಿ ಪ್ರವೇಶಮಾಡಿ, ಈ ಇಲಾಖೆಯಲ್ಲಿ ಇಷ್ಟೊಂದು ದಕ್ಷತೆ ಹೀನವಾಗಿರುವುದಕ್ಕೆ ಕಾರಣರಾಗಿದ್ದಾರೆ. ಈಚೆಗೆ ಕಾಂಗ್ರೆಸ್ಸಿನವರು ತಮ್ಮ ಪಾರ್ಟಿಗೆ ಸಹಾಯಮಾಡಲು, ತಮ್ಮ ಕಾಂಗ್ರೆಸ್ ಅನುಯಾಯಿಗಳಿಗೆ ಸಹಾಯಮಾಡಲು ಪೋಲೀಸಿನವರು ನ್ಯಾಯವಾಗಿ ಹೋಗತಕ್ಕ ಮಾರ್ಗಕ್ಕೆ ಅಡ್ಡ ಬರುತ್ತಿದ್ದಾರೆ. ಮಹಾತ್ಮಾಜೀಯವರ ಹೆಸರು ಹೇಳಿಕೊಂಡು, ಇನ್ನೊಬ್ಬರ ಆಸ್ತಿಪಾಸ್ತಿಗಳನ್ನು ಹಕ್ಕುಬಾಧ್ಯತೆಗಳನ್ನು ಕಸಿದುಕೊಳ್ಳುವುದನ್ನು ಅವರು ಬಿಡಬೇಕು. ಈ ಬಗ್ಗೆ ಕಾಂಗ್ರೆಸ್ ಪಾರ್ಟಿಯವರು ಸೂಕ್ತ ತಿಳಿವಳಿಕೆ ಕೊಡಬೇಕು. ಪೋಲೀಸಿನವರ ನಿತ್ಯ ಕೆಲಸಗಳಲ್ಲಿ ಪ್ರತಿದಿನವೂ ಕೈಹಾಕುತ್ತಾ ಅವರು ಯಶಸ್ವಿಯಾಗಿ ಕೆಲಸಕಾರ್ಯಗಳನ್ನು ನಡೆಸದಂತೆ ಮಾಡಿದ್ದಾರೆ. ಉದಾಹರಣೆಗೆ, ನಮ್ಮ ಡಿಸ್ಟ್ರಿಕ್ಟಿನಲ್ಲಿ ಕೆಲವು ಜನರು ಕಾಂಗ್ರೆಸ್ ನಾಯಕರುಗಳನ್ನು ಚುನಾವಣೆಗಳಲ್ಲಿ

(ಶ್ರೀ ಎಚ್. ಜಿ. ನರಸಿಂಹೇಗೌಡ.)

ವಿರೋಧಿಸಿದರು. ಆ ಕಾಂಗ್ರೆಸ್ಸಿನವರು ಪೋಲೀಸ್ ಇನ್ಸ್‌ಪೆಕ್ಟರಲ್ಲಿಗೆ ಹೋಗಿ ಅವರನ್ನು ಹೆದರಿಸಿ, 'ಈಗ ನಮ್ಮ ಸರ್ಕಾರವಿದೆ, ನಾವು ಹೇಳಿದಹಾಗೆ ಮಾಡದೆ ಇದ್ದರೆ ನಿಮ್ಮನ್ನು ಡಿಸ್ಮಿಸ್ ಮಾಡಿಸುತ್ತೇವೆಂದು ಹೇಳಿ ಒಬ್ಬ ಅಡ್ವೋಕೇಟರ ಮೇಲೆ, ಮತ್ತು ಪ್ರೆಸಿಡೆಂಟರ ಅಣ್ಣನಮೇಲೆ ಸುಳ್ಳು ಹೇಳಿ ಕೋರ್ಟಿಗೆ ಕೇಸು ಹಾಕಿಸಿದ್ದಾರೆ. ಇನ್ನೊಬ್ಬರು ನನ್ನ ವಿಷಯದಲ್ಲೇ ಐ.ಜಿ.ಪಿ. ಯವರಿಗೆ ಟೆಲಿಗ್ರಾಂ ಕೊಟ್ಟು ಏನಾದರೂ ಕಾರ‍್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದಾರೆ. ನನ್ನ ಮನೆಯನ್ನೇ ಲೂಟಿಮಾಡಬೇಕೆಂದು ಇನ್ನು ಕೆಲವರು ಚಿತಾವಣಿ ಮಾಡಿದರು. ಈಗಲೂ ಕಾಂಗ್ರೆಸ್ ನಾಯಕರು ಸೆಕ್ರಿಟೇರಿಯಟ್ಟಿನಲ್ಲಿಯೇ ಆಗಲಿ, ಡಿಸ್ಟ್ರಿಕ್ಟ್ ಆಫೀಸಿಸುಗಳಲ್ಲಿಯೇ ಆಗಲಿ ಅಧಿಕಾರವರ್ಗದವರ ಕಾರ‍್ಯನಿರ್ವಹಣೆಯಲ್ಲಿ ಕೈಹಾಕುತ್ತಿಲ್ಲವೆಂದು ತಮ್ಮ ಎದೆಮುಟ್ಟಿಕೊಂಡು ಹೇಳಲಿ, ನೋಡೋಣ. ಸರ್ಕಾರದ ಗುಂಪಿನ ಕೆಲವು ವ್ಯಕ್ತಿಗಳು ಹೀಗೆ ಒಳಾಡಳಿತದಲ್ಲಿ ಪ್ರವೇಶ ಮಾಡಿ ಸರ್ಕಾರಿ ಅಧಿಕಾರಿಗಳನ್ನು, ನೌಕರರನ್ನು ತಪ್ಪುಮಾರ್ಗಕ್ಕೆ ಎಳೆಯುತ್ತಿದ್ದಾರೆ. ಕಾಗದಪತ್ರಗಳು ವಿಲೆಯಾಗದೆ ದಕ್ಷತೆ ಕಡಮೆಯಾಗುತ್ತಿದೆಯೆನ್ನುವ ವಾದ ಸರಿಯಲ್ಲ. ದಕ್ಷತೆ ಕಡಮೆಯಾಗಿರುವುದಕ್ಕೆ ಕಾರಣ ಇದು. ನಿಮ್ಮ ಹೃದಯ, ಆದ್ದರಿಂದ, ಪರಿವರ್ತನೆಯಾಗಬೇಕು. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ತಮ್ಮ ಕಾಂಗ್ರೆಸ್ ಮುಂದಾಳುಗಳಿಗೆ ಸಲಹೆ ಕೊಡುತ್ತಾರೆಂದು ನಂಬಿದ್ದೇನೆ.

ಆಮೇಲೆ ಪೋಲೀಸ್ ಖಾತೆಯ ಆಯವ್ಯಯ ಪಟ್ಟಿಯಲ್ಲಿ ಸರ್ಕಾರದವರು ಹೆಚ್ಚಿನ ಖರ್ಚನ್ನು ತೋರಿಸಿದ್ದಾರೆ. ವಾಸ್ತವವಾಗಿ ಈ ಇಲಾಖೆಯಲ್ಲಿ ಕೆಲವು ಹುದ್ದೆಗಳು ಅನಾವಶ್ಯಕವೆನ್ನಬೇಕು. ಪೋಲೀಸ್ ಇನ್ಸ್‌ಪೆಕ್ಟರುಗಳ ಕೆಲಸ ನಿಜವಾಗಿ ಏನೂ ಇಲ್ಲವೆಂದೇ ಹೇಳಬೇಕು. 'Heinous case' ಗಳನ್ನು ಮಾತ್ರ ಅವರು investigationಗೆ ತೆಗೆದುಕೊಳ್ಳುತ್ತಾರೆ. ಅಂಥ ಕೇಸುಗಳು ವರ್ಷಕ್ಕೆ ಒಂದೋ ಎರಡೋ ಇರುತ್ತವೆ ಅಷ್ಟೆ. ಆದ್ದರಿಂದ ಪೋಲೀಸ್ ಇನ್ಸ್‌ಪೆಕ್ಟರ್‌ಗಳು ತಾಲ್ಲೂಕಿಗೆ ಒಬ್ಬರಂತೆ ಇರಬೇಕಾಗಿಲ್ಲ. ಎರಡೆರಡು ತಾಲ್ಲೂಕಿಗೆ ಒಬ್ಬರಿದ್ದರೆ ಸಾಕು. ಇದರಿಂದ ಖರ್ಚೂ ಉಳಿಯುತ್ತದೆ. ಹಾಗೆಯೇ A.S.P. ಗಳನ್ನು ನೇಮಿಸಿಕೊಳ್ಳುವುದನ್ನು ಬಿಡಲಿ. ಯಾರು ದಕ್ಷತೆಯಿಂದ ಇನ್ಸ್‌ಪೆಕ್ಟರಾಗಿ ಕೆಲಸಮಾಡುತ್ತಾರೋ ಅವರೇ ಡಿ.ಎಸ್.ಪಿ. ಕೆಲಸವನ್ನು ಮಾಡಬಹುದು. ಎ.ಎಸ್.ಪಿ. ಗಳಿಗೆ ಯಾವ ಸಬ್ ಇನ್ಸ್‌ಪೆಕ್ಟರೂ investigation Reportಗಳನ್ನು ಕೂಡ ಕಳುಹಿಸುವುದಿಲ್ಲ. ನೇರವಾಗಿ ಡಿ.ಎಸ್.ಪಿ. ಯವರಿಗೇ ಎಲ್ಲಾ investigation report ಗಳೂ ಬರುತ್ತಿರುತ್ತವೆ. ಅಲ್ಲಿಗೆ ಎ.ಎಸ್.ಪಿ. ಆಫೀಸಿನಲ್ಲಿ ಏನು ಕೆಲಸವೂ ಇರುವುದಿಲ್ಲ. ಅದೊಂದು ಪೋಸ್ಟಾಫೀಸಿನಂತೆ ಇರುತ್ತದೆ ಅಷ್ಟೆ.

6-30 P.M.

ಇನ್ನು ಮೂರನೆಯದಾಗಿ, ನಿಜವಾಗಿಯೂ ನಮ್ಮ ದೇಶ ಮುಂದಕ್ಕೆ ಬರಬೇಕೆಂಬ ಆಸೆ ನಮಗಿದ್ದರೆ ನಾವು ಕೂಡಲೇ ನಮ್ಮ ಪೋಲೀಸಿನವರು ಈ "ಲಾ ಅಂಡ್ ಆರ್ಡರನ್ನು" ಸರಿಯಾಗಿ ನಡೆಸುವಂತೆ ಸರ್ಕಾರ ಏರ್ಪಾಡು ಮಾಡಬೇಕು. ಈಗಿನಂತೆ ಪೋಲೀಸಿನವರು ಜನರ ಮುಖ ನೋಡಿ ಕೆಲಸಮಾಡತಕ್ಕದ್ದನ್ನು ಕೂಡಲೇ ನಿಲ್ಲಿಸಬೇಕು. ಯಾವ ಸರ್ಕಾರವೇ ಇರಲಿ, ಅಧಿಕಾರದಲ್ಲಿ ಯಾವ ಪಾರ್ಟಿಯೇ, ಇರಲಿ ಅವರು ಮಂತ್ರಿಗಳಾಗಿಯೇ ಇರಲಿ, ಅಥವಾ ಸಾಮಾನ್ಯ ಜನರೇ ಆಗಿರಲಿ, ಅವರ ಅಂತಸ್ತೇನೆಂಬುದನ್ನು ಗಮನಿಸದೆ ಅವರ ನಡತೆಯಲ್ಲಿ ಕಂಡುಬಂದ ಅಪರಾಧಕ್ಕೆ ತಕ್ಕ ಹಾಗೆ ಪೋಲೀಸಿನವರು ವರ್ತಿಸಬೇಕಾದದ್ದು ದೇಶದ ಹಿತದೃಷ್ಟಿಯಿಂದ ಬಹಳ ಮುಖ್ಯವಾದುದು. ಇಂಥ ಒಂದು ಶಿಸ್ತನ್ನು ನಮ್ಮ ಪೋಲೀಸರಿಗೆ ಕಲಿಸಬೇಕು. ಹಾಗಾಗದೆ ಇದ್ದ ಪಕ್ಷಕ್ಕೆ—ಅಥವಾ ಯಾವ ಒಂದು ಪಾರ್ಟಿ ಅಧಿಕಾರದಲ್ಲಿರುತ್ತದೆಯೋ ಅದರ ಮಾತಿಗೆ ಮಾತ್ರ ಬೆಲೆ ಕೊಡುತ್ತಾ ಹೋದರೆ ಸಾರ್ವಜನಿಕರಿಗೆ ದೊರೆಯಬೇಕಾದ ನ್ಯಾಯ ಸರಿಯಾಗಿ ದೊರೆಯುವುದಿಲ್ಲ. ತತ್ರಾಪಿ ರೈತಾಪಿವರ್ಗಕ್ಕೆ ಈಗ ಬಹಳ ಅನ್ಯಾಯವಾಗುತ್ತಿದೆ. ಈಗ ಪೋಲೀಸಿನವರು ಹಾಕುತ್ತಿರುವ ಕೇಸುಗಳಲ್ಲಿ ಎರಡು ವಿಧಗಳಿರುತ್ತವೆ. ಒಂದು ಕಾಗ್ನೈಜಬಲ್, ಇನ್ನೊಂದು ನಾನ್-ಕಾಗ್ನೈಜಬಲ್ ಎಂಬುದಾಗಿ, ಹೀಗೆ ಎರಡು ವಿಧಗಳಿರುವುದರಿಂದ ಹಳ್ಳಿಜನರಿಗೆ ಈ ದಿವಸ ಹೇಗೆ ತೊಂದರೆಯಾಗುತ್ತಿದೆ ಎಂದರೆ—ಅನೇಕರು ಜನರ ನಿತ್ಯ ಜೀವನಕ್ಕೆ ಬೇಕಾಗುವಂಥ ಸಾಮಾನುಗಳನ್ನು ಪ್ರತಿದಿನವೂ ಕಳುವು ಮಾಡುತ್ತಿರುತ್ತಾರೆ. ಅಂಥ ವಿಚಾರಗಳನ್ನು ನಾವು ಪೋಲೀಸರ ಗಮನಕ್ಕೆ ತೆಗೆದುಕೊಂಡು ಹೋದರೆ ಅವುಗಳನ್ನು ಐಡೆಂಟಿಫೈ ಮಾಡುವುದು ಕಷ್ಟ, ಅವು ಕಾಗ್ನೈಜಬಲ್ ಕೇಸಾಗುವುದಿಲ್ಲವಾದ್ದರಿಂದ ಪೋಲೀಸಿನವರು ಈ ಕೇಸುಗಳಲ್ಲಿ ಕೈಹಾಕಲು ಸಾಧ್ಯವಿಲ್ಲ, ಪಾರ್ಟಿಗಳು ಬೇಕಾದರೆ ಕೋರ್ಟಿನಲ್ಲಿ ಮೊಕದ್ದಮೆ ಹೂಡಬಹುದೆಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಪ್ರಕರಣಗಳಾಗದಂತೆ ತಡೆಗಟ್ಟಲು ಈಗಿರತಕ್ಕ ಆಕ್ಟನ್ನು ಸೂಕ್ತ ರೀತಿಯಲ್ಲಿ ತಿದ್ದುಪಡಿ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದನ್ನು ಕೇಂದ್ರ ಸರ್ಕಾರ ಮಾಡಬೇಕಲ್ಲವೇ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಆ ಬಗ್ಗೆ ನಮ್ಮ ಸರ್ಕಾರ ಸಲಹೆ ಮಾಡಬಹುದು. ಈಗ ನಮ್ಮ ಪೋಲೀಸ್ ಕಾನ್ಸ್‌ಟೇಬಲ್‌ಗಳಿಗೆ ಕೊಡುತ್ತಿರುವ ಸಂಬಳ ಬಹಳ ಕಡಮೆ. ಇವರಿಗೆ ತಿಂಗಳಿಗೆ 50 ರೂಪಾಯಿಗಳಿಗಿಂತಲೂ ಕಡಮೆ ಸಂಬಳವಿರಕೂಡದು. S.S.L.C. ಪಾಸಾದಂಥವರನ್ನೇ ಕೆಲಸಕ್ಕೆ ನೇಮಿಸಿಕೊಂಡು ಸಾರ್ವಜನಿಕರ ವಿಷಯದಲ್ಲಿ ಒಂದು ಒಳ್ಳೆಯ ಅಭಿಮಾನ ಈ ನೌಕರರಲ್ಲಿ ಉಂಟಾಗುವಂಥ ಒಂದು ಏರ್ಪಾಡನ್ನು ಮಾಡಬೇಕಾದದ್ದು ಅತ್ಯಗತ್ಯ. ಜೈಲು ರಿಫಾರಂಸನ್ನು ಕೂಡ ಮಾಡಬೇಕಾಗಿದೆ. ಜೈಲಿನಲ್ಲಿ ಕೈದಿಗಳಿಗೆ ಯಾವುದಾದರೊಂದು ವೃತ್ತಿ ಶಿಕ್ಷಣವನ್ನು ಕೊಟ್ಟು ತನ್ಮೂಲಕ ಅವರು ತಮ್ಮ ಜೀವನವನ್ನು ಸರಾಗವಾಗಿ ನಡೆಸಿಕೊಂಡು ಹೋಗುವಂಥ ಒಂದು ವ್ಯವಸ್ಥೆಯನ್ನು ಏರ್ಪಾಡು ಮಾಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಡಾ॥ ಸರ್ದಾರ್ ಬಿ. ಕೆ. ನಾಗೂರ್ (ಬಿಜಾಪುರ).—ಮಾನ್ಯ ಸಭಾಪತಿಗಳೇ, ನಾನೂ ಸಹ ಈ ಪೋಲೀಸ್ ಖಾತೆಗೆ ಈಗ ಒದಗಿಸಿರತಕ್ಕ ಮೂರು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಕಡಮೆ ಇದನ್ನು ಹೆಚ್ಚಿಸಬೇಕೆಂದು ಹೇಳುವವನು. ಏಕೆಂದರೆ ಇವರು ಭಾನುವಾರ ರಜೆಯ ದಿನವಾಗಿದ್ದರೂ ಕೂಡ ಕೆಲಸ ಮಾಡುತ್ತಲೇ ಇರುತ್ತಾರೆ. ಆದರೆ ಈ ಇಲಾಖೆಯ ಆಡಳಿತೆಯಲ್ಲಿ ದಕ್ಷತೆಯಿಲ್ಲ. ಶಿಥಿಲತೆ ಬಹಳ ಹೆಚ್ಚಾಗುತ್ತಿದೆ. ಆದರೆ ಈ ತಪ್ಪು ಪೋಲೀಸಿನವರದಲ್ಲ. ಇದು ಖಾದಿ ಅರಿವೆಯನ್ನೂ ಬಿಳಿ ಟೊಪಿಗಿಯನ್ನೂ ಹಾಕುವ ಜನರದು. ಈ ಜನರು ಪೋಲೀಸರ ಮೇಲೆ ಕೆಲವು ಸಂದರ್ಭಗಳಲ್ಲಿ ಒತ್ತಾಯ ತರುತ್ತಾರೆ. ಅಂತೇ ಹಗಲಿನಲ್ಲಿ ಖೂನಿ-ದರೋಡೆ ಹೀಗೆ

ಏನು ಬೇಕೋ ಅವೆಲ್ಲಾ ಆಗುತ್ತಿವೆ. ಉದಾಹರಣೆಗೆ—ಹನಗುಂದ ತಾಲ್ಲೂಕಿನ ನಂದನಾಡಗಿ ಗ್ರಾಮದ ಶ್ರೀ ಚೆನ್ನಬಸಪ್ಪಗೌಡರ ಖೂನು ಹಗಲೇ ಆಯಿತು. ಅಲ್ಲಿಗೆ ಅವರ ಎಲೆಕ್ಷನ್ ಇನ್ನು ಎರಡು-ಮೂರು ದಿನಗಳಿದ್ದವು. ಖಾದಿ ಅರಿವೆ ಹಾಕಿದವರ ಅಂಗವಿಕ್ಷೆಂಯು ಜನ ಮಾತನಾಡುತ್ತಿದ್ದರು. ಹಾಡೇ ಹಗಲು ಆದ ಖೂನನ್ನು ಮುಚ್ಚುವುದು ಪೋಲೀಸಿನವರಿಗೆ ತುಂಬ ಕಷ್ಟ. ಆದರೆ "ಮೇಲೆ ನಮ್ಮ ಬಿಳಿ ಟೊಪಿಗಿಯ ಜನರಿದ್ದಾರೆ—ನಮಗೇನು?" ಎಂಬ ಅವರ ಧೈರ್ಯವೇ ದೇಶದಲ್ಲಿ ಇಂದು ಇಂಥ ಪರಿಸ್ಥಿತಿಯನ್ನು ತಂದಿದೆ. ಬಿಜಾಪುರನಗರದಲ್ಲಿ ಎಂ. ಆರ್. ಪಾಟೀಲ್—ಕಾಂಗ್ರೆಸ್ ಎಂ. ಎಲ್. ಎ. ಇವರ ಖೂನಾಯಿತು.

Sri T. TARE GOWDA.—The Hon'ble Member is making sweeping remarks by mentioning "white caps" and so on, Sir.

Mr. SPEAKER.—Hon'ble Members wearing white caps need not get offended. I am also wearing a white cap, but I am not hurt. (*Laughter*).

ಡಾ॥ ಸರ್ದಾರ್ ಬಿ. ಕೆ. ನಾಗೂರ್.—ಕುಂಬಳಕಾಯಿಕಳ್ಳ ಎಂದರೆ ಹೆಗಲು ....

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕಾಂಗ್ರೆಸ್ ಸದಸ್ಯರಲ್ಲದ ಕೆಲವರು ಖಾದಿ ಧಾರಿಗಳಿದ್ದಾರೆ. ಅವರ ಹೆಸರನ್ನು ಮಾತ್ರ ಸೇರಿಸಬಾರದು.

ಡಾ॥ ಸರ್ದಾರ್ ಬಿ. ಕೆ. ನಾಗೂರ್.—ಕುಂಬಳಕಾಯಿಕಳ್ಳ ಎಂದರೆ ಹೆಗಲು ಮುಟ್ಟಿನೋಡಿಕೊಂಡ ಎಂದ ಹಾಗಾಯಿತು ಈಗ. ಆದರೆ ಇದು ಸರಿಯಾದ ರೀತಿಯಲ್ಲವೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಮುಂದುವರಿಸುತ್ತೇನೆ.

ಈ ಖೂನಾದದ್ದು ರಾತ್ರಿ 8-30ರ ಸಮಯಕ್ಕೆ. ಬಿಜಾಪುರ ನಗರ ಡಿ. ಎಸ್. ಪಿ. ಮತ್ತು ಕಲೆಕ್ಟರ ಹೆಡ್‌ಕ್ವಾರ್ಟರ್ಸು. ಸಿಟಿ ಹಾಗೂ ತಾಲ್ಲೂಕು ಪೋಲೀಸ್ ಪಡೆಗಳು ಇತ್ಯಾದಿ ಎಲ್ಲವೂ—ಎಲ್ಲರೂ ಇದ್ದರು. ಕಾಂಗ್ರೆಸ್ ಎಂ. ಎಲ್. ಎ. ಗಳ ಖೂನಿ ಪಟ್ಟಣದಲ್ಲೇ ಆಗುತ್ತಿರುವಾಗ ಉಳಿದವರ ಪಾಡೇನು? ಇದಕ್ಕಿಂತಲೂ ವಿಚಿತ್ರವಾದ ಘಟನೆ ದೇಶದಲ್ಲಿ ಎಲ್ಲಿಯೂ ನಡೆಯಲಾರದಂಥ ವಿಷಾದದ ಸಂಗತಿ ಒಂದಿದೆ. ಇದೇ ರೀತಿ ಆ ಲಿಂಗಸೂಗೂರಿನ ಗುಂಡಪ್ಪನೆಂಬ ಒಬ್ಬ ಬಡ ವ್ಯಾಪಾರಿಗೆ ಆ ಭಾಗದ ಸಬ್-ಇನ್ಸ್‌ಪೆಕ್ಟರು ಸೆಗಣಿ ತಿನ್ನಿಸಿದ್ದು ಅತ್ಯಂತ ವಿಚಿತ್ರವೂ ವಿಷಾದಕರವೂ ಆಗಿದೆ. ಈಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಸಂಬಂಧಪಟ್ಟ ಖಾತೆಯ ಮಂತ್ರಿಗಳಿಗೂ ಲಿಖಿತಮೂಲಕ ಅರ್ಜಿಗಳು ಬಂದಿವೆ. ಆದರೇನೂ ಆಗಿಲ್ಲ. ಇದಕ್ಕೂ ಸಹ ಈ ಬಿಳಿ ಟೊಪ್ಪಿಗಿಯವರೇ ಕಾರಣರೆಂದು ಹೇಳುತ್ತಾರೆ. ಈ ಖಾದಿ ಹಾಕಿದ ಜನ ಬಿಳಿಟೊಪ್ಪಿಗಿ ಹಾಕಿದ ಜನ ಪೋಲೀಸಿನವರ ಕೂಡ ಕೂಡಿ ಮಾಡಿದ ಒಂದೇ ಒಂದು ನನ್ನ ಸ್ವಂತದ ಅನುಭವ ಸಾಕು. ನಾನು ವಿಜಾಪುರ ನಗರದಲ್ಲಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ. ನಾನು ನನ್ನ ಉತ್ಪನ್ನದ ಮೇಲೆ ಕರ ಕೊಡುತ್ತಿದ್ದೆ. ಬಿಳಿ ಟೊಪ್ಪಿಗೆಯವರ ತಪ್ಪು ತಡೆಗಳನ್ನು ನಿರ್ಭಯದಿಂದ ಸಭೆಯಲ್ಲಿ ಟೀಕೆಮಾಡುತ್ತಿದ್ದೆ. ಇದು ಅವರಿಗೆ ಸಹನವಾಗಲಿಲ್ಲ. ಆ ಕಾಲಕ್ಕೆ ಇದ್ದ ಜಾತ್ಯಂಧ ಕಲೆಕ್ಟರ್ ಅಲ್ಲಾಭಕ್ಷ ಕುಡುಕ ಡಿ. ಎಸ್. ಪಿ. ನಾಯಿಕ ಇವರಿಗೆ ಹೇಳಿ ನನ್ನನ್ನು ಗೂಂಡ ಎಂದು ಮಾಡಿಸಿ ಎರಡು ವರ್ಷ ವಿಜಾಪುರಕ್ಕೆ ಬರಬಾರದೆಂದು ಆಜ್ಞೆ ಮಾಡಿಸಿದರು. ಆದರೆ ಸಮರ್ಥ ಆಡಳಿತಗಾರರೆಂದು ಹೆಸರುಗಳಿಸಿದ ಮುಂಬೈ ಮುಖ್ಯಮಂತ್ರಿ ಮಾನ್ಯ ಮೊರಾರ್ಜಿಯವರು ಅದನ್ನು ರದ್ದುಗೊಳಿಸಿ—ನೀನು ಗೂಂಡಾ ಅಲ್ಲ ಅಂದರು. ಇದಕ್ಕಿಂತಲೂ ಹೆಚ್ಚಿನ ನಿದರ್ಶನ ಇನ್ನೇನು ಬೇಕು? ನಾನೀದಿವಸ ಪೋಲೀಸಿನವರನ್ನು ಸರಿಪಡಿಸಿದರೂ ಅವರನ್ನು ಪುನಃ ಈ ಬಿಳಿ ಟೊಪ್ಪಿಗೆಯವರು ಸರಿಯಾಗಿರದಂತೆ ಮಾಡಿಬಿಡುತ್ತಾರೆ. ಇದು ನಮ್ಮ ನಾಡಿನ ದುರ್ದೈವ! ಖೂನಿಗಳನ್ನು ನಡೆಸುವ ಒಂದು ದೊಡ್ಡ ತಂಡವೇ ಇದೆ. ಅಂಗಿ—ಧೋತರ ಇಟ್ಟವನಿದ್ದರೆ—500 ರೂಪಾಯಿಗಳು; ಕೋಟು-ರುಮಾಲದವನಿದ್ದರೆ 1,000 ರೂಪಾಯಿಗಳು; ಸೂಟು—ಫ್ಯಾಂಟಿನವರಿದ್ದರೆ 4,000 ರೂಪಾಯಿಗಳು; ಖಾದಿಹಾಕಿದವರಿಗೆ 10,000 ರೂಪಾಯಿಗಳು—ಈ ರೀತಿ ಹಣಕ್ಕೆ ಖೂನಿ ಮಾಡತಕ್ಕ ಒಂದು ತಂಡವಿದೆ. ಇರವಿ-ತಗಣೆಗಳನ್ನು ಒರಸಿದಂತೆ ಜನತೆಯ ಖೂನಾಗ ಹತ್ತಿದೆ. ಅದರಲ್ಲೂ ಬೈಲು ಹೊಂಗಲ—ಸವದತ್ತಿಗಳಲ್ಲಂತೂ ಹೇಳಿತೀರದು.

ಇನ್ನು ಆಂಟಿಕರಪ್ಷನ್ ಇಲಾಖೆ: ಇದರದಂತೂ ಒಂದು ದೊಡ್ಡ ನಾಟಕ. ನಮ್ಮ ಬಿಜಾಪುರ ಜಿಲ್ಲೆಯ ಆಂಟೀಕರಪ್ಷನ್ ಸಬ್-ಇನ್ಸ್‌ಪೆಕ್ಟರೇನೇ ಲಂಚತಿಂದು ಸಿಕ್ಕುಹಾಕಿಕೊಂಡಿದ್ದಾನೆ. ಇದಕ್ಕೇನನ್ನಬೇಕು! ಬೊಂಬಾಯಿ ಪೋಲೀಸ್ ಆಕ್ಟ 107ನೇ ಕಲಂ ಪ್ರಕಾರ ಚಾಪ್ಟರ್ ಕೇಸ್ ಹಾಕುತ್ತಾರೆ. ಈ ರೀತಿ ಕೇಸುಗಳನ್ನು ದುಷ್ಟರಿಗೂ—ಶಿಷ್ಟರಿಗೂ ಕೂಡಿಯೇ ಹಾಕುತ್ತಾರೆ. ಇದರಿಂದ ಪೋಲೀಸಿನವರಿಗೆ ಲಂಚ ತಿನ್ನಲು ಅನುಕೂಲವಾಗುತ್ತದೆ. ಇದೇ ಸರ್ಕಾರದಲ್ಲಿರುವ ಒಂದು ದೊಡ್ಡ ತಪ್ಪು ಮಾರ್ಗ. ಇದಕ್ಕೆ ಬದಲಾಗಿ ತಪ್ಪು ಮಾಡಿದವರ ಮೇಲಾಗಲಿ ದುಷ್ಟ ಜನರ ಮೇಲಾಗಲಿ ಕೇಸು ಹಾಕಿದರೆ ಯಾರೂ ಈ ಬಗ್ಗೆ ಆಪಾದನೆ ಮಾಡಲಾರರು. ಈಗಲಾದರೂ ಸರ್ಕಾರ ಈ ಬಗ್ಗೆ ಹೆಚ್ಚು ಲಕ್ಷ್ಯಕ್ಕೆ ತಗೆದುಕೊಳ್ಳಬೇಕು.

ಇನ್ನು ಆ 'ಓ. ಸಿ.' ಎಂದರೆ—'ಓ' ಎಂದರೆ ಓಪನಿಂಗ್; 'ಸಿ' ಎಂದರೆ ಕ್ಲೋಜಿಂಗ್—ಇದಂತೂ ಹೇಳತೀರದಷ್ಟಾಗಿದೆ. ಓಪನಿಂಗ್ ರಾತ್ರಿ 9 ಘಂಟೆಗೆ ಬರುತ್ತದೆ; ಕ್ಲೋಸಿಂಗ್ ರಾತ್ರಿ 12 ಘಂಟೆಗೆ. "ಓಪನಿಂಗಕ್ಕೆ ಊಟವಿಲ್ಲ; ಕ್ಲೋಜಿಂಗಕ್ಕೆ ನಿದ್ರೆ ಇಲ್ಲ" ಎಂದು ಈಗ ಒಂದು ಗಾದೆಯ ಮಾತಾಗಿದೆ. ಇದು ಇಷ್ಟು ಬಹಿರಂಗವಾಗಿ ನಡೆಯುತ್ತಿರಬೇಕಾದರೆ ಇದಕ್ಕೆ ಪೋಲೀಸಿನವರಲ್ಲಿರತಕ್ಕ ಧೈರ್ಯವಲ್ಲ—ಇದಕ್ಕೆ ಮುಖ್ಯ ಕಾರಣ ಪೋಲೀಸಿನವರ ಹಿಂದೆ ಇರತಕ್ಕ ಬಿಳಿ ಟೊಪ್ಪಿಗಿಯವರೇ ವಿನಾ ಬೇರೆ ಯಾರೂ ಅಲ್ಲ. ಹೀಗಾಗಿ ಈ ಗ್ಯಾಂಬ್ಲಿಂಗ್ ಎನ್ನುವುದು ನಿರ್ಭಯವಾಗಿಯೂ ಅವ್ಯಾಹತವಾಗಿಯೂ ನಡೆಯುತ್ತಿದೆ. ಈ ವಿಷಯವಾಗಿ ಕಾಂಗ್ರೆಸ್ಸಿನ ಎಂ. ಎಲ್. ಎ. ಗಳೇ ಮಾತನಾಡಿದ್ದಾರೆ.

ನಾನು ಈ ಪೋಲೀಸ್ ಖಾತೆಯ ವಿಷಯದಲ್ಲಿ ಖರ್ಚು ಕಡಮೆ ಮಾಡಿರಿ ಎಂದು ಹೇಳುವವನಲ್ಲ. ಹೋಂ ಗಾರ್ಡ್ಸ್ ಎಂದು ಇದೆ. ಸದ್ಯಕ್ಕೆ ಇದು ಅನಾವಶ್ಯಕ, ಹೈದರಾಬಾದಿನ ರಜಕಾರರ ಹಾವಳಿಯ ಕಾಲಕ್ಕೆ ಇದು ಪ್ರಾರಂಭವಾಯಿತು. ಬೊಂಬಾಯಿ ಪ್ರಾಂತ್ಯದಲ್ಲಿ ಈ ಹೋಂಗಾರ್ಡ್ಸ್ ಎಕ್ಸ್‌ಪೆನ್ಸಸ್ ವರ್ಷಕ್ಕೆ 21 ಲಕ್ಷ ರೂಪಾಯಿಗಳಷ್ಟು ಇತ್ತು. ಇಲ್ಲಿ ಎಷ್ಟಿದೆಯೋ ಗೊತ್ತಿಲ್ಲ. ಇದು ಮಂತ್ರಿಗಳು ಬಂದಾಗ ಸೆಟೆದು ನಿಂತು ಸೆಲ್ಯೂಟ್ ತಕ್ಕೊಳ್ಳಲಿಕ್ಕಷ್ಟಕ್ಕಿದೆ ವಿನಾ ಬೇರಾವುದಕ್ಕೂ ಅಲ್ಲ ಮತ್ತು ಕಾಂಗ್ರೆಸ್ ಪಕ್ಷದ ಜನಕ್ಕೆ ತಮ್ಮ ತಮ್ಮ ಮಂದಿಗೆ ಅದರಲ್ಲಿರಲು ಅನುಕೂಲ ಮಾಡಿಕೊಡಲಿಕ್ಕಷ್ಟೇ ಅಲ್ಲದೆ ಬೇರೆ ಏನು? ಒಟ್ಟಿನಲ್ಲಿ ಹೇಳುವುದಾದರೆ ಪೋಲೀಸ್ ಆಡಳಿತದ ವಿಷಯದಲ್ಲಿ

(ಡಾ|| ಸರ್ದಾರ್ ಬಿ. ಕೆ. ನಾಗೂರ್)
ಅವರನ್ನು ಅವರಷ್ಟಕ್ಕೇ ಬಿಟ್ಟರೆ ಹೆಚ್ಚು ಒಳ್ಳೆಯದು. ಈ ಬಿಳಿ ಟೊಪ್ಪಿಗೆಯ ಜನ ಆಡಳಿತೆಯಲ್ಲಿ ಕೈಹಾಕಿ ಹೆಚ್ಚು ಶಿಥಿಲತೆ ಮಾಡುತ್ತಾರೆ. ಇದು ದೇಶದ ದುರ್ದೈವ. ಈ ಕರ್ನಾಟಕ ರಾಜ್ಯ, 1956ನೇ ಇಸವಿ 11ನೇ ತಿಂಗಳಿನಲ್ಲಿ ಉದಯಿಸಿತು. ಸದ್ಯ 11 ಜನ ಮಂತ್ರಿಗಳಿದ್ದಾರೆ. ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ಇದು 11 ಶುಭವಾದ ಅಂಕಿ. ಪವಿತ್ರವಾದ ಕರ್ನಾಟಕ, ಶೂರರ ನಾಡಾದ ಕರ್ನಾಟಕ. ಈ ಕರ್ನಾಟಕದ ಮಂತ್ರಿ ಮಂಡಲಕ್ಕೆ ಕಲಂಕ ಹತ್ತಿದರೆ ಯಾರಾದರೂ ಹೊರಗಿನವರು "ಏನು ನಿಮ್ಮ ಕರ್ನಾಟಕ ಮಂತ್ರಿ ಮಂಡಳ! ಆಡಳಿತದಲ್ಲಿ ಶಿಥಿಲತೆ, ಲಂಚಗೂಳಿತನ" ಮುಂತಾಗಿ ಮಾತನಾಡಿದರೆ, ಮಂತ್ರಿಮಂಡಳಕ್ಕೂ, ಕರ್ನಾಟಕಕ್ಕೂ, ಈ ವಿಧಾನಸಭೆಗೂ, ಈ ವಿಧಾನ ಸಭೆಯ ಸದಸ್ಯನಾದ ನನಗೂ ಅಗೌರವ, ನಮ್ಮ ನಾಡಿಗೂ ನಮ್ಮ ಮಂತ್ರಿ ಮಂಡಳಕ್ಕೂ ಯಾವ ತರದ ಕುಂದೂ ಬರಬಾರದೆಂಬ ಸದುದ್ದೇಶದಿಂದಲೂ ಅಭಿಮಾನದಿಂದಲೂ ನನಗೆ ಕೊಟ್ಟ ಎರಡು ಮಿನಿಟುಗಳಲ್ಲಿ ನಾಲ್ಕು ಮಾತು ಹೇಳಿ ಸಭಾಪತಿಗಳಿಂದ ಗಂಟೆಬಡಿಸಿಕೊಳ್ಳದೆ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER,—Before I call upon the Minister for Home to begin his remarks, I desire to announce certain features of the debate. In all, 25 members have taken part. 16 from the Opposition and 9 from the Congress. Out of 16, 9 come from the Independent fold and 7 from the P.S.P.

*ಶ್ರೀ ಸಿ. ಎಂ. ಪೂಣಚ್ಚ (ಒಳಾಡಳಿತ ಮತ್ತು ಕೈಗಾರಿಕೆ ಶಾಖೆಗಳ ಮಂತ್ರಿಗಳು).—ಅಧ್ಯಕ್ಷರೆ, ನಿನ್ನೆ ಹಾಗೂ ಈ ದಿನ ನಮ್ಮ ಆಯವ್ಯಯ ಪಟ್ಟಿಯ ನ್ಯಾಯಾಂಗ, ಪೋಲೀಸ್ ರಕ್ಷಣಾಖಾತೆ, ಹಾಗೂ ಜೈಲು ವಿಭಾಗ ಈ ಮೂರು ಇಲಾಖೆಗಳಿಗೆ ಸಂಬಂಧಿಸಿದ ಖರ್ಚಿನ ಮೊಬಲಗನ್ನು ಒದಗಿಸುವಂಥ ಈ ಚರ್ಚೆಯಲ್ಲಿ ಮಾನ್ಯ ಸದಸ್ಯರುಗಳು ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ; ಕೆಲವೊಂದು ಮಟ್ಟಿಗೆ ಕಟು ಟೀಕೆಯನ್ನು ಕೂಡ ಮಾಡಿದ್ದಾರೆ. ಅಲ್ಲದೆ ಅನೇಕ ವಿಧಾನದ ತೊಂದರೆ ಹಾಗೂ ಕಷ್ಟ, ಹಾಗೂ ಇಲಾಖೆಗಳ ಕೆಲಸ ಕಾರ್ಯಗಳಲ್ಲಿ ಇರುವಂಥ ಲೋಪ ದೋಷಗಳನ್ನು ಕೂಡ ಅವರು ಸ್ಪಷ್ಟೀಕರಿಸಿದ್ದಾರೆ. ಅವೆಲ್ಲಕ್ಕೂ ಕೂಡ ನಾನು ಮಾನ್ಯ ಸದಸ್ಯರುಗಳಿಗೆ ಬಹಳ ಕೃತಜ್ಞನಾಗಿದ್ದೇನೆ. ಏಕೆಂದರೆ ಈ ಎರಡು ದಿವಸಗಳ ಕಾಲಾವಕಾಶವನ್ನು ಬಹಳ ಉಪಯುಕ್ತವಾದ ರೀತಿಯಲ್ಲಿ ಈ ಸಭೆ ಉಪಯೋಗಿಸಿದೆ ಎಂದು ಹೇಳಿ ನನ್ನ ಅಭಿಪ್ರಾಯ. ಕೆಲವೊಂದು ವಿಚಾರಗಳಲ್ಲಿ ಟೀಕೆ ಬಹುಶಃ ಸಲ್ಲತಕ್ಕದ್ದಾಗಿರಲಿಕ್ಕಿಲ್ಲ. ಆದರೂ ಕೂಡ ಇಂಥ ಒಂದು ಸಂದರ್ಭದಲ್ಲಿ ನಾವು ಸೇರುವಾಗ ಸಾಮಾನ್ಯವಾಗಿ ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವಂಥ ಕಾಲಕ್ಕೆ ಕೆಲವೊಂದು ರೀತಿಯ ನಮ್ಮದೇ ಆದಂಥ ಒಂದು ಅನುಭವ ಕೂಡ ಏತನ್ಮಧ್ಯೆ ವ್ಯಕ್ತವಾಗುವುದು ಸ್ವಾಭಾವಿಕ. ನಮ್ಮ ಕ್ಷೇತ್ರದ್ದು, ನಮ್ಮ ಊರಿಂದು, ನಮ್ಮದೇ ಆದಂಥ ಕೆಲವು ವ್ಯವಹಾರಗಳು ನಮ್ಮ ಮೇಲೆ ಒಂದು ಪ್ರತಿಕ್ರಿಯೆಯನ್ನು ಮಾಡಿದ್ದರೆ ಆ ಪ್ರತಿಕ್ರಿಯೆಯ ಒಂದು ಅನುಭವದ ಮೇಲೆ ಏನೇ ಒಂದು ವಿಷಯದಲ್ಲಿ ಮಾತನಾಡುವಾಗ ಆ ಅಭಿಪ್ರಾಯವು ಬಂದುಬಿಡುವಂಥಾದ್ದು ಬಹುಶಃ ಸ್ವಾಭಾವಿಕ. ಆ ದೃಷ್ಟಿಯಿಂದ ಕೆಲವೊಂದು ವಿಷಯಗಳಲ್ಲಿ ಟೀಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಚುನಾವಣೆ ಆಯಿತು. ಚುನಾವಣೆ ಕಾಲದಲ್ಲಿ ಕೆಲವೊಂದು ರೀತಿಯ ಅನುಭವಗಳಿಗೆ ನಾವು ಒಳಪಟ್ಟಿದ್ದೇವೆ. ಅನಂತರ ಕೆಲವೊಂದು ರೀತಿಯ ಮನೋಭಾವಕೂಡ ನಮ್ಮಲ್ಲಿ ವ್ಯಕ್ತಗೊಳ್ಳುತ್ತಾ ಇದೆ. ಅದು ಬಹುಶಃ ಒಂದು ರೀತಿಯ ಉದ್ವೇಗದ ಅಭಿಪ್ರಾಯವನ್ನು ವ್ಯಕ್ತಮಾಡಲಿಕ್ಕೆ ಕಾರಣವಾಗಿರಬಹುದು ಎಂದು ಕೂಡ ನನ್ನ ಒಂದು ಸಂಶಯ. ಹೇಗೇ ಇರಲಿ, ಒಟ್ಟಿನಲ್ಲಿ ನಾನು ಈ ಸಭೆಗೆ ತುಂಬ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನ್ಯಾಯಾಂಗದ ವಿಚಾರವಾಗಿ ಮಾಡಿದಂಥ ಕೆಲವು ಅಭಿಪ್ರಾಯಗಳನ್ನು ಕುರಿತು ಮುಖ್ಯ ಮಂತ್ರಿಗಳು ಈ ಮೊದಲೇ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ನ್ಯಾಯಾಧೀಶರನ್ನು ನೇಮಕ ಮಾಡುವಂಥ ವಿಚಾರದಲ್ಲಿ ಅದಂಥ ಒಂದು ಕಾಲಾವಕಾಶಕ್ಕೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನೇ ನಾನು ಮುಂದುವರಿಸಲಿಕ್ಕೆ ಉದ್ದೇಶ ಪಡುವುದಿಲ್ಲ. ಏಕೆಂದರೆ ಹೆಚ್ಚು ದೀರ್ಘ ಸಮಯವನ್ನು ನಾನು ತೆಗೆದುಕೊಳ್ಳಲಿಕ್ಕೆ ಇಷ್ಟಪಡುತ್ತಿಲ್ಲ. ಈ ಭಾಷಣಗಳು ಆದಂಥಾ ಮತ್ತು ಅಭಿಪ್ರಾಯ ವ್ಯಕ್ತಮಾಡಿದಂಥಾದ್ದನ್ನು ನೋಡುವಾಗ ಮೂರು ವಿಷಯಗಳು ಸ್ಪಷ್ಟವಾಗುತ್ತಿವೆ. ಒಂದು ಏನೆಂದರೆ, ಬಹಳ ಹೆಚ್ಚಿನ ರೀತಿಯ ಖರ್ಚನ್ನು ಕೇಳಿದ್ದಾರೆ, ಇಷ್ಟು ಹೆಚ್ಚಿನ ಮೊಬಲಗನ್ನು ನಾವು ಇವೊತ್ತು ಕೊಡಲಿಕ್ಕೆ ಸಾಧ್ಯವೇ? ಖರ್ಚು ಹೆಚ್ಚಾಗುತ್ತಾ ಇದೆ—ಎಂಬುದು ಒಂದು ಅಭಿಪ್ರಾಯ. ಎರಡನೆಯದಾಗಿ ಆಡಳಿತ ಭಾಗದಲ್ಲಿ ದಕ್ಷತೆ ಕಡಮೆಯಾಗುತ್ತಾ ಇದೆ,—ದಕ್ಷತೆಯನ್ನು ನಾವು ಕಾಪಾಡಿಕೊಳ್ಳಬೇಕು, ದಕ್ಷತೆ ಇನ್ನೂ ಹೆಚ್ಚು ಮಾಡಬೇಕು ಎನ್ನುವಂಥಾದ್ದು ಸೂಕ್ತವಾದ ಸಲಹೆ. ಮೂರನೆಯದಾಗಿ, ಒಟ್ಟಿನಲ್ಲಿ ಈ ಇಲಾಖೆಗಳಲ್ಲಿ, ಅದರಲ್ಲೂ ಮುಖ್ಯವಾಗಿ ಪೋಲೀಸ್ ಇಲಾಖೆಯ ಕೆಲಸ ಕಾರ್ಯಗಳಲ್ಲಿ ಲೋಪ ದೋಷಗಳು ಬಹಳವಾಗಿವೆ, ಹಾಗೂ ಲಂಚಗೂಳಿತನವೂ ಕೂಡ ಇದೆ ಎನ್ನುವುದು ಇನ್ನೊಂದು ಅಭಿಪ್ರಾಯ. ಇವನ್ನು ವ್ಯಕ್ತಮಾಡುವಾಗ ಸಾಮಾನ್ಯವಾದ ಅಭಿಪ್ರಾಯಗಳು ವ್ಯಕ್ತವಾಗಿದ್ದರೂ ಕೂಡ ಸ್ಪಷ್ಟವಾದ ಒಂದು ಅಭಿಪ್ರಾಯವನ್ನು ವ್ಯಕ್ತಮಾಡುವಂಥ ಕೆಲವು ಅಭಿಪ್ರಾಯಗಳೂ ಕೂಡ ಒಂದು ಪಕ್ಷದಿಂದ ಬಂದಿದೆ. ಉದಾಹರಣೆ ಹೇಳುವಂಥಾದ್ದಾದರೆ, ಮಾನ್ಯ ಮಿತ್ರರಾದ ಶ್ರೀಮಾನ್ ಪುಟ್ಟರಾಮಯ್ಯನವರು 1947ರಲ್ಲಿ 21 ಲಕ್ಷ ರೂಪಾಯಿ ಖರ್ಚು ಇತ್ತು, ಇವೊತ್ತು 3 ಕೋಟಿ 60 ಲಕ್ಷ ರೂಪಾಯಿಗಳವರೆಗೂ ಕೇಳುತ್ತೀರಲ್ಲಾ, ಇಂಥ ಒಂದು ವಿಷಯಕ್ಕೆ ಯಾವತ್ತು ನಮ್ಮತಿ ಕೊಡಲಿಕ್ಕೆ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ಹೇಳಿದರು. ಮಾನ್ಯ ಮಿತ್ರರಾದ ಶ್ರೀಮಾನ್ ಶ್ರೀನಿವಾಸ ಶೆಟ್ಟರು ಪೋಲೀಸ್ ಇಲಾಖೆ ಉತ್ತಮಗೊಳ್ಳಬೇಕಾದರೆ ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ಏನಿಲ್ಲ ಎಂದರೂ 100 ರೂಪಾಯಿ ವೇತನ ಕೊಡುವಂಥ ತೀರ್ಮಾನಮಾಡಬೇಕು, ತೀರ್ಮಾನ ಮಾಡದೇ ಹೋದರೆ ಈ ಇಲಾಖೆ ಉಳಿಯಲಿಕ್ಕಿಲ್ಲ, ಇದನ್ನು ಭದ್ರವಾಗಿಟ್ಟುಕೊಳ್ಳಲು ಸೂಕ್ತವಾದ ಕಾರ್ಯಕ್ರಮ ಇದ್ದರೆ ಆಲೋಚನೆಮಾಡಿ ಎಂದು ಹೇಳುವಾಗ, ಈ ರೀತಿ ಒಂದೇ ಪಕ್ಷದಿಂದ ಬಂದ ಈ ಅಭಿಪ್ರಾಯಗಳನ್ನು ನಾವು ಸಮವಾಗಿ ತುಲನೆಮಾಡಿ ನೋಡಿದರೆ ಯಾವುದನ್ನು ಒಪ್ಪಿಕೊಳ್ಳಬಹುದು, ಯಾವುದನ್ನು ಒಪ್ಪಿಕೊಳ್ಳಬಾರದು ಎನ್ನುವುದು ಕಠಿಣವಾಗಿ ಕಾಣುತ್ತಾ ಇದೆ. ಇದರಲ್ಲಿ ಹೊಸ ವಿಷಯವನ್ನೇನನ್ನೂ ನಾನು ಹೇಳುತ್ತಿಲ್ಲ, ಇಲ್ಲಿ ಏನು ನಡೆಯಿತೋ ಅದನ್ನು ಹೇಳುತ್ತಾ ಇದ್ದೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಮ್ಮ ಪಾರ್ಟಿಯಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಮಾನ್ಯ ಮಂತ್ರಿ

ಗಳು ಹೇಳಿದರು. ಶ್ರೀನಿವಾಸ ಶೆಟ್ಟರು ಪೋಲೀಸ್ ಖಾತೆಯಲ್ಲಿ ಕಡಮೆ ಜನ ಇಟ್ಟುಕೊಂಡು ಹೆಚ್ಚು ಸಂಬಳ ಕೊಡಿ ಎಂದರೆ ಕಾನ್‌ಸ್ಟೇಬಲ್‌ಗಳಿಗೆ ಕೊನೆಯಪಕ್ಷ 100 ರೂಪಾಯಿ ಆದರೂ ಸಂಬಳ ಕೊಡಿ ಎಂದು ಹೇಳಿದರು; ನಾನು ಕಡಮೆ ಹಣ ಖರ್ಚುಮಾಡಿ, ಇಷ್ಟು ಹೆಚ್ಚಿಗೆ ಹಣ ಬೇಕಾಗಿಲ್ಲ ಎಂದು ಹೇಳಿದೆ. ಹೀಗೆ ಹೇಳಿದ ಮಾತ್ರಕ್ಕೆ ಬೇರೆ ಬೇರೆ ಅಭಿಪ್ರಾಯವಾಗಲಿಲ್ಲ. ನಮ್ಮ ಪಾರ್ಟಿ ಅಭಿಪ್ರಾಯ ಒಂದೇ, ಖರ್ಚು ಕಡಿಮೆ ಮಾಡಿಕೊಳ್ಳ ಬೇಕು.

ಶ್ರೀ ಸಿ. ಎಂ. ಪೂಣಚ್ಚ.—ಅದೇ ಅಭಿಪ್ರಾಯವನ್ನು ಸಾಧಾರಣವಾಗಿ ವಿಮರ್ಶೆಮಾಡುತ್ತ ಇದ್ದೆ. ನಿಜವಾಗಿಯೂ ಅದು ಪ್ರಾಕ್ಟಿಕಲ್ ಆದಂಥ ಒಂದು ಸೂಚನೆಯಲ್ಲ. ಏಕೆಂದರೆ 23 ಸಾವಿರ ಮಂದಿ ಪೋಲೀಸ ಕಾನ್‌ಸ್ಟೇಬಲುಗಳಿರುವ ಇಲಾಖೆಯಲ್ಲಿ ಅವರಿಗೆ ನೂರು ರೂಪಾಯಿಗಳಿಗೆ ಬಡಾವಣೆಕೊಟ್ಟು ಸಾಧಾರಣ 600 ಮಂದಿ ಒಟ್ಟು ಅಧಿಕಾರಿವರ್ಗದಲ್ಲಿರತಕ್ಕವರ ಸಂಬಳವನ್ನು ಬಹುಶಃ ಇಳಿಸಿದರೆ, ಅವರು ಹೇಳಿದಂತೆ ಸಾವಿರ ರೂಪಾಯಿಗಳಿಗೆ ಜಾಸ್ತಿಯಾಗಿ ಅಧಿಕಾರಿಗಳ ಸಂಬಳ ವಿರದಂತೆ ಮಾಡಿದರೂ ಸಹ, ಖರ್ಚು ಈಗಿರುವುದಕ್ಕಿಂತ ಹೆಚ್ಚಾಗುತ್ತದೆ; ಮೂರು ಕೋಟಿ ಇರುವುದು ಆರು ಕೋಟಿಯಾಗುತ್ತದೆ ಎಂದು ಸಾಮಾನ್ಯ ಲೆಕ್ಕಕ್ಕೆ ಅನುಭವಕ್ಕೆ ತಿಳಿಯುತ್ತದೆ. ಇದನ್ನು ಚರ್ಚೆಮಾಡುವುದಕ್ಕೆ ಹೋಗುವುದಿಲ್ಲ. ನ್ಯಾಯವಾಗಿ ಕಾನ್‌ಸ್ಟೇಬಲುಗಳು, ಇಂಥವರಿಗೆ ಸ್ವಲ್ಪ ಹೆಚ್ಚಿನ ರೀತಿಯ ಸಂಬಳ ಸಾರಿಗೆಗಳನ್ನು ಕೊಟ್ಟು ಅವರ ಜೀವನವನ್ನು ಉತ್ತಮ ಮಾಡಿ, ಇಲಾಖೆಯಲ್ಲಿರುವ ದಕ್ಷತೆಯನ್ನು ಬೆಳೆಸುವುದು ವಿಹಿತವಾದ ಸಲಹೆ. ಆದರೆ ಅದನ್ನು ನಿರ್ವಹಿಸಲು ಇರುವಂಥ ಸಮಾಜದ ಆರ್ಥಿಕ ಸ್ಥಿತಿ ಎಷ್ಟರಮಟ್ಟಿಗಿದೆ ಎಂದು ಪರಿಶೀಲನೆ ಮಾಡಬೇಕು. ಅದನ್ನು ಯೋಗ್ಯ ಆದರ್ಶವಾಗಿ ಇಟ್ಟುಕೊಳ್ಳೋಣ. ಆದರೆ ಇವೊತ್ತಿನ ದಿವಸ ಅದನ್ನು ಆಚರಣೆಗೆ ತರಲಿಕ್ಕೆ ಇರುವಂಥ ನಮ್ಮ ಹಣ ಕಾಸಿನ ಸ್ಥಿತಿ ಏನು ಎಂದು ಆಲೋಚನೆ ಮಾಡಬೇಕಾಗಿದೆ. ಆ ವಿಷಯವನ್ನು ನಾನು ಕೇವಲ ಒಂದು ಹೋಲಿಕೆಗೋಸ್ಕರ ತಂದಿದ್ದೇನೆಯೇ ವಿನಾ ನಿಜವಾಗಿ ನಮ್ಮ ಪೋಲೀಸು ಇಲಾಖೆಯ ಕಾನ್‌ಸ್ಟೇಬಲುಗಳಿಗೆ ಸಂಬಳಗಳನ್ನು ಬಡಾವಣೆ ಮಾಡಬೇಕು ಎಂದು ತೀರ್ಮಾನವನ್ನು ಕೈಗೊಂಡು, ಪ್ರತಿಯೊಂದು ಜಿಲ್ಲೆಗೂ ಕೂಡ ಈ ರೀತಿ ಸಂಬಳಸಾರಿಗೆಗಳನ್ನು ಕೊಡುತ್ತಿದ್ದೇವೆ. ಇದರಲ್ಲಿ ಸ್ವಲ್ಪ ಕಾಲಾವಕಾಶವಾಗಿದೆ ಎಂಬುದನ್ನು ಒಪ್ಪುತ್ತೇನೆ. ಏಕೆಂದರೆ 23ಸಾವಿರ individual cases ತೆಗೆದುಕೊಂಡು, ಜಿಲ್ಲೆ ಜಿಲ್ಲೆಗೂ ಲೆಕ್ಕಹಾಕಿ, ಅದನ್ನು ಅಕೌಂಟೆಂಟ್ ಜನರಲ್ ಅವರಿಗೆ ಕಳುಹಿಸಿ, ಅವರು ಅದನ್ನು ಒಪ್ಪಿಕೊಂಡಾದಮೇಲೆ ಹಣವನ್ನು ಕೊಡುವುದರಲ್ಲಿ ಸ್ವಲ್ಪ ಕಾಲಾವಕಾಶವಾಗಿದೆ. ಆದಷ್ಟು ಜಾಗ್ರತೆಯಾಗಿ ಇದನ್ನು ಮಾಡಬೇಕು. ಈಗ ಮಾಡಿದಂಥ ಈ ಒಂದು ಬಡಾವಣೆ ಇನ್ನೂ ಪೂರೈಸದೆ ಇದೆ. ಅದರ ಪ್ರಯೋಜನವನ್ನು ಶೀಘ್ರವಾಗಿ ಒದಗಿಸಬೇಕು ಎಂಬುದೇ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಅದನ್ನು ಖಂಡಿತವಾಗಿಯೂ ನಾವು ನಿರ್ವಹಿಸುತ್ತೇವೆ. ನಾನು ಇಷ್ಟೆಲ್ಲ ಏಕೆ ಹೇಳುತ್ತಿದ್ದೇನೆಂದರೆ: ಆಡಳಿತದ ವಿಷಯದಲ್ಲಿ ದಕ್ಷತೆ ಕಡಮೆಯಾಗಿದೆ, ಲಂಡನ್ನಿನಲ್ಲಿರುವ ಪೋಲೀಸ್ ಖಾತಿನವರು ಅಷ್ಟು ದಕ್ಷತೆಯಲ್ಲಿರುವುದಕ್ಕೆ ಅವರನ್ನು ಅಷ್ಟು ಹೊಗಳುವುದಕ್ಕೆ, ಅವರಿಗೆ ಸಮಾಜ ಕೊಡುತ್ತಿರುವ ಗೌರವವೇ ಕಾರಣ, ಅವರಲ್ಲಿರುವಂಥ ಕಾರ್ಯ ದಕ್ಷತೆ ನಮ್ಮಲ್ಲಿಲ್ಲ, ನಮ್ಮ ದಳದಲ್ಲಿಲ್ಲವೆಂದು ಮಾನ್ಯ ಶ್ರೀನಿವಾಸ ಶೆಟ್ಟರು ಹೇಳಿದರು. ಬಹುಶಃ ಅದನ್ನು ಒಂದು ರೀತಿಯಲ್ಲಿ ಒಪ್ಪಬಹುದು. ಆದರೆ ಅದೇ ರೀತಿಯ ಉದಾಹರಣೆಯನ್ನು ಕೊಡಬಹುದು. ಪೋಲೀಸಿನ ದಕ್ಷತೆಯನ್ನು ಹಾಗೂ ಪೋಲೀಸ್ ದಳದಲ್ಲಿರಬೇಕಾದಂಥ ಒಳ್ಳೆಯ ನೀತಿ ಮತ್ತು ನಿಸ್ಪೃಹತಾ ಭಾವನೆ ಬೆಳೆಯಬೇಕಾದರೆ ಯಾವರೀತಿ ಮಾಡಬೇಕೆಂದು ಅವರು ಎಂದು ಹೇಳಿಲ್ಲ. ಇದರ ಬಗ್ಗೆ ನಾನೂ ಕೂಡ ಒಂದು ಉದಾಹರಣೆಯನ್ನು ಕೊಡಲಿಕ್ಕೆ ಇಷ್ಟ ಪಡುತ್ತೇನೆ. ನನ್ನ ಒಬ್ಬ ಸ್ನೇಹಿತರು ನಾನಾ ಪ್ರದೇಶಗಳಲ್ಲಿ, ವಿದೇಶಗಳಲ್ಲಿ ಸಂಚಾರ ಮಾಡಿ ಬಂದು, ಅದೇ ಲಂಡನ್ನಿನಲ್ಲಿ ನಡೆದಂಥ ಕೆಲವು ವಿಷಯಗಳನ್ನು ತಿಳಿಸಿದರು. ಅವರ ಅನುಭವದಲ್ಲಿ, ಅವರು ಹೇಳಿದ ಒಂದು ವಿಷಯವೇನೆಂದರೆ, ಲಂಡನ್ನಗರದಲ್ಲಿ ಹೋಗುತ್ತಿದ್ದಾಗ ಹಿಂದೂಸ್ತಾನದ ಒಬ್ಬ ದೊಡ್ಡ ಶ್ರೀಮಂತರು ಅಲ್ಲಿ ಕಾರಿನಲ್ಲಿ ಹೋಗುತ್ತಿದ್ದಾಗ, ಅವರು ತಮ್ಮ ಕಾರನ್ನು ಕಾರು ನಿಲ್ಲಿಸಬೇಕಾದ ಸ್ಥಳದಲ್ಲಿ ನಿಲ್ಲಿಸದೆ ತಪ್ಪು ಸ್ಥಳದಲ್ಲಿ ನಿಲ್ಲಿಸಿದ್ದರಿಂದ ಪೋಲೀಸಿನವರು ಬಂದು, ಅವರ ಮೇಲೆ ಒಡನೆಯೇ, ಅಲ್ಲಿಯೇ, ಕಾನೂನು ಪ್ರಕಾರ ಒಂದು ಪೌಂಡು ದಂಡವನ್ನು "for having parked the car in the wrong side" ಎಂದು ವಿಧಿಸಿ ಒಂದು ಚೀಟಿಯನ್ನು ಕೊಟ್ಟರು. ಶಿಕ್ಷೆಗೊಳಗಾದವರು ಹೋಗಿ ಅದನ್ನು ಸಲ್ಲಿಸತಕ್ಕ ನ್ಯಾಯಾಸ್ಥಾನದಲ್ಲಿ ಕೊಟ್ಟುಬಿಡಬೇಕು. ಯಾವಾಗ ಈ ರೀತಿ ಒಂದು ಪೌಂಡನ್ನು ಕೊಡಬೇಕಾಯಿತೋ ಆವಾಗ ಹಿರಿಯ ಶ್ರೀಮಂತರಾದ, ನಮ್ಮ ಭಾರತೀಯರು ಆಗ ಏನು ಮಾಡಿದರೆಂದರೆ, ಈ ತೊಂದರೆ ಎಲ್ಲ ಬಂತಲ್ಲ ಎಂದು ಯೋಚಿಸಿ ಐದುಪೌಂಡು ನೋಟನ್ನು ಆ ಕಾನ್‌ಸ್ಟೇಬಲ್ಲಿಗೆ ಕೊಡುವಾಗ ಅವನು ಹೇಳುತ್ತಾನೆ, "ಇದು ಏನು ವಿಚಿತ್ರ, ಇದಕ್ಕಿಂತ ಕಡಮೆಯಲ್ಲಿ ಆಗುವುದಕ್ಕೆ, ಒಂದು ಪೌಂಡಿನಲ್ಲಿ ಆಗುವುದಕ್ಕೆ ಐದು ಪೌಂಡುಗಳನ್ನು ನೀವು ಏಕೆ ವ್ಯಯಿಸುತ್ತೀರಿ, ಇದು ಸಲ್ಲದ ವಿಷಯ, ಆದುದರಿಂದ ಇದನ್ನು ನೀವು ಕೊಡಬಾರದು" ಎಂದು ಹೇಳುತ್ತಾನೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಆತ್ಮ ಶುದ್ಧಿ ಹಾಗೂ ಪರಿವರ್ತನೆ ಎಲ್ಲಿಂದ ಪ್ರಾರಂಭವಾಗಬೇಕು ಎನ್ನುವುದಕ್ಕೆ ಸೂಚನೆಯನ್ನು ಕೊಡುತ್ತಿದ್ದೇನೆ. ಸಮಾಜದ ಹೊರೆ ಕೂಡ ಇದರಲ್ಲಿ ಹಿರಿಯದಾದುದು. ಪೋಲೀಸಿನವರನ್ನು ಬಹುಮಟ್ಟಿಗೆ ಟೀಕೆ ಮಾಡಬಹುದು, ದಳದ ಪ್ರತಿಯೊಬ್ಬರನ್ನು ಕೂಡ ಟೀಕೆ ಮಾಡಬಹುದು. ಇವೊತ್ತು ಬೀದಿಯಲ್ಲಿ ಕಸಗುಡಿಸುವಂಥ ಸ್ಥಿತಿ ಪೋಲೀಸ್ ಕಾನ್‌ಸ್ಟೇಬಲುಗಳದ್ದು ಎಂದರೆ, ಕಸವನ್ನು ಗುಡಿಸುವಂಥ ಪೊರಕೆ ಕೈ ಕಸವಾಗುತ್ತದೆ, ಮೈಯೆಲ್ಲ ಮೈಲಿಗೆಯಾಗುತ್ತದೆ. ಅವನ ಮೇಲೆ ಕನಿಕರವಿರಬೇಕೇ ವಿನಾ ಸಂಪೂರ್ಣವಾದ ಟೀಕೆ ಸಲ್ಲದು. ಇದರಿಂದ ನಾವು ರಕ್ಷಣೆಯನ್ನು ಸ್ಥಿರಪಡಿಸುತ್ತೇವೆ, ಈ ಮುಖೇನ law and order situation ಉತ್ತಮ ಪಡಿಸುತ್ತೇವೆ ಎಂದು ಹೇಳುವಂಥಾದ್ದು ಬಹುಶಃ ಒಂದು ಮಟ್ಟದವರೆಗೆ ಸರಿಯಾಗಲಿಕ್ಕಿಲ್ಲ. ಇವೊತ್ತು ದೇಶದಲ್ಲಿ ನಾನಾ ತರಹ ತಪ್ಪುನಡತೆಗಳಿವೆ. ಅವನ್ನು ತಡೆಗಟ್ಟಲಿಕ್ಕೂ ಸರ್ವರಿಗೂ ಸಂರಕ್ಷಣೆಯನ್ನು ಒದಗಿಸಲಿಕ್ಕೂ, ಒಬ್ಬ ಮಾನ್ಯ ಮಿತ್ರರು ಹೇಳಿದಹಾಗೆ, ಸಮಾಜದ ಒಬ್ಬ ಸ್ನೇಹಿತನಾಗಿ ಈ ಪೋಲೀಸ್ ಆದಂಥ ಮನುಷ್ಯ ಕಸವನ್ನು ಗುಡಿಸುವ ಕೆಲಸವನ್ನು ಮಾಡುವಾಗ, ಅವನ ಕೈಯೂ ಸ್ವಲ್ಪಕಸವಾಗುವುದಕ್ಕೆ ಅವಕಾಶವಿದೆ. ಸಮಾಜದಲ್ಲಿ ಕಸ ಹೆಚ್ಚಿದರೆ ಪೋಲೀಸಿನವನಿಗೂ ಹೆಚ್ಚು ಕಸ ಅಂಟಿ ಕೊಳ್ಳುವುದು ದೊಡ್ಡ ಆಶ್ಚರ್ಯವಲ್ಲ. ಆದುದರಿಂದ ಆ ದೃಷ್ಟಿಯಿಂದ ಇಡೀ ಸಮಾಜವೇ ಇವೊತ್ತಿನ ಈ ಟೀಕೆಯ ಕೆಲವೊಂದು ಭಾಗವನ್ನು ಹೊರಲು ಹೆಗಲು

(ಶ್ರೀ ಸಿ. ಎಂ. ಪೂಣಚ್ಚ).

ಕೊಡಬೇಕಾದ ವಿಷಯವೂ ಕೂಡ ಇದರಲ್ಲಿ ಅಡಕವಾಗಿದೆ. ಆದುದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ಪೋಲೀಸ್ ದಳಕ್ಕೆ ಒಂದು ಕಾಲದಲ್ಲಿ ಕೇವಲ ರಕ್ಷಣೆಯು ಒಂದು ಕೆಲಸವಾತ್ರವಿತ್ತು, ಇತರ ಯಾವ ತರಹ ಕೆಲಸವೂ ಇರಲಿಲ್ಲ. ಮಾನ್ಯ ಪುಟ್ಟಣ್ಣನವರು ನಮ್ಮ ದೇಶದಲ್ಲಿ ಸುಖೀರಾಜ್ಯವನ್ನು ಸ್ಥಾಪನೆಮಾಡಬೇಕೆಂದು ಹೇಳಿದರು. ನಮಗೆ ಸ್ವರಾಜ್ಯಬಂದ ನಂತರ, ಎಷ್ಟೋ ಕಾನೂನುಗಳನ್ನು ನ್ಯಾಯಸ್ಥಾನ ಎಂದರೆ ವಿಧಾನಸಭೆ ಮಾಡುತ್ತಿದೆ. ಪ್ರತಿಯೊಂದೂ ಕೂಡ Social Reforms Act ಆಗಿದೆ. ಇವೊತ್ತು ಒಬ್ಬ ಪೋಲೀಸ್ ಕಾನ್ಸ್ಟೇಬಲ್ ಎಷ್ಟೋ ಕಾನೂನುಗಳನ್ನು ಜಾರಿಯಲ್ಲಿ ನಡೆಸಲಿಕ್ಕೂ ಆ ಕಾನೂನುಗಳಿಗೆ ವ್ಯತಿರಿಕ್ತವಾಗಿ ಸಮಾಜದಲ್ಲಿ ಪ್ರಜೆ ನಡೆದರೆ ಅದನ್ನು ತಡೆಗಟ್ಟಲಿಕ್ಕೂ, ಅವನ ಮೇಲಿರುವಂಥ ಹೊರೆ ತಿಳಿದಿರುವಂಥವರಿಗೆ ಗೊತ್ತಿದೆ. ಇವೊತ್ತು ಕಾನೂನುಗಳಿಂದ ಸಮಾಜದಲ್ಲಿ ಸುಧಾರಣೆಯನ್ನು ಮಾಡಬೇಕೆಂಬ ಪ್ರಜೆಯ ನಿರೀಕ್ಷಣೆ ಏನಿದೆಯೋ ಅದು ಪೋಲೀಸ್ ದಳದ ಸಾಮರ್ಥ್ಯಕ್ಕೆ ಒಂದು ಮಟ್ಟದಲ್ಲಿ ಮೀರಿನಿಂತಿದೆ ಎಂದು ಹೇಳಬಹುದು. ಈ ಎಲ್ಲ ದೃಷ್ಟಿಯನ್ನೂ ಇಟ್ಟುಕೊಂಡೇ ಒಟ್ಟಿನಲ್ಲಿ ಇವೊತ್ತು ಪೋಲೀಸ್ ದಳವು ಬರೀ ರಕ್ಷಣೆದಳವಲ್ಲ, ಸಮಾಜ ಸುಧಾರಣೆಯ ದಳವೂ ಆಗಿ ಕೆಲಸಮಾಡುತ್ತ ಇರುವುದೇ ಇವೊತ್ತಿನ ಪೋಲೀಸ್ ದಳದ ಒಂದು ನಿಜಸ್ವರೂಪ. ಈ ದೃಷ್ಟಿಯಿಂದ ನಾವು ನೋಡಿದ್ದಾದರೆ ನಿಜವಾಗಿಯೂ ನಾವು ಪೋಲೀಸ್ ದಳಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು, ಬೆಂಬಲವನ್ನು ಕೊಟ್ಟು, ಸಮಾಜ ಅವರನ್ನು ನ್ಯಾಯ ರೀತಿಯಲ್ಲಿ ಅವರ ಕಾರ್ಯನಿರ್ವಹಣೆಯಾಗುವ ವಿಷಯಕ್ಕೆ ಇನ್ನೂ ಬಹಳವಾದ ಬೆಂಬಲವನ್ನು ಕೊಡಬೇಕೆಂದು ಹೇಳುವುದು ನನ್ನ ಪ್ರಾರಂಭದ ಸೂಚನೆಯಾಗಿದೆ.

Special laws, local laws ಎಷ್ಟರಮಟ್ಟಿಗೆ ಇವೊತ್ತು ನಮ್ಮ ಪೋಲೀಸ್ ದಳದವರು ಅವನ್ನು ನಿರ್ವಹಿಸುವಂಥ ವಿಚಾರವಿದೆ ಎನ್ನುವುದನ್ನು ನೋಡುವಾಗ ಸಾಧಾರಣವಾಗಿ 80 ಕಾನೂನುಗಳನ್ನು ಅವರು ಜಾರಿಗೆ ತರಬೇಕಾಗಿದೆ. ಅದರಮೇಲೆ Civil Disabilities Removal Act, Prohibition Act, ಮತ್ತೆ ನಾನಾತರಹ ಅನಾಚಾರಗಳನ್ನು ತಡೆಗಟ್ಟತಕ್ಕ ಆಕ್ಟ್ ಇಂಥ ಎಲ್ಲ ಕಾನೂನುಗಳನ್ನೂ ಪ್ರತಿನಿತ್ಯವೂ ನಾವು ಇಲ್ಲಿ ಮಂಜೂರು ಮಾಡುತ್ತಿದ್ದೇವೆ. ಅವುಗಳ ಕಾರ್ಯಾಚರಣೆಯ ಈ ಒಂದು ಜವಾಬ್ದಾರಿಕೆಯು ಹೆಚ್ಚಿನ ಹೊರೆ ಪೋಲೀಸ್ ದಳದವರ ಮೇಲೆ ಬೀಳುತ್ತಿದೆ. ಹೀಗೆ ವಿಧಾನಸಭೆಯು ಅದರ ಕಾರ್ಯನೀತಿಯನ್ನು ಮಾಡಿಕೊಂಡು ಹೋಗುತ್ತ ಇರುವುದರಿಂದ ಅದರಲ್ಲಿಯೂ ಕೂಡ ಇವರ ಕೆಲಸದ ಬಾಹುಳ್ಯವು ಬಹುಮಟ್ಟಿಗೆ ಹೆಚ್ಚಿದೆ. ಹಾಗೆ ಹೆಚ್ಚಿಗೆ ಆಗಿದ್ದರೂ ಕೂಡ ಅಲ್ಲಿ ಇಲ್ಲಿ ಒಂದೊಂದು ಉದಾಹರಣೆಗಳನ್ನು ಎತ್ತಿ ತೋರಿಸಿರಬಹುದು. ಆದರೆ ನನ್ನ ಹತ್ತಿರ ಹಳೆಯ ಮೈಸೂರಿಗೆ ಸಂಬಂಧಪಟ್ಟ ಕೆಲವು ಅಂಕಿಅಂಶಗಳಿವೆ. ಅವನ್ನು ನೋಡಿದರೆ ಪೋಲೀಸ್ ದಳ ನೀವು ಹೇಳುವಷ್ಟು ರೀತಿಯಲ್ಲಿ ದಕ್ಷತೆಯನ್ನು ಕಳೆದುಕೊಂಡು ಕೆಲಸಮಾಡುತ್ತಿದೆ ಎನ್ನುವ ಟೀಕೆಯನ್ನು ನಾನು ಒಪ್ಪುವುದಿಲ್ಲ. ನಾನು ತಮಗೆ ಕೆಲವು ಅಂಕಿ ಅಂಶಗಳನ್ನು ಒಪ್ಪಿಸುವುದನ್ನು ತಾವು ನೋಡಿದರೆ . . .

ಶ್ರೀ ಜಿ. ಎಚ್. ಪುಟ್ಟಣ್ಣ.—ಪೋಲೀಸ್ ದಳದವರು ಎಲ್ಲರೂ ಮಾಡುತ್ತಿದ್ದಾರೆಂದು ಹೇಳಲಿಲ್ಲ. ಕಾನ್ಸ್ಟೇಬಲುಗಳ ವಿಚಾರವನ್ನು ಎತ್ತಲಿಲ್ಲ. ನೀತಿ, ನಿಷ್ಠೆ ಮತ್ತು ಧರ್ಮಕ್ಕೆ ವಿರೋಧವಾಗಿ ಕೆಲವು ಆಫೀಸರುಗಳು ಕೆಲಸಮಾಡುತ್ತಿದ್ದಾರೆಂದು ಹೇಳಿದ್ದೇನೆ. ಎಲ್ಲರೂ ಹೀಗೆ ಮಾಡುತ್ತಾರೆಂದು ಹೇಳಲಿಲ್ಲ. ಕಾನ್ಸ್ಟೇಬಲುಗಳ ವಿಚಾರ ಮಾತನಾಡಲಿಲ್ಲ. ಕಾನ್ಸ್ಟೇಬಲುಗಳಲ್ಲಿಯೂ ಒಳ್ಳೆಯವರಿದ್ದಾರೆ, ಕೆಟ್ಟವರಿದ್ದಾರೆ, ವಿಪರೀತವಾಗಿ ಕೆಟ್ಟಮಾರ್ಗದಲ್ಲಿ ಹೋಗುವವರು ಕೆಲವರಿದ್ದಾರೆ. ಒಳ್ಳೆಯವರನ್ನು ಬಿಟ್ಟು ಕೆಟ್ಟವರನ್ನು ಬಲಿಹಾಕಿ ಎಂದು ಹೇಳಿದ್ದೇನೆ.

7 P.M.

ಶ್ರೀ ಸಿ. ಎಂ. ಪೂಣಚ್ಚ.—ಸಭೆಯಲ್ಲಿ ಮಾತನಾಡಿದ ಅನೇಕ ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯ ಆಡಳಿತೆಯ ಕಾರ್ಯಾಚರಣೆಯ ಬಗ್ಗೆ ಮಾತನಾಡಿರುವದರಿಂದ ಅಂಕಿ ಅಂಶಗಳನ್ನು ಕೊಡುವುದು ಸೂಕ್ತವಾಗಿದೆ. 1954, 1955 ಮತ್ತು 1956 ಈ ಮೂರು ವರ್ಷಗಳಲ್ಲಿ ಮೈಸೂರು ರಾಜ್ಯದಲ್ಲಿ ಬಂದಂಥ crime case ಗಳ ಅಂಕಿ ಸಂಖ್ಯೆಗಳು 10 ಸಾವಿರ, 11 ಸಾವಿರ ಮತ್ತು 11,900 ಈ ರೀತಿಯಾಗಿ ಇವೆ. ತನಿಖೆ ನಡೆಸಿ ಚಾರ್ಜುಶೀಟು ಮಾಡಿದ ಒಟ್ಟು ಸಂಖ್ಯೆ ಈ ಮೂರು ವರ್ಷಗಳಲ್ಲಿ 7,600, 7,200 ಮತ್ತು 9,100 ಇವೆ. ಈ ವಿಚಾರದಲ್ಲಿ ಪೋಲೀಸ ಆಡಳಿತೆಯ ಕೆಲಸವು ಯಾವದೇ ರೀತಿಯಿಂದ ವಿಳಂಬವಾಗಿದೆಯೆಂದು ಕಂಡುಬರಲಿಲ್ಲ. ಪೋಲೀಸ ಆಡಳಿತೆಯ ಕಾರ್ಯಾಚರಣೆಯು ಸರಿಯಾಗಿ ನಡೆದಿದೆ. ಎಲ್ಲ ಕೇಸುಗಳನ್ನೂ ತನಿಖೆಮಾಡಿ ಚಾರ್ಜಶೀಟುಮಾಡಿ ನ್ಯಾಯಸ್ಥಾನಕ್ಕೆ ಕಳಿಸಿದಮೇಲೆ ಸಾಕ್ಷಿಗಳನ್ನು ಒದಗಿಸಬೇಕಾಗುತ್ತದೆ. ನ್ಯಾಯಾಸ್ಥಾನದಲ್ಲಿ ಎಲ್ಲ ವಿಷಯಗಳನ್ನೂ ಪರಾಂಬರಿಸಿ ಶಿಕ್ಷೆ ವಿಧಿಸಲಾಗುವುದು. ನ್ಯಾಯಾಸ್ಥಾನದಲ್ಲಿ ಪೋಲಿಸರು ತಮ್ಮ ಕೈವಾಡ ನಡೆಸಲು ಸಾಧ್ಯವಿಲ್ಲ. ನ್ಯಾಯಸ್ಥಾನದಲ್ಲಿ conviction ಆದ ಪ್ರಮಾಣವನ್ನು ನೋಡಿ ಪೋಲಿಸ ಆಡಳಿತೆಯ ದಕ್ಷತೆಯ ಪ್ರಮಾಣವನ್ನು ನಿರ್ಧರಿಸುವುದು ಸೂಕ್ತವಾಗಲಾರದು. ಯಾಕೆಂದರೆ ಶೇಕಡಾ 90ರಷ್ಟು ಗುನ್ಹೆಗಳು ಕನ್‌ವಿಕ್ಷನ್ ಆಗದೆ ಕೈತಪ್ಪಿ ಹೋಗುತ್ತವೆ. ಸಾಕ್ಷಿ ಒದಗಿಸುವುದು ಪೋಲಿಸರ ಜವಾಬುದಾರಿಯೂ ಅಲ್ಲವೆಂದು ಹೇಳಿದರು.

ಶ್ರೀ ಜಿ. ಎಚ್. ಪುಟ್ಟಣ್ಣ.—ಪಾಯಿಂಟ್ ಆಫ್ ಇನ್‌ಫರಮೇಷನ್. ಪೆಟಿ ಕೇಸಸ್ ಎಷ್ಟು ಮತ್ತು ಕಾಗ್ನಿಜೆಬಲ್ ಕೇಸಸ್ ಎಷ್ಟು ಎಂಬುದನ್ನು ತಿಳಿಸಬೇಕು.

ಶ್ರೀ ಸಿ. ಎಂ. ಪೂಣಚ್ಚ.—ಒಟ್ಟಿನಲ್ಲಿ ಕ್ರೈಮ್ ಪೊಜಿಷನ್ ಹೇಗೆ ಇದೆ ಎಂಬುದನ್ನು ಸ್ಥೂಲವಾಗಿ ಹೇಳುತ್ತೇನೆ. ಸಾಮಾನ್ಯವಾಗಿ ಶೇಕಡಾ 75ರಿಂದ 80ರಷ್ಟು ಪೆಟಿ ಕೇಸಸ್ ಇರುತ್ತವೆ ಎಂಬುದು ನನ್ನ ಅನುಭವವಾಗಿದೆ. ಒಟ್ಟು ಚಾರ್ಜುಶೀಟುಮಾಡಿದ್ದು ಎಷ್ಟು ಎಂಬುದನ್ನು ನಾನು ಹೇಳಿದೆನು. ಅದರಲ್ಲಿ cognisable ಎಷ್ಟು non-cognisable ಎಷ್ಟು ಎಂಬುದಕ್ಕೆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ಪೆಟಿ ಕೇಸಸ್ ಎಷ್ಟು ಎಂಬ ಅಂಕಿಗಳ ಸಂಗ್ರಹವಿಲ್ಲ. ಬೇಕಾದರೆ ಅನಂತರ ಕೊಡುತ್ತೇನೆ. ನಿಜವಾಗಿಯೂ ಪೋಲೀಸರ ಕೆಲಸ ಹೆಚ್ಚಾಗಿದೆ ಎಂದು ನಾನು ಈ ಸಭೆಗೆ ತಿಳಿಸಲು ಇಚ್ಛಿಸುತ್ತೇನೆ. ಪೋಲೀಸ ಆಡಳಿತೆಯು ದಕ್ಷತೆಯಿಂದಲೂ ಸಹ ನಡೆಯುತ್ತಿದೆ. ಈ ರೀತಿಯಾಗಿ ಇರುವುದರಿಂದ ಈ ಸಭೆಯಲ್ಲಿ ಮಾನ್ಯ ಸದಸ್ಯರು ಬಹುಮಟ್ಟಿಗೆ ಮಾಡಿದ ಟೀಕೆಯು ಸಲ್ಲದು ಎಂದು ನಾನು

ಹೇಳುತ್ತೇನೆ. ಕನ್‌ವಿಕ್ಷನ್ ಬಗ್ಗೆ ಅಂಕಿಅಂಶಗಳು ಈ ರೀತಿಯಾಗಿವೆ :

10 ಸಾವಿರದಲ್ಲಿ	4,900
,, ,,	4,400
,, ,,	5,098

ನಿಜವಾಗಿಯೂ ಪೋಲಿಸಿನವರದು ಬಹಳ ಕಷ್ಟಕರ ವಾದ ಕೆಲಸ. ದೀನದಯಾಳು ನಾಯ್ಡು ಅವರು ಹೇಳಿದ ಹಾಗೆ, It is a very difficult job. ಪೋಲೀಸಿನವರು ತಮ್ಮ ಕರ್ತವ್ಯವನ್ನು ನೆರವೇರಿಸಲು ಬಹಳ ಪರಿಶ್ರಮ ಪಡಬೇಕಾಗುತ್ತದೆ. ಸಾಕ್ಷಿಗಳನ್ನು ಒದಗಿಸುವುದು ದೊಡ್ಡ ತೊಂದರೆಯ ಕೆಲಸವಾಗಿದೆ ಎಂಬುದು ಎಲ್ಲರಿಗೆ ತಿಳಿದ ವಿಷಯ. ಒಂದು ಕೇಸಿನ ಬಗ್ಗೆ ಸ್ಟೇಟ್‌ಮೆಂಟ್ ರಿಕಾರ್ಡು ಆಗಿರುತ್ತದೆ. ಸಾಕ್ಷಿ ಹೇಳಲಾಗುತ್ತದೆ. ಕೇಸು ಹಿಡಿದು ಚಾರ್ಜಶೀಟು ಮಾಡಿ ಕನ್‌ವಿಕ್ಷನ್ ಆಗುವವರೆಗೆ ಅವರ ಕೆಲಸವೇನೂ ಸುಲಭ ಸಾಧ್ಯವಾದುದಲ್ಲ. ಕೆಲವೊಂದು ಸಲ ಪ್ರಯತ್ನಮೀರಿ ಕೆಲಸಮಾಡಿದರೂ ಸಹ ಕೋರ್ಟಿನಲ್ಲಿ ಕೇಸುಗಳು ಕೈಬಿಟ್ಟುಹೋದ ನಿದರ್ಶನಗಳು ನಮ್ಮ ಅನುಭವದಲ್ಲಿ ಬರುತ್ತವೆ.

ಇನ್ನು ಬೆಳಗಾಂವ ಜಿಲ್ಲೆಯ ಮಾನ್ಯ ಸದಸ್ಯರು ಮಾತನಾಡುತ್ತಾ ಬೆಳಗಾಂವ ನಗರದಲ್ಲಿ ನವಂಬರ್ ಒಂದನೆ ತಾರೀಖಿನ ದಿವಸ ಪೋಲಿಸಪಡೆಯನ್ನು ವಿನಾಕಾರಣವಾಗಿ ಹೆಚ್ಚಿಸಿ ಮಹಾರಾಷ್ಟ್ರ ಸಹೋದರರಿಗೆ ತೊಂದರೆಪಡಿಸುವಂತಾಯಿತು ಎಂದು ಹೇಳಿದರು. ಈ ಸಂಬಂಧದಲ್ಲಿ ನಿಜವಾಗಿ ನಡೆದದ್ದನ್ನು ನಮ್ರತೆಯಿಂದ ತಿಳಿಸಲು ಇಚ್ಛಿಸುತ್ತೇನೆ. Law and order ಸರಿಯಾಗಿ ಉಳಿಯುವಂತೆ ಸರಕಾರವು ಮುಂಜಾಗ್ರತೆಯಿಂದ ಕೆಲವೊಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಹೊಸ ಪ್ರಾಂತ ನಿರ್ಮಾಣವಾದ ಕಾಲದಲ್ಲಿ ಏನಾದರೂ ತೊಂದರೆಗಳು ಉಂಟಾಗದಂತೆ ಮತ್ತು ಅವುಗಳನ್ನು ತಡೆಗಟ್ಟಲು ಸರಕಾರವು ಮುಂಜಾಗ್ರತೆಯಿಂದ ಪೋಲೀಸ್ ಪಡೆಯ ವ್ಯವಸ್ಥೆಯನ್ನು ಮಾಡಬೇಕಾಯಿತು. ಈ ರೀತಿಯಾಗಿ ವ್ಯವಸ್ಥೆಯನ್ನು ಮಾಡದೇ ಹೋಗಿದ್ದರೆ ಏನಾದರೂ ತೊಂದರೆ ಉಂಟಾಗಿ ನಷ್ಟವಾದರೆ ಅದಕ್ಕೆ ಸರಕಾರದವರ ಜವಾಬುದಾರಿಯು ಬರುತ್ತದೆ. ಜವಾಬ್ದಾರೀ ಕೆಲಸಗಳಲ್ಲಿ ಪೋಲಿಸಿನವರು ಯಾವಕಾಲಕ್ಕೂ ಸಡಿಲ ವರ್ತನೆಯನ್ನು ನಡೆಸಿಲ್ಲ. ಬೆಳಗಾಂವದಲ್ಲಿ ಜನವರಿ 1956ರಲ್ಲಿ ಆದ ಹಿಂದಿನ ಅನುಭವದಿಂದ ನವಂಬರ್ ತಿಂಗಳಲ್ಲಿ ಈ ರೀತಿಯಾಗಿ ವ್ಯವಸ್ಥೆಮಾಡದೇ ಇದ್ದರೆ ಕರ್ತವ್ಯಚ್ಯುತಿಯಾಗುತ್ತಿತ್ತು. ಪೋಲೀಸಿನವರು ಮಾಡಿದಂಥ ಮುಂಜಾಗ್ರತೆಯ ಕೆಲಸಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆಯೇ ವಿನಾ ಅದಕ್ಕೋಸ್ಕರ ಟೀಕೆಮಾಡುವುದು ಎಷ್ಟುಮಾತ್ರವೂ ಸಲ್ಲದು ಎಂದು ಈ ಸಭೆಗೆ ನಾನು ಸ್ಪಷ್ಟವಾಗಿ ತಿಳಿಸುತ್ತೇನೆ.

(ಚಪ್ಪಾಳೆ)

ಒಂದು ಕೆಲಸದಲ್ಲಿ ಹಾಗೇನಾದರೂ ಒಂದು ತಪ್ಪು ನಡೆದಿದ್ದಲ್ಲಿ ಅದನ್ನು ಪೋಲೀಸಿನವರು ಪತ್ತೆ ಹಚ್ಚಬೇಕು ; ಆ ರೀತಿ ನಡೆಯದಂತೆ ಮುಂಜಾಗ್ರತ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ಬೆಳಗಾಮಿನ ಗಲಭೆಯಲ್ಲಿ ಕೂಡಲೇ ಕೆಲವು ಯೋಗ್ಯವಾದ ಮುಂಜಾಗ್ರತೆ ಏರ್ಪಾಡುಗಳನ್ನು ಮಾಡಿದ್ದು ಸರ್ಕಾರದ ಕರ್ತವ್ಯ ಮತ್ತು ದಕ್ಷತೆಯನ್ನು ಸೂಚಿಸುತ್ತದೆ. ಪೋಲೀಸ್ ದಳದವರು ಆ ಕಾಲದಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಅದಕ್ಕೋಸ್ಕರ ನಾವು ಅವರನ್ನು ಅಭಿನಂದಿಸಬೇಕಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಸುಂಥನ್‌ಕರ್ ಹೇಳಿದರು : ಪೋಲೀಸಿನವರು ಒಂದು ಮಿಲಟರಿ ಕ್ಯಾಂಪನ್ನು ಏರ್ಪಾಡುಮಾಡಿದ್ದರು. ಎಂದು ಹೇಳಿದರು ಹಾಗೆ ಮಾಡಲಿಲ್ಲ. 251 ಪೋಲೀಸ್ ದಳದವರು ಅಲ್ಲಿಯೇ ಇದ್ದಾರೆ. M. A. R. P. ಮತ್ತು ಹೈದರಾಬಾದ್ ಸ್ಪೆಷಲ್ ಪೋಲೀಸ್ ಸೇರಿ 200 ಜನರನ್ನು ಕಳುಹಿಸಿದ್ದೆವು. 451 ಜನ ಪೋಲೀಸಿನವರು ಜನಗಳ ಜೀವವನ್ನು ರಕ್ಷಣೆ ಮಾಡುವಂಥ ಜವಾಬ್ದಾರಿಯನ್ನು ವಹಿಸಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅದೇ ರೀತಿ ಮುಂಜಾಗ್ರತೆ ಮತ್ತು ಜವಾಬ್ದಾರಿಯನ್ನು ಮುಂದೆಯೂ ವಹಿಸುತ್ತಾರೆಂದು ನಾನು ಭರವಸೆಯನ್ನು ಕೊಡುತ್ತೇನೆ. ಅನಂತರ ನವ ಮೈಸೂರಿನ ನಿರ್ಮಾಣದಿಂದ ಕೆಲವೊಂದು ನಮ್ಮ ಅಧಿಕಾರಿಗಳಿಗೆ ಇರತಕ್ಕ ಪ್ರಗತಿ, ಒಂದು ಅವಕಾಶ ಕಡಮೆ ಆದುವು ಸೀನಿಯಾರಿಟಿ ಲೆವಲ್ಲಿನಲ್ಲಿ ಯಾವ ಒಂದು ಪ್ರಮೋಷನ್ ಸಿಕ್ಕಬಹುದಾಗಿತ್ತೋ ಅದು ಅವರು ಆ ಸೀನಿಯಾರಿಟಿ ಲಿಸ್ಟಿನಲ್ಲಿ ಕೆಳಗಡೆ ಬಂದಿರುವುದರಿಂದ, ಸಿಕ್ಕದೆ ಇರುವ ಸಂದರ್ಭ ಒದಗಿತು ಎಂದು ಕೆಲವೊಂದು ಅಂಶಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಹೀಗೆ ನವ ನೂತನ ವಿಶಾಲ ಮೈಸೂರು ನಿರ್ಮಿತವಾಗುವ ಕಾಲದಲ್ಲಿ ಕೆಲವೊಂದು ವಿಷಯ ಅನಿವಾರ್ಯವಾಗಿ ಸಂಭವಿಸಿರುವುದರಿಂದ ಏನು ಮಾಡಲಿಕ್ಕೂ ಆಗುವುದಿಲ್ಲ. ಇಂಟಿಗ್ರೇಟೆಡ್ ಸೀನಿಯಾರಿಟಿ ಲಿಸ್ಟುಗಳನ್ನು ತಯಾರು ಮಾಡಿದಾಗ ಆಫೀಸರ್ಸುಗಳಿಗೆ 30 ದಿವಸಗಳೊಳಗೆ ಅಪೀಲು ಮಾಡಲು ಮತ್ತು ಬೇರೆ ಏನಾದರೂ ತೊಂದರೆ ಇದ್ದರೆ ಅವನ್ನು ಸರಿಪಡಿಸುವುದಕ್ಕೆ ಮತ್ತು ಅದನ್ನು ತಿದ್ದಿಕೊಳ್ಳುವುದಕ್ಕೆ ಸರ್ವ ಅವಕಾಶವನ್ನೂ ಸಂಪೂರ್ಣವಾಗಿ ಕೊಟ್ಟಿರುವುದರಿಂದ ಹೆಚ್ಚಿನ ತೊಂದರೆ ಬರುವುದಿಲ್ಲ ಎಂದು ನಾನು ನಂಬಿದ್ದೇನೆ. ಹಿಂದೆ ವಿಶಾಲ ಮೈಸೂರಿನಲ್ಲಿದ್ದವರಿಗೆ ಮತ್ತು ಹಳೆಯ ಮೈಸೂರಿನಲ್ಲಿದ್ದ 20 ಜನಗಳಿಗೆ ಮೂರನೆಯ ಸ್ಥಾನ ಸಿಕ್ಕಿರಬಹುದು. ಆದರೆ 66 ಜನರ ಸಂಖ್ಯೆಯಲ್ಲಿ ಅವರಿಗೆ ಉನ್ನತ ಸ್ಥಾನ ಬರಬಹುದು. Openings also are in the same proportion. ಪ್ರಮೋಷನ್ ಆಗುವಂಥಾದ್ದು ಹೆಚ್ಚಿದೆ. ಒಟ್ಟಿನಲ್ಲಿ ಲೆಖ್ಖ ಹಾಕುವಾಗ ನಾವು ಎಲ್ಲಿ ಇದ್ದೆವೋ ಅದೇ ರೀತಿ ಇರುತ್ತೇವೆ. ಆದ್ದರಿಂದ ಹೆಚ್ಚಿನ ಬಾಧಕ ತೊಂದರೆ ಬರುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಮಾನ್ಯ ನನ್ನ ಸ್ನೇಹಿತರಾದ ನರಸಿಂಹನ್ ಅವರು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಅವರು ಸಾಮಾನ್ಯ ನಾಗರಿಕ ಪ್ರಜೆಗೆ ನ್ಯಾಯವು ಅತಿ ಕಡಮೆ ಖರ್ಚಿನಲ್ಲಿ ಒದಗುವಂತೆ ಮಾಡುವುದು ಸರ್ಕಾರದ ಕರ್ತವ್ಯ ಎಂದು ಹೇಳಿ ಆ ಪ್ರಕಾರ ಮಾಡಬೇಕು ಎಂದು ಸೂಚನೆ ಕೊಟ್ಟರು. ನ್ಯಾಯ ಎನ್ನುವುದು ಯಾವ ರೀತಿ ಇರಬೇಕೆನ್ನುವುದು ಅವರ ಮಾತಿನ ಅಭಿಪ್ರಾಯದಲ್ಲಿ ಸ್ಪಷ್ಟವಾಗಿಲ್ಲ. ಬರೀ ಲೀಗಲ್ ಜಸ್ಟೀಸೇ ಅಥವಾ ಸೋಷಿಯಲ್ ಜಸ್ಟೀಸೇ ಎಂಬುದನ್ನು ಅವರು ಸ್ಪಷ್ಟೀಕರಿಸಿಲ್ಲ. ಅವರು ಹೇಳಿದ ಕೆಲವೊಂದು ವ್ಯಾಜ್ಯ ತೀರ್ಮಾನವು ಕಡಮೆ ಖರ್ಚಿನಲ್ಲಿ ಆಗಬೇಕು ಎನ್ನುವ ಅಭಿಪ್ರಾಯವನ್ನು ಕೋರ್ಟ್‌ಫೀಜು ಬಿಲ್ಲು ತೆಗೆದುಕೊಂಡಾಗ ಚರ್ಚೆಮಾಡಬಹುದು. ಸುಖೀ ರಾಜ್ಯವನ್ನು ಸ್ಥಾಪನೆ ಮಾಡಬೇಕಾಗಿದ್ದರೆ ಜನಗಳ ಸೌಕರ್ಯವನ್ನೂ ಸುಖವನ್ನೂ ಬೆಳೆಸುವಂತೆ ಮಾಡುವ ಕಾಲ ಬಂದಾಗ ಇದನ್ನು ಯೋಗ್ಯ ರೀತಿಯಲ್ಲಿ ಆಲೋಚನೆ ಮಾಡೋಣ. ಬೇಕಾದಂಥ ವ್ಯವಸ್ಥೆ ಮಾಡೋಣ. ಆದರೆ ಒಟ್ಟಿನಲ್ಲಿ ಇರುವಂಥ ಒಂದು ಅಂಶವನ್ನು ತಿಳಿದು

(ಶ್ರೀ ಸಿ. ಎಂ. ಪೂಣಚ್ಚ.)

ಕೊಳ್ಳಬೇಕು. ಈ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮೀಷನ್ ಕೂಡ ಇಲ್ಲಿ ತಿರುಗಿ ಬಂದು ಪರಿಶೀಲನೆ ಮಾಡಿ ಕೊಟ್ಟಿರುವ ಅಭಿಪ್ರಾಯ ಏನು ಎಂದರೆ ನ್ಯಾಯವನ್ನು ಒದಗಿಸುವಾಗ ಇದರ ಖರ್ಚನ್ನು ಈ ಮೂಲಕ ಸಂಪಾದಿಸುವ ವರಮಾನ ಎಂದರೆ ಕೋರ್ಟು ಫೀಜುಗಳಿಂದ ಪಡೆಯಬಾರದು ಎಂದು. ಅದರಂತೆ ಸರ್ಕಾರ ಇದರಿಂದ ಲಾಭಪಡೆಯುತ್ತಾ ಇಲ್ಲ ಖರ್ಚನ್ನು ನಿರ್ವಹಿಸುವ ಮಟ್ಟಿಗೆ ನಮಗೆ ಇದರಿಂದ ಆದಾಯ ಬರುತ್ತಿದೆ. ಮಾನ್ಯ ಸ್ನೇಹಿತರಾದ ಶ್ರೀ ಕೆ. ಕೆಂಚಪ್ಪನವರು ಇದನ್ನು ಸಮರ್ಥಿಸಿ ಹೇಳಿದ್ದಾರೆ. ಆದರೆ ಮಾನ್ಯ ನರಸಿಂಹನ್ ರವರು ಟ್ರಾವಂಕೂರು, ಕೊಚಿನ್‌ಗಳಲ್ಲಿ 100 ರೂಪಾಯಿ ಕಡಮೆ ಉತ್ಪತ್ತಿ ಬರುವ ಪ್ರಜೆಗೆ ಮುಫತ್ತಾಗಿ ನ್ಯಾಯದೊರಕುವ ಹಾಗೆ ಮಾಡುತ್ತಿದ್ದಾರೆಂದು ಅಪ್ಪಣೆಕೊಡಿಸಿದರು. ಅದು ಎಷ್ಟರಮಟ್ಟಿಗೆ ಕಾರ್ಯದಲ್ಲಿ ನಡೆಯುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಅವರು ಕೇರಳಸರ್ಕಾರದ ವಿಚಾರದಲ್ಲಿ ಸ್ವಲ್ಪ ಮಟ್ಟಿಗೆ ವ್ಯಾಮೋಹವನ್ನು ಇಟ್ಟುಕೊಂಡಿರುವುದು ಸ್ವಾಭಾವಿಕ. ಆ ವ್ಯಾಮೋಹವನ್ನು ನಾನು ಅಲ್ಲಗಳೆಯುವುದಿಲ್ಲ. ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಕೇರಳ ಬಡ್ಜೆಟ್ಟನ್ನು ಕುರಿತು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಶ್ರೀ ನರಸಿಂಹನ್ ಅವರ ಭಾಷಣವನ್ನು ನಾನು ಕೇಳುತ್ತಿರುವಾಗ ನನಗೆ ಒಂದು ಚಿಕ್ಕಂದಿನ ಕಥೆ ಜ್ಞಾಪಕಕ್ಕೆ ಬಂತು. ಹಿಂದೆ ನಾರಸಿಸ್ ಎಂಬ ಒಬ್ಬ ಸುಂದರ ಮನುಷ್ಯ ಇದ್ದನು. ಅವನು ಒಂದು ಸಾರಿ ನೀರು ಕುಡಿಯಲು ಕೆರೆಗೆ ಹೋದನು. ಅವನು ತನ್ನ ಪ್ರತಿಬಿಂಬವನ್ನು ಆ ಕೆರೆಯ ನೀರಿನಲ್ಲಿ ನೋಡಿದನು. ಆಗ ತನ್ನ ಪ್ರತಿಬಿಂಬದ ಮೇಲೆ ಪ್ರೇಮ ಉತ್ಪತ್ತಿಯಾಯಿತು. ನಾರಸಿಸ್ ಆಗ ತಾನು ನೀರು ಕುಡಿಯುವುದನ್ನೇ ಮರೆತನು. Sri Narasimhan is suffering from Narcissism. He is seeing his own beautiful image in the brilliant back-waters of Kerala. I am so happy about it. ಇನ್ನು ಹೆಚ್ಚಿಗೆ ಅದನ್ನು ವಿವರಿಸಲಿಕ್ಕೆ ಉದ್ದೇಶಪಡುವುದಿಲ್ಲ. ಮಾನ್ಯ ಸದಸ್ಯರು ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಮಾನ್ಯ ಡಾ॥ ಆರ್. ನಾಗನಗೌಡರು ಪೋಲೀಸ್ ದಳದಲ್ಲಿ S. S. L. C. ಪಾಸಾಗಿರುವವರನ್ನೇ ಕಾನ್ಸ್ಟೇಬಲ್ ಕೆಲಸಕ್ಕೆ ಸೇರಿಸಿಕೊಳ್ಳುವುದು ವಿಹಿತ ಮತ್ತು ಆ ಮೂಲಕವಾಗಿ ಪೋಲೀಸ್ ದಳದವರಲ್ಲಿ ಹೆಚ್ಚಿನ ದಕ್ಷತೆ ಬೆಳೆಯುತ್ತದೆ ಎಂದು ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಪ್ರಕೃತ ಈಗಿನ ಸಂದರ್ಭದಲ್ಲಿ ಅದನ್ನು ಅನುಷ್ಠಾನಕ್ಕೆ ತರುವುದರಲ್ಲಿ ಸ್ವಲ್ಪ ತೊಂದರೆ ಇದೆ. ಇನ್ನು ಮುಂದಕ್ಕೆ ಅವರು ಹೇಳಿದಂತಹ ಯೋಗ್ಯವಾದ ಆದರ್ಶಗಳನ್ನು ಇಟ್ಟುಕೊಂಡು ಅಂತಹವರನ್ನು ಸೇರಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡೋಣ. 23 ಸಾವಿರ ಮಂದಿ ಸರ್ವೀಸಿನಲ್ಲಿ ಇದ್ದಾರೆ. ಅವರನ್ನೆಲ್ಲಾ ರಿಟ್ರೆಂಚ್ ಮಾಡುವುದಕ್ಕಾಗುತ್ತದೆಯೆ? ಡಿಸ್‌ಮಿಸ್ ಮಾಡುವುದಕ್ಕಾಗುತ್ತದೆಯೇ? ಈ ಒಂದು ಆದರ್ಶವನ್ನು ಮುಂದುವರಿಸಿಕೊಂಡು ಹೋದಾಗ ನಿಜವಾಗಿಯೂ ಪ್ರಗತಿಯನ್ನು ಸಾಧಿಸಬಹುದು. ಆದರೆ ಈಗ ಆ ವಿಷಯದಲ್ಲಿ ಹೆಚ್ಚು ಅಭಿಪ್ರಾಯವನ್ನು ಕೊಡಲು ಸಾಧ್ಯವಿಲ್ಲ.

ಶ್ರೀ ಕೆ. ಕೆಂಚಪ್ಪ.—ಕಾನೂನು ಮಾಡುವಾಗ, ಕಾನೂನನ್ನು ಮಾರುವಂತಾಗಬಾರದು ಎಂದು ನಾನು ಹೇಳಿದೆ. ಈಗಿರತಕ್ಕ ವರಮಾನ ಖರ್ಚು ಸರಿಯಾಗಿದೆ, ಆದುದರಿಂದ ಬಡವರಿಗೆ ಮುಫತ್ತಾಗಿ ಸಹಾಯ ಕೊಡಬಾರದೆಂದು ನಾನು ಹೇಳಲಿಲ್ಲ. ಇವರಿಗೆ ಸಹಾಯ ಕೊಡಬೇಕು. ಆದರೆ ಕೋರ್ಟ್‌ಫೀ ಸ್ಟಾಂಪು ಸೂಟ್‌ವ್ಯಾಲ್ಯುಯೇಷನ್ ಮುಂತಾದುವುಗಳ ಬಗ್ಗೆ ಸರ್ಕಾರ ಅನುಸರಿಸುತ್ತಿರುವ ನೀತಿಯನ್ನು ನೋಡಿದರೆ, ಕಾನೂನನ್ನು ಮಾರುವ ಹಾಗಾಗುತ್ತದಲ್ಲವೆ ಎಂದು ಕೇಳಿದೆ.

ಶ್ರೀ ಸಿ. ಎಂ. ಪೂಣಚ್ಚ.—ತಾವು ಹೇಳುವುದಕ್ಕೆ ಸರ್ಕಾರ ಯಾವಾಗಲೂ ಬೆಲೆ ಕೊಡುತ್ತದೆ, ಹೀಗಿರುವಾಗ ತಾವು ಕಾನೂನು ಮಾರುತ್ತಿದ್ದಾರೆ ಎಂದು ಹೇಳುವುದು ಅಷ್ಟು ಸಮಂಜಸವಲ್ಲವೆಂದು . . .

ಶ್ರೀ ಕೆ. ಕೆಂಚಪ್ಪ.—ಇದುವರೆಗೂ ಉತ್ಪತ್ತಿ ಖರ್ಚು ಸರಿಯಾಗಿದೆ. ಈಗ ತಂದಿರತಕ್ಕ ಕಾನೂನು ಮೂಲಕ ಉತ್ಪತ್ತಿಯನ್ನು ಹೆಚ್ಚುಮಾಡಬೇಕೆಂದು ತಂದಿದ್ದೀರಿ, ಹೀಗೆ ಮಾಡುವುದರಿಂದ ಕಾನೂನು ಮಾರುವ ಪರಿಸ್ಥಿತಿ ಬರುತ್ತದೆಂದು ಹೇಳಿದೆ.

ಶ್ರೀ ಸಿ. ಎಂ. ಪೂಣಚ್ಚ.—ಈಗ ಬರುವ ಉತ್ಪತ್ತಿ ನ್ಯಾಯಾಸ್ಥಾನಗಳನ್ನು ನಡೆಸುವುದಕ್ಕಾಗುವ ಖರ್ಚಿಗೆ ಹೆಚ್ಚುಕಡಮೆ ಸಮನಾಗಿದೆ. The actuals will reveal the facts.

ಪೋಲೀಸ್ ದಳದವರಿಗೆ ಸರಿಯಾದ ವಸತಿ ಇಲ್ಲವೆಂದು ಶ್ರೀ ದೀನದಯಾಳ್‌ನಾಯ್ಡುರವರು ಹೇಳಿದರು. ನಿಜ, ಅವರಿಗೆ ಸಾಕಷ್ಟು ವಸತಿ ಕಲ್ಪಿಸಬೇಕೆಂಬುದು ಸರ್ಕಾರದ ಮುಖ್ಯ ಉದ್ದೇಶ. ಈ ದೃಷ್ಟಿಯಿಂದ ಈಗಾಗಲೇ 13 ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳ ಅಂದಾಜನ್ನು ಮಂಜೂರುಮಾಡಿ, ಅವರಿಗೆ ವಸತಿಯನ್ನೊದಗಿಸುವ ಕಾರ್ಯವನ್ನು ಕೈಗೊಂಡಿದ್ದೇವೆ. ಅಲ್ಲದೆ ಇಂಡಿಯಾ ಸರ್ಕಾರದಿಂದ ಸಮಭಾಗವನ್ನು ಪಡೆದು 9,21,000 ರೂಪಾಯಿಗಳ ಅಂದಾಜನ್ನೂ ಇಟ್ಟುಕೊಂಡಿದ್ದೇವೆ. ಈ ಕಾರ್ಯವನ್ನು ಈವರ್ಷ ನಿರ್ವಹಿಸಬೇಕೆಂದು ಯೋಚನೆಯನ್ನಿಟ್ಟುಕೊಂಡಿದ್ದೇವೆ. ಈಗಿರುವ ಪರಿಸ್ಥಿತಿಯಲ್ಲಿ ಹಳೆಯ ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ವಸತಿ ಇಲ್ಲವೆಂದು ಶ್ರೀ ಬೋರಣ್ಣಗೌಡರು ಹೇಳಿದರು. ಇದು ಸರಿಯಲ್ಲ. ಹಳೆಯ ಮೈಸೂರುಪ್ರದೇಶದಲ್ಲಿ ಶೇಕಡ 46 ರಷ್ಟು ವಸತಿ ಇದೆ, ಬೊಂಬಾಯಿ ಕನ್ನಡಪ್ರದೇಶದಲ್ಲಿ ಶೇಕಡ 53 ರಷ್ಟು ವಸತಿಯ ಅನುಕೂಲವಿದೆ. ಮದರಾಸಿನಿಂದ ಬಂದಿರುವ ಪ್ರದೇಶದಲ್ಲಿ ಬಹಳ ಒಳ್ಳೆಯ ವ್ಯವಸ್ಥೆ ಇದೆ. ಅಲ್ಲಿ ಶೇಕಡ 62 ರಷ್ಟು ವಸತಿ ಇದೆ. ಕೊಡಗು ಪ್ರದೇಶದಲ್ಲಿ 59 ರಷ್ಟು ಅನುಕೂಲವಿದೆ. ಹೈದರಾಬಾದಿನಿಂದ ಬಂದಿರುವ ಪ್ರದೇಶ ಮಾತ್ರ ಈ ವಿಷಯದಲ್ಲಿ ಬಹಳ ಹಿಂದುಳಿದಿದೆ, ಅಲ್ಲಿ ಕೇವಲ ಶೇಕಡ 6 ರಷ್ಟು ಪೋಲೀಸ್ ನೌಕರರಿಗೆ ವಸತಿಯ ಅನುಕೂಲವಿದೆ. ಆದಕಾರಣ ಆಪ್ರದೇಶಕ್ಕೆ ಹೆಚ್ಚು ಗಮನ ಕೊಟ್ಟು ವಸತಿಯನ್ನೊದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ.

ಇನ್ನು ಜೈಲುಗಳ ವಿಷಯದಲ್ಲಿ ಎರಡು ಅಭಿಪ್ರಾಯಗಳನ್ನು ಮಾನ್ಯ ಸ್ನೇಹಿತರು ವ್ಯಕ್ತಪಡಿಸಿದ್ದಾರೆ. ಜೈಲು ಆಡಳಿತದಲ್ಲಿ ಇನ್ನೂ ಯಾವುದೇ ರೀತಿಯ ಪ್ರಗತಿ ಕಾಣುತ್ತಿಲ್ಲ, ಯಾವ ರೀತಿಯ ಬದಲಾವಣೆಯೂ ಕಾಣುತ್ತಿಲ್ಲ, ಹಿಂದಿನ ಕಾಲದಲ್ಲಿದ್ದ ಹಾಗೆಯೇ ಆಡಳಿತ ನಡೆಯುತ್ತಿದೆ ಎಂದು ಹೇಳಿದರು. ಇದು ಸರಿಯಲ್ಲ. ಜೈಲು ಆಡಳಿತದ ವಿಷಯದಲ್ಲಿ ನಮ್ಮ ಮಿತ್ರರಾದ ಮಾನ್ಯ ನಾರಾಯಣಸ್ವಾಮಿಯವರು ಒಂದು ವಿಷಯ ಹೇಳಿ, ಅವರ ಪ್ರಶ್ನೆಗೆ ಅವರೇ ಉತ್ತರ ಕೊಟ್ಟುಕೊಂಡ ಹಾಗೆ ಕಾಣುತ್ತದೆ. ಊಟಉಪಚಾರ, ಉಡಿಗೆ ತೊಡಿಗೆ, ವಿದ್ಯಾನುಕೂಲ, ವರಮಾನ ಪಡೆಯುವ ಅನುಕೂಲ ಇವೆಲ್ಲವೂ ಈ ಹೊತ್ತು ಬಹಳ ಉತ್ತಮ

ಗೊಂಡಿವೆ. ಆಟ, ಊಟಕ್ಕೆ ಒಳ್ಳೆಯ ಏರ್ಪಾಡಿದೆ, ನಾಟಕ, ಹರಿಕಥೆ ಮುಂತಾದ ಮನರಂಜನೆ ಕಾರ್ಯಗಳ ಏರ್ಪಾಟಿದೆ. ಊಟಉಪಚಾರ ಮತ್ತು ವಸತಿ ಮುಂತಾದ ವಿಷಯಗಳಲ್ಲಿ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಿದ್ದೇವೆಂಬುದಕ್ಕೆ ಅಂಕಿ ಅಂಶಗಳನ್ನು ನೋಡಬಹುದು. ಅದೇ ದಾಖಲೆ. ಈ ಬಾಬಿಗೆ ಖರ್ಚಾಗುವ 38 ಲಕ್ಷ ರೂಪಾಯಿಗಳ ವಿವರ ಹೀಗಿದೆ: ಊಟ ಉಪಚಾರಗಳಿಗೆ ಮಾತ್ರ 9,25,000 ರೂಪಾಯಿ ಖರ್ಚಾಗುತ್ತದೆ; ಆಸ್ಪತ್ರೆ ಸೌಕರ್ಯಕ್ಕೆ 72,000 ರೂಪಾಯಿ ಖರ್ಚಾಗುತ್ತದೆ; ಉಡಿಗೆ ತೊಡಿಗೆಗಳಿಗೆ 94,000 ಖರ್ಚಾಗುತ್ತದೆ. ಕೈದಿಗಳ ಶುಚಿನೈರ್ಮಲ್ಯಕ್ಕಾಗಿ 60,000 ರೂಪಾಯಿ ಖರ್ಚಾಗುತ್ತದೆ; ಇತರ service charges ಗೆ 97,000 ರೂಪಾಯಿ ಖರ್ಚಾಗುತ್ತದೆ. ಅಲ್ಲಿರುವ ಉದ್ಯೋಗಸ್ಥರ ವೇತನಕ್ಕೆ 14 ಲಕ್ಷರೂಪಾಯಿ ಖರ್ಚಾಗುತ್ತದೆ. ಇದನ್ನು ಗಮನಿಸಿದರೆ ಜೈಲಿನ ಆಡಳಿತದಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂಬುದು ವ್ಯಕ್ತವಾಗುತ್ತದೆ. ಇನ್ನೂ ಹೆಚ್ಚಿನ ಪ್ರಗತಿಮಾಡುವ ಏರ್ಪಾಡುಗಳೂ ಇವೆ. ಇವುಗಳಲ್ಲಿ ಕೆಲವನ್ನು ಹೇಳುವುದಾದರೆ, 1943ನೆಯ ಇಸವಿಯಲ್ಲಿ ಈ ಶಾಸನ ಸಭೆ ಒಂದು ಕಾನೂನನ್ನು ಅಂಗೀಕಾರ ಮಾಡಿತ್ತು, ಆ ಕಾನೂನು The Mysore Probation of Offenders Act 1943. ಇದನ್ನು ಜಾರಿಗೆ ತರಬೇಕೆಂಬ ಉದ್ದೇಶವಿದೆ. ಆದರೆ ಹಳೆಯ ಮೈಸೂರಿನ ಸಭೆಯಲ್ಲಿ ಅಂಗೀಕಾರವಾದ ಕಾನೂನನ್ನು ಹೊಸ ಮೈಸೂರಿಗೆ ಯಾವ ರೀತಿ ಅನ್ವಯಿಸಬೇಕೆಂಬ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಬಹುಶಃ ಇದನ್ನು ಜಾರಿಗೆ ತರಬಹುದೆಂಬ ನಿರೀಕ್ಷೆ ಸರ್ಕಾರಕ್ಕಿದೆ

ಇನ್ನು ಮಲ್ಲಪ್ಪನವರ ಸಮಿತಿಯ ವರದಿಯ ವಿಚಾರವನ್ನೆತ್ತಿದರು. . . . .

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಜೈಲಿನ ಆಡಳಿತ ನಡೆಸಲು ಪೋಲೀಸ್ ಅಧಿಕಾರಿಗಳಿರಬಾರದೆಂದು ನಾವು ಹೇಳಿದೆವು, ಅದಕ್ಕೆ ಸರ್ಕಾರದ ಉತ್ತರವೇನು

ಶ್ರೀ ಸಿ. ಎಂ. ಪೂಣಚ್ಚ.—ಹಿಂದಿನ ಮೈಸೂರು ಸಂಸ್ಥಾನದಲ್ಲಿ whole time Inspector-General of Prisons ಇರಲಿಲ್ಲ. ಸಾಮಾನ್ಯವಾಗಿ ಇವರು *ex-officio* ಅಧಿಕಾರಿಗಳಾಗಿದ್ದರು, ಕಲವು ಕಾಲ ಮೆಡಿಕಲ್ ಇಲಾಖೆಯ ಮುಖ್ಯಾಧಿಕಾರಿಗಳು ಈ ಕೆಲಸವನ್ನೂ ನೋಡಿಕೊಳ್ಳುತ್ತಿದ್ದರು. ಆದರೆ ಇತ್ತೀಚೆಗೆ ಹೊಸ ರಾಜ್ಯವಾದ ಮೇಲೆ ಜೈಲುಗಳ ಆಡಳತ ವಿಸ್ತಾರವಾದ ಮೇಲೆ whole time ಅಧಿಕಾರಿಯನ್ನು ನೇಮಕಮಾಡುವ ಆವಶ್ಯಕತೆ ಬಂತು. ಅನುಭವಶಾಲಿಗಳಾದ ಉಚ್ಚ ಅಧಿಕಾರಿಯನ್ನು ಈ ಸ್ಥಾನಕ್ಕೆ ನೇಮಕ ಮಾಡಿದ ಉದ್ದೇಶವೇನೆಂದರೆ, ಜೈಲುಗಳ ಆಡಳಿತ ಉತ್ತಮ ರೀತಿಯಲ್ಲಿ ನಡೆಯಲಿ, ಇದು ಉಚ್ಚ ಅಧಿಕಾರಿಗಳ ನೇತೃತ್ವದಲ್ಲಿ ಸಾಧ್ಯ ಎಂಬುದೇ ಆಗಿದೆ. ಇನ್ನೂ ಪ್ರಗತಿದಾಯಕವಾಗಿ ಮಾಡಬೇಕೆಂದು ನಮ್ಮ ಉದ್ದೇಶ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪೋಲೀಸಿನವರು ಈ ಸ್ಥಾನದಲ್ಲಿರಬಾರದೆಂಬುದು ನೀತಿ.

ಶ್ರೀ ಸಿ. ಎಂ. ಪೂಣಚ್ಚ.—ಅನುಭವ, ತಜ್ಞತೆ, ಪರಿಣತೆ ಇರುವ ಅಧಿಕಾರಿ ಇರಬೇಕು. ಇಂಥವರು ಯಾವ ಇಲಾಖೆಯಲ್ಲಿ ಸಿಕ್ಕುತ್ತಾರೆಂಬುದು ಸನ್ನಿವೇಶದ ಮೇಲೆ ಹೋಗುತ್ತದೆ. ಮೆಡಿಕಲ್ ಇಲಾಖೆಯಲ್ಲಿ ಸಿಕ್ಕಬಹುದು, ನ್ಯಾಯ ಇಲಾಖೆಯಲ್ಲಿ ಸಿಕ್ಕಬಹುದು, ಪೋಲೀಸ್ ಇಲಾಖೆಯಲ್ಲಿ ಸಿಕ್ಕಬಹುದು; ಸಂದರ್ಭಾನುಸಾರವಾಗಿರುವುದನ್ನು ತತ್ವದ ದೃಷ್ಟಿಯಿಂದ ಪರಿಶೀಲನೆ ಮಾಡಬಾರದು.

ಶ್ರೀ ನಾರಾಯಣಸ್ವಾಮಿಯವರು ಅವರ ಒಂದು ಹಳ್ಳಿಯಲ್ಲಿ ಆದ ಘಟನೆಗಳ ನಿದರ್ಶನವನ್ನು ಹೇಳಿದರು. ಸ್ಥಳದಲ್ಲಿ ಏನೋ ವಿಷಯ ನಡೆಯಿತು, ಪೋಲೀಸಿನವರಿರಲಿಲ್ಲ, ಇದ್ದಿದ್ದರೂ ಆ ಕೇಸನ್ನನ್ನುಸರಿಸಿ ಮಾಡಿದ ಕಾರ್ಯದಲ್ಲಿ ಸ್ವಲ್ಪ ಹೆಚ್ಚಿರಬಹುದು ಅಥವಾ ಕಡಮೆ ಇರಬಹುದು. ಇಂಥ ಸಂದರ್ಭಗಳನ್ನು ವಿವರಿಸಲು ಈ ಸಭೆಯ ಕಾಲವನ್ನು ಕಳೆಯಬಾರದು. ಒಂದು ವಿಚಾರವನ್ನು ಶ್ರೀ ಶ್ರೀನಿವಾಸಶೆಟ್ಟರು ಹೇಳಿದರು. ಒಬ್ಬ ಮನುಷ್ಯ, ಉದ್ಯೋಗದಲ್ಲಿರುವವರು, ಬರುತ್ತಾರೆ ಸಂಬಳವನ್ನು ಸ್ವೀಕರಿಸುತ್ತಾರೆ, ಮನೆಗೆ ಹೋಗುವಾಗ ಅವರು ಪತ್ತೆಯಿಲ್ಲವೆಂದು ಗೊತ್ತಾಗುತ್ತದೆ. ಆಗೇನು ಮಾಡಬೇಕು? ದೇವರ ದಯೆಯಿಂದ ಅವರು ಜೀವಂತರಾಗಿರುವುದರಿಂದ ನಮಗೆ ಸಂತೋಷ. ಈಗೇನೋ ಪೋಲೀಸರು ಮಾಡಿದುದೆಲ್ಲಾ ತಪ್ಪೆಂದು ಹೇಳಬಹುದು. ಆದರೆ ಅಂಥ ಸಂದರ್ಭದಲ್ಲಿ ಪೋಲೀಸರು ಮಾಡಬೇಕಾದ ಕೆಲಸವನ್ನು ಮಾಡಬೇಕೋ ಇಲ್ಲವೋ ? ಒಬ್ಬ ಮನುಷ್ಯ ಇದಕ್ಕಿದ್ದಹಾಗೆ ಕಾಣದಾದರೆ ಆಗ ಪೋಲೀಸರು ತಮ್ಮ ಕರ್ತವ್ಯ ಮಾಡುವುದು ತಪ್ಪೆ? All is well that ends well ಎನ್ನುವ ಹಾಗೆ ಎಲ್ಲವೂ ಸರಿಯಾದರೆ ತೊಂದರೆಯಿಲ್ಲ. ಆದರೆ ಬೇರೆ ರೀತಿಯಾಗಿದ್ದರೆ, ಕಷ್ಟವಾಗುತ್ತಿತ್ತು. ಇಂಥ ಮನುಷ್ಯ ಇಷ್ಟು ದಿವಸಗಳಿಂದ ಕಾಣೆಯಾಗಿದ್ದಾನೆ, ಸರ್ಕಾರ ಏನು ಮಾಡಿದ್ದೀರಿ ಎಂದು ನಮಗೆ ಅನೇಕ ಟೆಲಿಗ್ರಾಂಗಳು ಬರುತ್ತಿದ್ದುವು. ಈಗ ಎಲ್ಲ ಸರಿಯಾಗಿದೆ. ಹೀಗಿದ್ದರೂ ಮತ್ತೆ ಹಿಂದಕ್ಕೆ ನೋಡಿ ಇದು ತಪ್ಪು, ಅದು ತಪ್ಪು ಎಂದು ಹೇಳುತ್ತಾರೆ. ಆದರೆ ನಮಗೆ ಬಂದಿರತಕ್ಕ ಧರ್ಮಸಂಕಟವನ್ನು ನೋಡಬೇಕು.

7-30 P.M.

ಯಾರಾದರೂ ಆಗಿರಲಿ, ಈ ದಿವಸ ಅಧಿಕಾರದಲ್ಲಿದ್ದರೆ, ಒಬ್ಬ ಮನುಷ್ಯ ಕಣ್ಮರೆಯಾಗಿದ್ದಾನೆ, ಪತ್ತೆಯಿಲ್ಲ ಎಂದು ಯಾರಾದರೂ ಪದೇ ಪದೇ ಟೆಲಿಗ್ರಾಂ ಮಾಡಿ ತಿಳಿಸಿದರೆ ಆಗೇನು ಮಾಡುತ್ತಿದ್ದರು? ಪೋಲೀಸಿನವರು ಆಗ ಮಾಡುವ ಕೆಲಸವೇನು? ಕೇಸು ರಜಿಸ್ಟರು ಮಾಡಿ ಮುಂದಿನ ತನಿಖೆ ನಡೆಸಬೇಕೆ ಅಥವಾ ಸುಮ್ಮನಿರಬೇಕೆ ? ದಯವಿಟ್ಟು ಅನುಭವ ಪೂರ್ವಕವಾಗಿ ಇದನ್ನು ವಿಚಾರಮಾಡಬೇಕು. ಇಂಥ ವಿಚಾರಗಳಲ್ಲಿ ನಾವೂ ಕೂಡ ಸಾಕಷ್ಟು ವಿಚಾರ ಪೂರ್ಣವಾಗಿ ಕೆಲವು ವಿಷಯಗಳನ್ನು ಆಲೋಚಿಸುವುದು ಬಹಳ ಆವಶ್ಯ ಎಂದು ತಮ್ಮಲ್ಲಿ ಒಪ್ಪಿಸಿಕೊಳ್ಳುತ್ತಿದ್ದೇನೆ. ಸತ್ಯಾಂಶವನ್ನು ತಿಳಿಯಲು ಅನ್ವೇಷಣ ಮಾಡಬೇಕಾಗುತ್ತದೆ. ಪೋಲೀಸು ಅಧಿಕಾರಿಗಳು ಮಿತಿಮೀರಿ ಕಾರ್ಯಕ್ರಮ ಕೈಗೊಂಡಿದ್ದಾರೆ. ಒಬ್ಬ ಮನುಷ್ಯ ಇದ್ದಕ್ಕಿದ್ದ ಹಾಗೆ ಮಾಯವಾಗಿದ್ದಾನೆಂದು ಅಥವಾ ಯಾರಿಗಾದರೂ ವಿಶೇಷ ಅಪಘಾತವಾಗಿದೆಯೆಂದು ತಿಳಿದರೆ, ಆ ವಿಚಾರದಲ್ಲಿ ಸಾಕಷ್ಟು ಸತ್ಯಾಂಶವಿದೆಯೆಂದು ಕಂಡರೆ ಪೋಲೀಸಿನವರು ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಂಡರೆ ಅದನ್ನು ಟೀಕೆ ಮಾಡುವುದಾದರೆ ಅದಕ್ಕೇನು ಹೇಳಬೇಕು ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಸ್ವಾಮಿ, ಕಣ್ಮರೆಯಾಗಿರುವ ಮನುಷ್ಯನ ವಿಚಾರದಲ್ಲಿ ಮರ್ಡರ್ ಕೇಸ್ ಬುಕ್ ಮಾಡುವುದು ಸರಿಯೆಂಬುದು ತಮ್ಮ ಅಭಿಪ್ರಾಯವೆ ?

ಶ್ರೀ ಸಿ. ಎಂ. ಪೂಣಚ್ಚ.—ಹಾಗೆ ಊಹೆ ಮಾಡಿ ಮುಂದಿನ ತನಿಖೆ ಪ್ರಾರಂಭಿಸಬೇಕಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಕ್ರಿಮಿನಲ್ ಕೋಡ್ ಪ್ರಕಾರ ಆ ರೀತಿ ಮಾಡಲು ಅವಕಾಶವಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅದು ಸರಿಯೆಂದು ಹೇಳುವುದಾದರೆ ದುರ್ಮಾರ್ಗಕ್ಕೆ ಅವಕಾಶವಾಗುವುದಿಲ್ಲವೆ? ಕೆಲವು ಕಾಲದವರಿಗೆ ಕಣ್ಮರೆಯಾಗಿಟ್ಟು ಅನ್ಯಾಯ ಮಾಡಬಹುದಲ್ಲವೆ?

ಅಧ್ಯಕ್ಷರು.—ತಾವು ಅದನ್ನೆಲ್ಲಾ ಈಗ ಕೇಳಬಾರದು. ಕ್ಲಾರಿಫಿಕೇಷನ್ ಏನಾದರೂ ಬೇಕಾದರೆ ಕೇಳಿ.

ಶ್ರೀ ಸಿ. ಎಂ. ಪೂಣಚ್ಚ.—ಆಮೇಲೆ ನ್ಯಾಯಾಂಗ ಆಡಳಿತದ ಕೆಲವೊಂದು ವಿಧಾನಗಳನ್ನು ಪ್ರಸ್ತಾಪಿಸಿದ್ದಾರೆ. ಈಗ ಮಲ್ಲಪ್ಪ ಸಮಿತಿಯನ್ನು ನೇಮಕ ಮಾಡಿ ವರದಿ ತರಿಸಿದ್ದಾರೆ. ಆ ಸಮಿತಿಯ ಶಿಫಾರ್ಸಿನ ಮೇಲೆ ಅನೇಕ ವಿಷಯಗಳಲ್ಲಿ ಸರ್ಕಾರ ಕಾರ್ಯಕ್ರಮ ಕೈಕೊಂಡಿದೆ. ಇನ್ನೂ ಕೆಲವೊಂದು ವಿಚಾರಗಳಲ್ಲಿ ಸರ್ಕಾರ ಕೈಕೊಂಡಿಲ್ಲ. ಬಹುಶಃ ನವಮೈಸೂರಾದ್ದರಿಂದ ಆ ಒಂದು ಹಿನ್ನೆಲೆಯಲ್ಲಿ ಕೆಲವು ವಿಚಾರಗಳನ್ನು ಇನ್ನೂ ಪರಿಶೀಲಿಸಬೇಕಾಗಿದೆ. ಅಲ್ಲದೆ ವಿಸ್ತಾರವಾಗಿರುವ ಪ್ರದೇಶಗಳಿಗೆ ಏಕ ರೀತಿಯ ಕಾನೂನನ್ನು ಮಾಡಿ ಅನ್ವಯಿಸಿ ಕ್ರಮಪಡಿಸಬೇಕಾಗಿದೆ. ಹೀಗೆ ಯಾವ ಯಾವುದನ್ನು ಅನುಷ್ಠಾನಕ್ಕೆ ತರಬೇಕು, ಇರುವ ಕಾರ್ಯಕ್ರಮವನ್ನು ಹೇಗೆ ಮುಂದುವರಿಸಬೇಕು ಎಂಬ ವಿಷಯದಲ್ಲಿ ಸರ್ಕಾರ ಸೂಕ್ತಕ್ರಮ ಕೈಕೊಳ್ಳುತ್ತದೆ.

Sri Y. VEERAPPA.—Sir, the Hon'ble Minister has failed to reply about the point regarding the suspension of the Inspector General of Prisons.

Mr. SPEAKER.—It is not the question of failing in anything. The Hon'ble Minister has not yet finished his speech. If the Hon'ble Minister has not replied to any point, you can ask him about it at the end.

Sri G. N. PUTTANNA.—On a point of clarification, Sir. ಈಗ ನಮ್ಮ ಮಂತ್ರಿಗಳು ಹೇಳಿರುವುದನ್ನು ನೋಡಿದರೆ ಪೋಲೀಸಿನವರ ತಪ್ಪೇನೂ ಇಲ್ಲವೆಂದು ಅರ್ಥವಾಗುತ್ತದೆ. ಅದು ಅವರ ಅಭಿಪ್ರಾಯವೆ?

ಅಧ್ಯಕ್ಷರು.—ತಾವು ಹೇಗೆ ಬೇಕಾದರೂ ಅಭಿಪ್ರಾಯಪಡಬಹುದು. ಈಗ ಕ್ಲಾರಿಫಿಕೇಷನ್ ಏನಾದರೂ ಬೇಕಾದರೆ ಅದನ್ನು ಮಾತ್ರ ಕೇಳಿ.

ಶ್ರೀ ಸಿ. ಎಂ. ಪೂಣಚ್ಚ.—ಶ್ರೀ ಮಲ್ಲಪ್ಪ ಕಮಿಟಿಯವರ ಶಿಫಾರ್ಸುಗಳನ್ನು ಎಷ್ಟರ ಮಟ್ಟಿಗೆ ಅನುಷ್ಠಾನದಲ್ಲಿ ತರಬೇಕೆಂಬ ವಿಷಯ ಸರ್ಕಾರದ ಅವಗಾಹನೆಯಲ್ಲಿದೆ. ಆ ಪ್ರಕಾರ ಹೊಳೇನರಸೀಪುರದಲ್ಲಿಯೂ ಮತ್ತು ಹಗರೀ ಬೊಮ್ಮನಹಳ್ಳಿಯಲ್ಲೂ ಮಾನ್ಯಸದಸ್ಯರು ಸೂಚಿಸಿರುವಂತೆ ತಕ್ಕ ವ್ಯವಸ್ಥೆಗಳನ್ನು ಪೋಲೀಸ್ ಇಲಾಖೆಗೆ ಸಂಬಂಧ ಪಟ್ಟ ಹಾಗೆ ಏರ್ಪಡಿಸಬೇಕೆಂಬ ಇಚ್ಛೆ ಸರ್ಕಾರದ ಆಲೋಚನೆಯಲ್ಲಿದೆ. ಒಟ್ಟಿನಲ್ಲಿ ನಾನು ಆಗಲೇ ಹೇಳಿದ ಹಾಗೆ, ಒಂದು ಸಾಮ್ಯ ಹೇಳಿದಂತೆ ಅದನ್ನೇ ಹಗುರವಾಗಿ ಹೇಳಲಿಲ್ಲ. ಒಟ್ಟಿನಲ್ಲಿ ಪೋಲೀಸ್ ಇಲಾಖೆ ಕಸ ಗುಡಿಸುವ ಕೆಲಸ ಮಾಡುತ್ತಿದೆ. ಸ್ವಾಭಾವಿಕವಾಗಿ ಕಸ ಪರಕೆಗೆ ಅಂಟಿಕೊಂಡಂತೆ ಅವರಲ್ಲಿ ನ್ಯೂನತೆಗಳು ಕಂಡುಬಂದಿವೆ. ನ್ಯೂನತೆಗಳು ಅವರಲ್ಲಿ ಏನೂ ಇಲ್ಲ ಎಂದು ಎದೆ ತಟ್ಟಿಕೊಂಡು ಹೇಳುವುದಕ್ಕೆ ನಾನಂತೂ ಹೋಗುವುದಿಲ್ಲ. ಆದರೆ ಅವರಲ್ಲಿರುವ ಎಲ್ಲ ನ್ಯೂನತೆಗಳನ್ನೂ ಒಂದೇ ಸಾರಿ ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಅವೆಲ್ಲವೂ ಕೇವಲ ಟೀಕೆ ಸುರಿಮಳೆಗಳಿಂದ ಸರಿಹೋಗುತ್ತವೆಂದು ಮಾನ್ಯ ಸದಸ್ಯರು ತಿಳಿಯಕೂಡದು. ಅದು ಸರಿಹೋಗಲು ತಮ್ಮೆಲ್ಲರ ಬೆಂಬಲ, ಸಮಾಜ ಸಹಾಯ, ಮತ್ತು ಸರ್ಕಾರದ ಕರ್ತವ್ಯದಕ್ಷತೆ ಅತ್ಯಾವಶ್ಯಕ. ಪೋಲೀಸ್ ಆಡಳಿತದಲ್ಲಿ ಹೆಚ್ಚಿನ ಮಟ್ಟಿಗೆ ದಕ್ಷತೆಯನ್ನುಂಟುಮಾಡುವುದು ಸರ್ಕಾರದ ಕರ್ತವ್ಯ. ಕೆಲವು ಮಾನ್ಯ ಸದಸ್ಯರು ಹೊರಗಡೆಯಿಂದ ಐ.ಜಿ.ಪಿ.ಯವರನ್ನು ತಂದದ್ದು ಏಕೆ, ಇಲ್ಲಿ ಅಂತಹ ಸಮರ್ಥರು ಯಾರೂ ಇರಲಿಲ್ಲವೇ, ಅನಂತರ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದು ಏಕೆ ಎಂದು ವಾದ ಮಾಡಿದ್ದಾರೆ. ಮುಖ್ಯವಾಗಿ ಪೋಲೀಸ್ ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕು, ನಿಸ್ಪೃಹತೆ ಹೆಚ್ಚಬೇಕು, ಪೋಲೀಸ್ ಇಲಾಖೆಯ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯಬೇಕು. ಇವು ಎಲ್ಲರೂ ಒಪ್ಪುವ ವಿಷಯವಾಗಿದೆ. ಆದ್ದರಿಂದ ಸರ್ಕಾರ ಬಹಳ ಮಟ್ಟಿಗೆ ಪರಿಶ್ರಮದಿಂದ ಈ ಇಲಾಖೆಯನ್ನು ಮುಂದುವರಿಸಿ ಪೋಲೀಸ್ ಆಡಳಿತವನ್ನು ಉತ್ತಮಗೊಳಿಸುವುದಕ್ಕಾಗಿ ಅನೇಕ ಕೆಲಸ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಅದರಲ್ಲಿ ಯಾವ ರೀತಿಯ ಹಿಡಿತ ಇದ್ದಂತೆ ಕೆಲಸಮಾಡುವುದಿಲ್ಲ. ಸ್ವಲ್ಪ ಮಟ್ಟಿಗೆ ಒಂದು ಕೈ ಹೆಚ್ಚಿದಂತೆ ತೀವ್ರ ಕ್ರಮವನ್ನು ಬೇಕಾದರೂ ಕೂಡ ಕೈಕೊಳ್ಳುವುದಕ್ಕೆ ಸರ್ಕಾರದ ಪರವಾಗಿ ಹಿಂಜರಿಯುವುದಿಲ್ಲ ಎನ್ನುವ ಭರವಸೆಯನ್ನು ನಾನು ಕೊಡಬಲ್ಲೆ. ಸಾಧಾರಣವಾಗಿ ಇಂತಹ ಪ್ರಶ್ನೆಗಳನ್ನು ವಿಮರ್ಶಿಸುವಾಗ ಕೆಲವರು ಬಡ ಬೋರೇಗೌಡನ ಹಣವನ್ನು ಹೀಗೆಲ್ಲಾ ಖರ್ಚು ಮಾಡುತ್ತಿದ್ದಾರೆಂದು ಸರ್ಕಾರದ ಮೇಲೆ ಆರೋಪಣೆಮಾಡುತ್ತಾ ಹೇಳುವುದು ಅದು ಒಂದು ಮಾತಿನ ವೈಖರಿಯಾಗುತ್ತದೆ. ಆ ರೀತಿ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರೆಂದು ಸ್ವಲ್ಪ ಮಟ್ಟಿಗೆ ನನಗೆ ಕಂಡುಬಂತು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾವೂ ಸಹ ಸ್ವಲ್ಪ ಜವಾಬ್ದಾರಿಯುಳ್ಳವರು ಎಂಬುದನ್ನು ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಸಿ. ಎಂ. ಪೂಣಚ್ಚ.—ನಾನೂ ಸಹ ಹೆಚ್ಚಿನ ಜವಾಬ್ದಾರಿಯಿಂದಲೇ ಹೇಳುತ್ತಾ ಇರುವುದು. ಸಾಧಾರಣವಾಗಿ ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಕಾಂಗ್ರೆಸ್ಸಿನವರು ಹೀಗೆ ಮಾಡಿದ್ದಾರೆ, ಬಿಳೀ ಟೋಪಿಯವರು ಹೀಗೆ ಮಾಡಿದ್ದಾರೆ, ಶ್ವೇತ ವಸ್ತ್ರಧಾರಣೆ ಮಾಡುವವರು ಹೀಗೆ ಮಾಡಿದ್ದಾರೆ ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಇವು ಒಂದು ಹಾಸ್ಯ ಪ್ರಚೋದನೆಯನ್ನುಂಟು ಮಾಡುವಂಥ ಅಭಿಪ್ರಾಯಗಳೆಂದು ನನಗೆ ವ್ಯಕ್ತವಾಗಿದೆ. ಅದಕ್ಕೋಸ್ಕರ ನಾನು ಅತ್ಯಂತ ವಿಷಾದ ಪಡುತ್ತೇನೆ.

Sri M. C. NARASIMHAN.—On a point of clarification. I would like to know from the Chair whether the Hon'ble Minister is going to reply to all the cut motions we have tabled or is he confining himself to the several points raised here. Unless there is an answer in respect of each cut motion it becomes difficult for us to finally vote for the Demand.

Mr. SPEAKER.—What the Hon'ble Minister is going to reply I cannot say. He is just on his legs. May be he is trying to give a reply to the remarks offered in this House. May be also he is replying to the cut motions.

Sri M. C. NARASIMHAN.—It is a matter for ruling by the Chair. The reason is this. In respect of certain points raised by members, he may or may not choose to reply. Supposing cut motions had been moved, he is bound to reply to them. Otherwise, how can the grants being voted upon arise?

Mr. SPEAKER.—He is under a wrong impression. Cut motions are not moved in this House. The Hon'ble Minister cannot be compelled to give a reply to the cut motions. Some of them do form substantial cut motions and he may reply to them. Therefore, he need not raise this sort of point of order or clarification. I told the Hon'ble Members that even if they did not move the cut motions, they might offer remarks not only on the demand but also on the cut motions which they had tabled. Whatever is said in the House will be replied to.

ಶ್ರೀ ಸಿ. ಎಂ. ಪೂಣಚ್ಚ.—ಈ ರೀತಿಯಾಗಿ ಸರಕಾರದ ಒಂದು ಆಡಳಿತದ ವಿಷಯವನ್ನು ವ್ಯಕ್ತ ಮಾಡುವಾಗ ಕಾಂಗ್ರೆಸ್ ಪಕ್ಷದವರೂ ಕೂಡ ಒಂದು ಅಗೌರವಪಾದಂತಹ ಮಾತುಗಳನ್ನು ವ್ಯಕ್ತ ಮಾಡಿದ್ದನ್ನು ನೋಡಿ ವಿಷಾದವಾಯಿತು. ನಾನು ಸ್ವಲ್ಪಮಟ್ಟಿಗೆ ವ್ಯಸನಚಿತ್ತದಿಂದ ಕೇಳಿದೆ. ಬಹುಶಃ ಆ ಪ್ರಕಾರ ಹೇಳದೆ ಇದ್ದಿದ್ದರೆ ಈ ಸಭೆಯ ಗೌರವ ಇನ್ನೂ ಹೆಚ್ಚುತ್ತಿತ್ತು ಎಂದು ನನ್ನ ಅಭಿಪ್ರಾಯ. ಇರಲಿ. ಇವೊತ್ತು ಕಾಂಗ್ರೆಸ್ಸು ಸಂಸ್ಥೆ ಪೋಲೀಸು ದಳವನ್ನು ಹಾಳುಮಾಡಲಿಕ್ಕೆ ಹೊರಟಿಲ್ಲ. ಹೆಚ್ಚು ಗೌರವಯುತವಾಗಿ ನಡೆಯುತ್ತಿದೆ. ಬಹಳ ಹಿಡಿತ ದಿಂದ ನಾನು ಮಾತನಾಡುತ್ತಿದ್ದೇನೆ. ಸುಮ್ಮನೆ ಮಾತನಾಡುವ ಮನುಷ್ಯನಲ್ಲ. ಆಮೇಲೆ ಕಾಂಗ್ರೆಸ್ಸು ಸಂಸ್ಥೆ ವಿಷಯದಲ್ಲಿ . . . .

ಶ್ರೀ ಜೆ. ಎನ್. ಪುಟ್ಟಣ್ಣ.—ಸಂಸ್ಥೆಯ ವಿಚಾರ ವಾಗಿ ನಾವು ಯಾರೂ ಮಾತನಾಡಲಿಲ್ಲ.

ಅಧ್ಯಕ್ಷರು.— "ಕಾಂಗ್ರೆಸ್ಸಿಗರು" ಎಂದು ಹೇಳಿದರು.

ಶ್ರೀ ಸಿ. ಎಂ. ಪೂಣಚ್ಚ.—ಹೌದು, ಕಾಂಗ್ರೆಸ್ಸಿಗರು. Sir, I am prepared for a reference to the Reporter's notes.

Mr. SPEAKER.– I do not remember to have heard a reference being made to the Congress organisation. However, if you have taken down notes, that must be correct.

Sri C. M. POONACHA.—I have attempted to follow the discussion.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತಾವು ಅಪ್ಪಣೆ ಕೊಟ್ಟರೆ ಹಿಂದೆ ಶ್ರೀ ವೀರಣ್ಣಗೌಡರು ಮತ್ತು ವಿ. ವೆಂಕಟಪ್ಪನವರು ಏನು ಹೇಳಿದ್ದಾರೆ ಎಂಬುದನ್ನು ಹಿಂದಿನ ಪ್ರೊಸೀಡಿಂಗ್ಸ್‌ನಲ್ಲಿರುವುದನ್ನು ತಂದು ಇಲ್ಲಿ ತಿಳಿಯಪಡಿಸುತ್ತೇನೆ.

ಅಧ್ಯಕ್ಷರು.—ನಮ್ಮಲ್ಲಿ ಏನೂ ಒಂದು ನೀತಿ ನಿಯಮವೇ ಇಲ್ಲವೇನು? ಕ್ಲಾರಿಫಿಕೇಷನ್ನು, ಇನ್‌ಫರ್ಮೇಷನ್ನನ್ನು ಬೇಕಾದರೆ ಕೇಳಿ. ಆದರೆ ತಾವು ಹೀಗೆ ಇಂತಹದನ್ನು ತೆಗೆದುಕೊಂಡು ಬಂದು ತೋರಿಸುತ್ತೇನೆ ಎಂದು ಹೇಳುವುದು ಸರಿಯಾದುದಲ್ಲ ಹೌಸಿನಲ್ಲಿ ಒಂದು ತರಹ ಡಿಗ್ನಿಟಿ ಇರಬೇಕು.

Sri C. M. POONACHA.—I have tried to follow him yesterday when he said that Congressmen shielded people who committed to offences and the Police were under their influence.

ಈ ಪ್ರಕಾರ ಕೆಲವು ಟೀಕೆಗಳು ಬಂದಿವೆ. ಆದ್ದರಿಂದ ಅವರು ಆ ವಿಷಯವನ್ನು ಹೇಳದೆ ಇದ್ದಿದ್ದರೆ ಆ ಪ್ರಕಾರ ಆಗುತ್ತಿತ್ತು, ಈ ಸಭೆಯ ಕಾರ್ಯಕಲಾಪಗಳು ಇನ್ನೂ ಹೆಚ್ಚು ಗೌರವಯುತವಾಗಿರುತ್ತಿತ್ತೆಂದು ನಾನು ಹೇಳಿದೆ.

ಅಲ್ಲದೆ ಕೆಲವು ಸದಸ್ಯರು ಹೇಳಿದರು. "ಮಹಾತ್ಮಾಜೀಯವರು ಸ್ವರ್ಗದಲ್ಲಿದ್ದಾರೆ; ಇಲ್ಲಿನ ವಿದ್ಯಮಾನಗಳನ್ನು ನೋಡಿ ಈ ಹೊತ್ತು ಅವರು ಏನನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದಾರೋ? ಹರ್ಷಚಿತ್ತರಾಗಿದ್ದಾರೋ ಅಥವಾ ದುಃಖಚಿತ್ತರಾಗಿದ್ದಾರೋ"? ಎಂದು. ರಾಮರಾಜ್ಯದಂತಿದೆಯೆಂದು ಹೇಳುವುದು ಬಹಳ ಯೋಗ್ಯವಾಗಿದೆ. ನಮಗದು ಪವಿತ್ರವಾದ ಭಾವನೆಗಳನ್ನು ಉತ್ಪನ್ನಮಾಡುತ್ತದೆ. ಮಾನ್ಯ ಸದಸ್ಯರು ಇದನ್ನು ಮನಸ್ಸಿನಲ್ಲಿಟ್ಟುಕೊಂಡು ರಾಮರಾಜ್ಯದಂತಿದೆಯೇ ಎಂಬ ಮಾತನ್ನು ಎತ್ತಿದರು. ಆ ದೃಷ್ಟಿಯಿಂದ ನಾನು ಹೇಳುವುದಾದರೆ, ಈಗಿರುವ ರೀತಿ ನಿಜವಾಗಿ ರಾಮರಾಜ್ಯವೆಂಬ ಸದಭಿಪ್ರಾಯವನ್ನೇ ನಮಗೆ ಉಂಟುಮಾಡುವಂತಿದೆ. ನಾವದನ್ನು ಇಂದು ಪ್ರತ್ಯಕ್ಷವಾಗಿಯೇ ಕಾಣುತ್ತಿದ್ದೇವೆ. ಈಹೊತ್ತು ಹಿಂದೂಸ್ಥಾನದಲ್ಲಿ ಪ್ರಜಾಪ್ರಭುತ್ವದ ಮೂಲ ತತ್ವಗಳನ್ನು ಎಷ್ಟು ಚೆನ್ನಾಗಿ ನಡೆಯುತ್ತಾ ಬಂದಿದೆಯೆಂದು ಈ ಜನಾಂಗದ ಹಿರಿಮೆ ಈ ಹೊತ್ತು ಪ್ರಪಂಚದಲ್ಲಿ, ಅಂತರರಾಷ್ಟ್ರದಲ್ಲಿ ಪ್ರತೀತಿಯಾಗಿದೆ. ಇದು ರಾಮರಾಜ್ಯ ಹೇಗಾಯಿತು ಎಂದು ನನ್ನನ್ನು ಕೇಳಿದರೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. ರಾಮರಾಜ್ಯದಲ್ಲಿ ಹೇಳುತ್ತಿದ್ದರು, ಹುಲಿ, ಹಸು, ಗೋವು ಎಲ್ಲವೂ ಒಂದಾಗಿ ಮೇಯುತ್ತಿದ್ದುವು ಎಂದು. ಇದನ್ನೇ ನಾನು ರಾಜಕೀಯ ದೃಷ್ಟಿಯಿಂದ ಸ್ವಲ್ಪ ಯೋಚನೆ ಮಾಡುವುದಾದರೆ, ನೂತನವಾಗಿ ಸ್ವಾತಂತ್ರ್ಯವನ್ನು ಪಡೆದ ಈ ಜನಾಂಗದ ಆಡಳಿತದ ರೀತಿನೀತಿ ಅದೇರೀತಿಯಾಗಿ ನಡೆದಿದೆ. ಆದ್ದರಿಂದ ನಮ್ಮ ದಿವಂಗತರಾದ ಲೋಕನಾಯಕರುಗಳೂ ಮತ್ತು ನಾವೆಲ್ಲರೂ ಹರ್ಷ ಚಿತ್ತರಾಗಿರುವುದು ಸಹಜವೇ. ಏಕೆಂದರೆ ಈ ಸ್ವಾತಂತ್ರ್ಯದ ದೆಶೆಯಲ್ಲಿರುವಾಗ ಯಾವ ಕಮ್ಯೂನಿಸ್ಟ್ ಸರ್ಕಾರ ತಾನೆ ವೋಟಿನ ಪೆಟ್ಟಿಗೆಯ ಮೂಲಕವಾಗಿ ತಮ್ಮಗಳನ್ನು ಮತ್ತು ನಮ್ಮಗಳನ್ನು ಅಧಿಕಾರಕ್ಕೆ ತಂದು ಇಲ್ಲಿ ಕೂಡಿಸಬಲ್ಲದು? ಈ ಅಧಿಕಾರಸ್ಥಾನದಲ್ಲಿ, ಆ ಹುಲಿ—ಹಸು ಸಾಮ್ಯದಲ್ಲಿ ಪ್ರತ್ಯಕ್ಷವಾಗಿ ಕೂಡಿ, ಸರ್ಕಾರವನ್ನು ನಡೆಸುತ್ತಿರುವುದರಿಂದ ರಾಮರಾಜ್ಯಸ್ಥಾಪನೆಯಾಗಿದೆ ಎಂದು ತಿಳಿದುಕೊಳ್ಳುವುದು ತಪ್ಪಲ್ಲ. ಅದನ್ನು ನಾವೆಲ್ಲರೂ ಮನಗಂಡು

(SRI C. M. POONACHA)

ಅದಕ್ಕನುಸಾರವಾಗಿ ನಡೆದುಕೊಳ್ಳುವುದು ಸೂಕ್ತವೆಂದು ಹೇಳುತ್ತೇನೆ. ಕಾಂಗ್ರೆಸ್ ಎಂಬ ಸಂಸ್ಥೆ ರಾಜಕೀಯದಲ್ಲಿ ಅಲ್ಪಸ್ವಲ್ಪ ಕೆಲಸಮಾಡಿ ಇಷ್ಟರ ಮಟ್ಟಿಗೆ ಆಡಳಿತ ನಡೆಸುವಂಥಾದ್ದಾಗಿ, ಪಂಚಶೀಲದ ಅರ್ಥವೆಲ್ಲವನ್ನೂ ತನ್ನ ಜೀವಿತದಲ್ಲಿ ಅಡಗಿಸಿಕೊಂಡಿದೆಯಲ್ಲಾ ಎಂದು ನಾನು ಸಂತೋಷಿಸುತ್ತೇನೆ. ಅದರಲ್ಲೂ ಕೆಲವು ಎದುರುಪಕ್ಷದ ಮುಂದಾಳುಗಳು—(ವಿರೋಧಪಕ್ಷವೆಂದು ನಾನು ಹೇಳಬಯಸುವುದಿಲ್ಲ, ಎದರುಪಕ್ಷವೆಂದು ಹೇಳುತ್ತೇನೆ; ಹಾಗೆಯೇ ಅವರನ್ನು ಮುಖಂಡರೆನ್ನುವುದಿಲ್ಲ, ಮುಂದಾಳುಗಳನ್ನುತ್ತೇನೆ—ಕಾರಣ ಆ ಪದಗಳಲ್ಲಿ ಸ್ವಲ್ಪ ಅರ್ಥವ್ಯತ್ಯಾಸವಿದೆ.—ಎದರುಪಕ್ಷದ ಕೆಲವು ಮುಂದಾಳುಗಳು ಶ್ರೀ ಮುಕ್ಕಣ್ಣಪ್ಪನವರು, ಡಾ|| ನಾಗೂರ್ ಅವರು, ಶ್ರೀ ಬಿ. ಕೆ. ಪುಟ್ಟರಾಮಯ್ಯನವರು ಎಲ್ಲರೂ ತಾವು ಜೈಲಿನಲ್ಲಿದ್ದರೆಂದೂ, ತಾವೂ ಕಾಂಗ್ರೆಸ್ಸಿನಲ್ಲಿ ಹಿಂದೆ ಇದ್ದರೆಂದೂ ಹೇಳಿ ತಮ್ಮ ಹಿರಿಮೆಯನ್ನು ಸೂಚಿಸಿದರು. ಅಂದರೆ ಕಾಂಗ್ರೆಸ್ ಎನ್ನುವಂಥ ಸಿಂಧುವಿನಿಂದ ಹೊರಟಂಥ ಬಿಂದುಗಳೇ ಇಂದು ಎದುರುಪಕ್ಷಗಳಾಗಿವೆ ಅಷ್ಟೆ. ಈ ರೀತಿಯಾದಂಥ ರಾಜಕೀಯ ಬುನಾದಿಯನ್ನು ಹಾಕಿಕೊಂಡಿರತಕ್ಕ ಕಾಂಗ್ರೆಸ್ ಸಂಸ್ಥೆ ಒಂದು ಆದರ್ಶ ಸಂಸ್ಥೆಯೆಂದು ನಾನು ಹೇಳಲು ಸಂತೋಷಿಸುತ್ತೇನೆ. ದೇಶಕ್ಕೆ ಸ್ವರಾಜ್ಯವನ್ನು ತಂದುಕೊಟ್ಟದ್ದು ಕಾಂಗ್ರೆಸ್ಸು. ದೇಶಕ್ಕೆ ಯೋಗ್ಯವಾದ ರಾಜಕೀಯ ಬುನಾದಿಯನ್ನು ಹಾಕಿಕೊಟ್ಟಿರತಕ್ಕದು ಕಾಂಗ್ರೆಸ್ಸು. ದೇಶದಲ್ಲಿ ಕ್ರಾಂತಿರಹಿತವಾದಂಥ . . . .

(There was a loud uproar from Opposition quarters)

MR. SPEAKER.—Is he not entitled to his views? I cannot understand this attitude. Hon'ble Member Sri Kenchappa is entitled to his views, as the Hon'ble Minister is entitled to his. After all, unless we tolerate each other in this House, it will be very difficult to carry on the parliamentary form of democracy. I would request the Hon'ble Members to tolerate the views of each other. If they want to raise a point of clarification, or point of order or information, I can understand that.

If any member wants to rise on a point of clarification or point of order or information, I will give him a chance.

ಶ್ರೀ ಕೆ. ಕೆಂಚಪ್ಪ.—ಈಗ ನಾನು ಮಂತ್ರಿಗಳನ್ನು ಕೇಳಬೇಕೆಂದಿರತಕ್ಕ ಕ್ಲಾರಿಫಿಕೇಷನ್ ಏನೆಂದರೆ, ಅವರೀಗತಾನೆ ಹೇಳಿದರು "ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವನ್ನು ತಂದವರು ಕಾಂಗ್ರೆಸ್ಸಿನವರು" ಎಂದು. ಆದರೆ ಅದು ಸರಿಯಾದಂಥ ಹೇಳಿಕೆಯಲ್ಲ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನು ತಂದವರು ಹಿಂದೂಸ್ಥಾನದ ಜನಾಂಗ—ಕಾಂಗ್ರೆಸ್‌ಸಂಸ್ಥೆಯಲ್ಲ ಎಂದು ನಾನು ಹೇಳುತ್ತೇನೆ. ಆದರೆ ಈ ಮಾತುಗಳೆಲ್ಲ ಹಾಗಿರಲಿ. ಈಗ ಇಲ್ಲಿ ನಡೆಯುತ್ತಿರುವ ಬಡ್ಜೆಟ್ ಚರ್ಚೆಗೂ ಮತ್ತು ಹಿಂದೂಸ್ಥಾನಕ್ಕೆ ದೊರೆತ ಸ್ವಾತಂತ್ರ್ಯಕ್ಕೂ ಏನು ಸಂಬಂಧವಿದೆ ಎಂಬುದನ್ನು ಮಾನ್ಯಮಂತ್ರಿಗಳು ತಿಳಿಸಲಿ.

ಅಧ್ಯಕ್ಷರು.—ಆ ರೀತಿ ಅವರು ಹೇಳುತ್ತಾರೆ. ಹಾಗೆ ಅವರು ಹೇಳಬಹುದು. ನೀವು ಬೇಕಾಗಿದ್ದರೆ ಕಾಂಗ್ರೆಸ್ ಸ್ವಾತಂತ್ರ್ಯ ತರಲಿಲ್ಲ ಎಂದು ಹೇಳಿ.

ಶ್ರೀ ಕೆ. ಕೆಂಚಪ್ಪ.—ಆ ಮಾತು ಹೋಗಲಿ. ಇಲ್ಲಿ ನಡೆಯುತ್ತಿರುವ ಬಡ್ಜೆಟ್ ಭಾಷಣಕ್ಕೂ ಮತ್ತು ಆ ಸ್ವಾತಂತ್ರ್ಯಕ್ಕೂ ಏನು ಸಂಬಂಧವಿದೆ? ಇದಕ್ಕೂ ಅದಕ್ಕೂ ಯಾವ ರೀತಿ ರೆಲವೇನ್ಸಿಯಿದೆ ಎನ್ನುವುದನ್ನು ತಾವೀಗ ತಿಳಿಸಿದರೆ ಸಾಕು.

MR. SPEAKER.—Whether it is relevant or not is nor the concern of any member of this House; it is the concern of the Speaker.

ಶ್ರೀ ಕೆ. ಕೆಂಚಪ್ಪ.—ಈ ರೀತಿ ಎಕ್ಸ್‌ಪ್ಲನೇಷನ್ ಕೇಳುವುದಕ್ಕೆ ನಮಗೂ ಹಕ್ಕಿದೆ.

ಅಧ್ಯಕ್ಷರು.—ಅದು ಇರೆಲೆವೆಂಟ್ ಎಂದು ಹೇಳತಕ್ಕ ಹಕ್ಕು ತಮಗಿಲ್ಲ. ಆ ವಿಚಾರದಲ್ಲಿ ತಾವು ನನ್ನನ್ನು ಕೇಳಿ. ಅದು ರೇಲವೆಂಟೇ ಅಲ್ಲವೇ ಎಂಬುದಕ್ಕೆ ನಾನು ಉತ್ತರ ಹೇಳುತ್ತೇನೆ.

SRI Y. VEERAPPA.—Mr. Speaker, I rise to a point of order. Can the Minister refer here on the floor of the House, and say that it is only the Congress that secured independence? I submit that this is not the propaganda field to canvas for the Congress organisation.

MR. SPEAKER.—Whether certain remarks made by an Hon'ble Member are relevant or not should be solely the concern of the Chair. I have been saying that the Minister is entitled to have his views. After all, other members may say that it is not the Congress that brought independence to the country.

SRI Y. VEERAPPA.—This is not the forum.

MR. SPEAKER.—I know. I have said already that I will see whether certain remarks are relevant or not. Hon'ble Members need not be in an anxious mood. I know the Hon'ble Members on the other side have their own views. I will respect the views of the Opposition as well as the Party in power.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ತಂದಂಥ ಯಾವ ಕಾಂಗ್ರೆಸ್ ಸಂಸ್ಥೆಯಿದೆಯೋ ಆ ಸಂಸ್ಥೆಯ ಅಧಿಪತಿಗಳಾಗಿದ್ದಂಥ ಮಹಾತ್ಮಾಗಾಂಧಿಯವರೇ ಆ ಸ್ವರಾಜ್ಯ ಬಂದ ಕೂಡಲೇ ಈ ಕಾಂಗ್ರೆಸ್ ಸಂಸ್ಥೆಯನ್ನು ಡಿಸಾಲ್ವ್ ಮಾಡಬೇಕೆಂದು ಹೇಳಿದ್ದಾರೆಂಬುದು ಸುಳ್ಳೋ ನಿಜವೊ?

ಶ್ರೀ ಜಿ. ವೆಂಕಟೇಗೌಡ.—ಸ್ವಾಮಿ ಮಂತ್ರಿಗಳು ಈಗ ತಾನೆ ಹುಲಿ ಮತ್ತು ಆಕಳು ಎರಡೂ ಒಂದಾಗಿರುತ್ತವೆಂಬ ಸಾಮ್ಯವನ್ನು ಎತ್ತಿದ್ದಾರೆ. ಇಲ್ಲಿ ಹುಲಿಯಾ

ವುದು, ಆಕಳಾವುದು ಎಂಬುದನ್ನು ಅವರೀಗ ತಿಳಿಸಬೇಕು. ಈ ರೀತಿಯ ಒಂದು ಸಂಬಂಧವನ್ನು ಅವರೀಗ ಹೇಗೆ ಈ ಕಾಂಗ್ರೆಸ್ ಸರ್ಕಾರಕ್ಕೂ ಮತ್ತು ಕಮ್ಯೂನಿಸ್ಟ್ ಸರ್ಕಾರಕ್ಕೂ ಕಲ್ಪಿಸಿದರು ?

ಅಧ್ಯಕ್ಷರು.—ಮಂತ್ರಿಗಳು ಸ್ವತಂತ್ರ ಭಾರತವನ್ನು ರಾಮರಾಜ್ಯ ಎಂದು ಹೇಳಿದ್ದಾರೆ. ಅದನ್ನೇ ನೀವು ಬೇಕಾಗಿದ್ದರೆ ಇದು ರಾಮರಾಜ್ಯವಲ್ಲ, ರಾವಣ ರಾಜ್ಯ ಬಂದಿದೆ ಎಂದು ಬೇಕಾದರೆ ಹೇಳಬಹುದು.

ಶ್ರೀ ಸಿ. ಎಂ. ಪೂಣಚ್ಚ.—ಆ ಪ್ರಕಾರವಾಗಿ ನಾನು ಬಹಳ ತುಂಬಿದ ಹೃದಯದಿಂದ, ಸಂತೋಷದಿಂದ, ಈ ದಿನ ಹಿಂದೂಸ್ಥಾನದಲ್ಲಿ ಪ್ರತಿಯೊಬ್ಬನೂ ನಮ್ಮ ಸಂಸ್ಥಾನದಲ್ಲಿ ದಕ್ಷಿಣ ಹಿಂದೂಸ್ಥಾನದ ಪರ್ಯಾಯದಲ್ಲಿ ಆಗುತ್ತಾ ಇರುವಂಥ ಕೆಲವು ರಾಜಕೀಯ ವಿಷಯಗಳನ್ನು ನೋಡುತ್ತಾ ಇದ್ದಾನೆ ಎಂದು ಹೇಳುತ್ತೇನೆ. ಯಾವುದೇ ರೀತಿಯಿಂದ ಇವೊತ್ತು ನಮ್ಮ ದೇಶ ಬೇರೆ ಒಂದು ತರಹದ ಅರಾಜಕತೆಯ ಕಡೆಗೆ ಹೋಗುತ್ತಾ ಇದೆಯೋ ಎಂದು ಕೇಳಿದ್ದೀ ಆದರೆ ಆ ರೀತಿ ಇಲ್ಲ. ಇವೊತ್ತು ಸಕಾರಣವಾದ, ಕಾನೂನು ಬದ್ಧವಾದ ಶೀಲಯುಕ್ತವಾದ ಸರ್ಕಾರದ ಆಡಳಿತದ ಪ್ರಗತಿ ಎಲ್ಲಾ ಕಡೆಗಳಲ್ಲೂ ಚೆನ್ನಾಗಿ ನಡೆಯುತ್ತಾ ಇದೆ. ಆ ದೃಷ್ಟಿಯಿಂದ ಬಹಳ ಸಂತೋಷದಿಂದ ನಾನು ಈ ಅಭಿಪ್ರಾಯವನ್ನು ಸಭೆಯ ಮುಂದೆ ಇಡುತ್ತಾ ಇದ್ದೇನೆ.

ಇನ್ನು ಕೊನೆಯದಾಗಿ ಹೇಳುವಂಥಾದ್ದು, ಮಾನ್ಯ ಸದಸ್ಯರು ಅನೇಕ ರೀತಿಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನೆಲ್ಲಾ ನಾನು ಗುರುತು ಹಾಕಿಕೊಂಡಿದ್ದೇನೆ. ಅವನ್ನು ಪರೀಕ್ಷೆಮಾಡಿ, ಪರಿಶೀಲನೆ ಮಾಡಿ ಯುಕ್ತವಾದಂಥ ಕಾರ್ಯನೀತಿಯನ್ನು ಕೈಕೊಂಡು ಪೋಲೀಸ್ ಇಲಾಖೆ, ಜೈಲು ಇಲಾಖೆ ಹಾಗೂ ನ್ಯಾಯಾಂಗಕ್ಕೆ ಸಂಬಂಧಪಟ್ಟ ವಿಷಯಗಳು ಇನ್ನೂ ವಿಶೇಷವಾಗಿ, ಸುಸೂತ್ರವಾಗಿ, ಯಶಸ್ವಿಯಾಗಿ ನಡೆಯುವಂತೆ ಮಾಡಲಿಕ್ಕೆ ಸರ್ಕಾರ ಪ್ರಯತ್ನಮಾಡುತ್ತದೆ ಎಂದು ಹೇಳುವಂಥ ಭರವಸೆಯನ್ನು ಕೊಡಬಲ್ಲೆ. ಹಾಗೂ ಪೋಲೀಸ್‌ನವರ ವಿಷಯವಾಗಿ ಒಂದು ಮಾತು ಹೇಳಿಯೇ ಮುಗಿಸುವುದು. ಅದೇನೆಂದರೆ ಬಡ್ಜೆಟ್ ಅನ್ನು ನಾವು ಚರ್ಚೆಮಾಡುತ್ತಾ ಇದ್ದೇವೆ. ಸಾಧಾರಣವಾಗಿ ಇಂಗ್ಲೀಷ್‌ನಲ್ಲಿ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ಏನು ಹೇಳುತ್ತಾರೆ ಎಂದರೆ "If you take care of the pies the rupees will take care of themselves" ಅದೇ ಒಂದು ಹಿನ್ನೆಲೆಯಿಂದ ಈ ಆಡಳಿತದಲ್ಲಿ ಪೋಲೀಸಿನ ಮಟ್ಟಿಗೆ ಹೇಳುವಂತಾದ್ದಾದರೆ "If you take care of the Police forces the State will take care of itself" ಎಂದು ಹೇಳಿ ಈ ಭಾಷಣವನ್ನು ಮುಗಿಸುತ್ತೇನೆ.

Sri Y. VEERAPPA—The Hon'ble Minister has not replied about the suspension of Inspectors. Now, I want to draw your attention to know whether he is going to reply or not.

Sri C. M. POONACHA.—Sir, the matter is under departmental enquiry and at this stage, it would not be fair either to the Government or to the officers concerned to discuss the matters relating to that particular affair and it may not be further pursued.

Sri C. J. MUCKANNAPPA.—May I know the intention of the Government about the reorganisation of the Police Department ?

Sri C. M. POONACHA.—The intention is to improve matters.

Mr. SPEAKER.—The question is :

"That a sum not exceeding Rs. 69,39,100 be granted to the Governmeut to defray the charges which will come in course of payment during the year ending 31st day of March 1958, in respect of 'Administration of Justice'."

The motion was adopted.

Mr. SPEAKER.—The question is;

"That a sum not exceeding Rs. 37,35,000 be granted to the Government to defray the charges which will come in course of payment during the year ending 31st day of march 1958, in respect of 'Jails and Convict Settlements'."

The motion was adopted.

Mr. SPEAKER.—The question is :

"That a sum not exceeding Rs. 3,26,64,600 be granted to the Government to defray the charges which will come in course of payment during the year ending 31st day of March 1958, in respect of 'Police'."

The 'Ayes' have it.

Sri M. C. NARASIMHAN.—I demand a poll.

Mr. SPEAKER.—The question is:

"That a sum not exceeding Rs. 3,26,64,600 be granted to the Government to defray the charges which will come in course of payment during the year ending 31st day of March 1958, in respect of 'Police'."

The motion was adopted; 64 voting for and 30 voting against.

Mr. SPEAKER.—The House will now rise for the day and meet at 2 P.M. tomorrow.

The House adjourned at Eight of the Clock to meet again at Two of the Clock on Thursday, the 18th July 1957.

WD 3599—GPB—900—23-11-1957